ಪ್ರಜಾವಾಣಿ ಶನಿವಾರ • ಆಗಸ್ಟ್ 31, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







150 ಅಡಿ ಎತ್ತರದ ಅಂಬೇಡ್ಕರ್ ಪ್ರತಿಮೆ ನಿರ್ಮಿಸಲು ಆಗ್ರಹ



ಬೆಂಗಳೂರು: ಬಿ.ಆರ್. ಅಂಬೇಡ್ಕರ್ ಅವರ 150 ಅಡಿ ಎತ್ತರದ ಪ್ರತಿಮೆಯನ್ನು ನಗರದಲ್ಲಿ ನಿರ್ಮಿಸಬೇಕು ಎಂದು ಅನೇಕಲ್ ಅಂಬೇಡ್ಕರ್ ಯುವಕರ ಸಂಘ ಆಗ್ರಹಿಸಿದೆ.

ಅಸ್ಪೃಶ್ಯತೆ, ಅಸಮಾನತೆ, ಅನ್ಯಾಯ, ಕಂದಾಚಾರ, ದೌರ್ಜನ್ಯ, ದಬ್ಬಾಳಿಕೆಗಳಿಂದ ಕೂಡಿದ್ದ ಸಮಾಜಕ್ಕೆ ಸಮಾನತೆಯ ಸಂವಿಧಾನವನ್ನು ನೀಡಿ ದೇಶದ ಗೌರವ ಹೆಚ್ಚಿಸಿದ ಅಂಬೇಡ್ಕರ್ ಅವರ ಪ್ರತಿಮೆಯನ್ನು ನಿರ್ಮಿಸಲು ಸರ್ಕಾರ ಸೂಕ್ತ ಜಾಗವನ್ನು ಗುರುತಿಸಿ, ಕ್ರಮ ಕೈಗೊಳ್ಳಬೇಕು ಎಂದು ಸಂಘದ ಅಧ್ಯಕ್ಷ ಎಂ. ಕೃಷ್ಣಪ್ಪ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಆಗ್ರಹಿಸಿದರು. ತೆಲಂಗಾಣದಲ್ಲಿ 120 ಅಡಿ ಎತ್ತರದ ಪ್ರತಿಮೆ ಅನಾವರಣ ಮಾಡಿರುವುದು ಹೆಮ್ಮೆಯ ವಿಚಾರ. ಅದಕ್ಕಿಂತ ಎತ್ತರದ ಪ್ರತಿಮೆ ನಮ್ಮ ಬೆಂಗಳೂರಿನಲ್ಲಿ ನಿರ್ಮಾಣಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಂಘದ ಮಹಿಳಾ ಅಧ್ಯಕ್ಷೆ ಬೊಮ್ಮಸಂದ್ರ ರೇಣುಕಾ, ಉಪಾಧ್ಯಕ್ಷ ಮಣಿಗಾನಹಳ್ಳಿ ವಿ. ಶ್ರೀನಿವಾಸ, ಪ್ರಧಾನ ಕಾರ್ಯದರ್ಶಿ ರವಿಚಂದ್ರ ಎಸ್., ಮೀಸೆರಾಮಣ್ಣ, ಮುನಿರಾಜಣ್ಣ, ಶೇಖ್ ರಿಜ್ವಾನ್ ಉಪಸ್ಥಿತರಿದ್ದರು.

ವೈದ್ಯಕೀಯ ಶಿಕ್ಷಣ ಇಲಾಖೆ ಕ್ರಮಕ್ಕೆ ಆಕ್ಷೇಪ • ಎರಡನೆ ಬಾರಿ ಉದ್ಘಾಟನೆಗೆ ಸಜ್ಜಾದ ಆಸ್ಪತ್ರೆ

ಚರಕ ಆಸ್ಪತ್ರೆಗೆ ಬಿಎಂಸಿಆರ್‌ಐ ವೈದ್ಯರು

• ವರುಣ ಹೆಗಡೆ

ಬೆಂಗಳೂರು: ಶಿವಾಜಿನಗರದ ಬ್ರಾಡ್‌ವೇ ರಸ್ತೆಯಲ್ಲಿರುವ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ನಿರ್ಮಾಣಗೊಂಡು ನಾಲ್ಕು ವರ್ಷಗಳ ಬಳಿಕ ಸೇವೆಗೆ ಸಜ್ಜಾಗಿದೆ. ಇದಕ್ಕೆ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ವೈದ್ಯರನ್ನು ಚರಕ ಆಸ್ಪತ್ರೆಗೆ ನಿಯೋಜಿಸಿರುವುದಕ್ಕೆ ವೈದ್ಯರಿಂದಲೇ ಆಕ್ಷೇಪ ವ್ಯಕ್ತವಾಗಿದೆ.

ಬಿಬಿಎಂಪಿ ವತಿಯಿಂದ ನಿರ್ಮಿಸಲಾಗಿದ್ದ ಈ ಆಸ್ಪತ್ರೆಯನ್ನು 2020ರ ಆಗಸ್ಟ್‌ನಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಲೋಕಾರ್ಪಣೆ ಮಾಡಿದ್ದರು. ಅತ್ಯಾಧುನಿಕ ವೈದ್ಯಕೀಯ ಸೌಲಭ್ಯದೊಂದಿಗೆ ಸುಸಜ್ಜಿತವಾದ ನಾಲ್ಕು ಮಹಡಿಗಳನ್ನು ಒಳಗೊಂಡಿದ್ದ ಈ ಆಸ್ಪತ್ರೆ ವೈದ್ಯರು ಹಾಗೂ ಶುಶ್ರೂಷಕರ ನೇಮಕಾತಿ ನಡೆಯದಿದ್ದರಿಂದ ನಿರುಪಯುಕ್ತವಾಗಿತ್ತು. ಈಗ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಯನ್ನು ಆಸ್ಪತ್ರೆಗೆ ನಿಯೋಜಿಸಲಾಗಿದ್ದು, ಮತ್ತೊಮ್ಮೆ ಲೋಕಾರ್ಪಣೆಗೆ ಸಜ್ಜಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೆಪ್ಟೆಂಬರ್ 2ರಂದು ಲೋಕಾರ್ಪಣೆ ಮಾಡಿ, ಸೇವೆಗೆ ಅನುವು ಮಾಡಿಕೊಡಲಿದ್ದಾರೆ.

ಈ ಆಸ್ಪತ್ರೆಯು ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಎಬಿವಿಎಂಸಿಆರ್‌ಐ) ಅಧೀನದಲ್ಲಿದೆ. ಹಲವು ದಿನಗಳಿಂದ ಈ ಆಸ್ಪತ್ರೆಯಲ್ಲಿ ತಲಾ ಇಬ್ಬರು ಶುಶ್ರೂಷಕರು, ಡಿ ದರ್ಜೆ ಸಿಬ್ಬಂದಿ ಹಾಗೂ ರಕ್ಷಣಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು. ಯಾವುದೇ ವೈದ್ಯಕೀಯ ಸೇವೆ ದೊರೆಯುತ್ತಿರಲಿಲ್ಲ. ಈಗ ವೈದ್ಯಕೀಯ ಶಿಕ್ಷಣ ಇಲಾಖೆಯು ಬಿಎಂಸಿಆರ್‌ಐ ವೈದ್ಯರು ಹಾಗೂ ಸ್ಥಾನಿಕ ವೈದ್ಯರನ್ನು ಚರಕ ಆಸ್ಪತ್ರೆಗೆ ನೇಮಿಸಿ ಆದೇಶ ಹೊರಡಿಸಿದೆ. ಬಿಎಂಸಿಆರ್‌ಐ ಹೃದಯ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಶ್ರೀರಂಗ ಪಿ.ಸಿ. ಅವರನ್ನು ಚರಕ ಆಸ್ಪತ್ರೆಯ ವಿಶೇಷಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಇಲಾಖೆಯ ಈ ಕ್ರಮಕ್ಕೆ ಬಿಎಂಸಿಆರ್‌ಐ ಅಧೀನದ ಆಸ್ಪತ್ರೆಯ ವೈದ್ಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೋವಿಡ್ ಸೇವೆಗೆ ಬಳಕೆ: ಈ ಆಸ್ಪತ್ರೆಯನ್ನು ಕೋವಿಡ್ ಮೊದಲ ಹಾಗೂ ಎರಡನೇ ಅಲೆಯಲ್ಲಿ ಸರ್ಕಾರ ಬಳಸಿಕೊಂಡಿತ್ತು. ಆ ವೇಳೆ ಬಿಎಂಸಿಆರ್‌ಐ ವೈದ್ಯರು ಈ ಆಸ್ಪತ್ರೆಗೆ ಬಂದು, ಸೇವೆ ಸಲ್ಲಿಸಿದ್ದರು. ಕೆಲ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗಿತ್ತು. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಇಲ್ಲಿ ಒಳ ರೋಗಿಗಳ ವೈದ್ಯಕೀಯ ಸೇವೆ ಸ್ಥಗಿತಗೊಂಡಿತ್ತು. 2022ರ ಅಂತ್ಯದವರೆಗೆ ಹೃದಯ ಹಾಗೂ ನರರೋಗ ವಿಜ್ಞಾನ ವಿಭಾಗಗದಲ್ಲಿ ಹೊರರೋಗಿ ಸೇವೆ ಮಾತ್ರ ಒದಗಿಸಲಾಗಿತ್ತು. ಬೌರಿಂಗ್ ಆಸ್ಪತ್ರೆಯ ವೈದ್ಯರು ಇಲ್ಲಿಗೆ ಬಂದು ಸೇವೆ ನೀಡಿದ್ದರು. ಬಳಿಕ ಆಸ್ಪತ್ರೆ ಸಂಪೂರ್ಣ ಸ್ಥಗಿತವಾಗಿತ್ತು.

‘ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯ (ಪಿಎಂಎಸ್‌ಎಸ್‌ವೈ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಈಗಾಗಲೇ ವೈದ್ಯರ ಕೊರತೆ ಇದೆ. ಬಿಎಂಸಿಆರ್‌ಐನಲ್ಲಿಯೂ ಅಗತ್ಯ ಸಂಖ್ಯೆಯಲ್ಲಿ ಪ್ರಾಧ್ಯಾಪಕರಿಲ್ಲ. ಇಂತಹ ಸಂದರ್ಭದಲ್ಲಿ ಇಲ್ಲಿನ ವೈದ್ಯರನ್ನು ಚರಕ ಆಸ್ಪತ್ರೆಗೆ ನೇಮಿಸಲಾಗಿದೆ. ಇದರಿಂದಾಗಿ ಇಲ್ಲಿಗೆ ಬರುವ ರೋಗಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗುತ್ತದೆ’ ಎಂದು ಬಿಎಂಸಿಆರ್‌ಐನ ಹೆಸರು ಬಹಿರಂಗಪಡಿಸಲು ಇಚ್ಛಿಸದ ವೈದ್ಯರೊಬ್ಬರು ಬೇಸರ ವ್ಯಕ್ತಪಡಿಸಿದರು.



ಶಿವಾಜಿನಗರದಲ್ಲಿರುವ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ–ಪ್ರಜಾವಾಣಿ ಚಿತ್ರ

ಅಂಕಿ ಅಂಶಗಳು

₹24.38 ಕೋಟಿ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ತಗುಲಿದ ವೆಚ್ಚ

6,908.18 ಚ.ಮೀ. ಆಸ್ಪತ್ರೆ ಕಟ್ಟಡದ ಒಟ್ಟು ವಿಸ್ತೀರ್ಣ

130 ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ

‘ರೋಗಿಗಳಿಗೆ ಸಮಸ್ಯೆ ಆಗದಿರಲು ಕ್ರಮ’

‘ಆಸ್ಪತ್ರೆ ಕಾರ್ಯಾರಂಭ ಮಾಡಿ, ರೋಗಿಗಳಿಗೆ ಸೇವೆ ಒದಗಿಸಬೇಕೆಂಬ ಉದ್ದೇಶದಿಂದ ಬಿಎಂಸಿಆರ್‌ಐ ವೈದ್ಯರು ಹಾಗೂ ಸ್ಥಾನಿಕ ವೈದ್ಯರನ್ನು ಚರಕ ಆಸ್ಪತ್ರೆಗೆ ನೇಮಿಸಲಾಗಿದೆ. ಎಬಿವಿಎಂಸಿಆರ್‌ಐ ಪ್ರಾರಂಭವಾದಾಗ ಅಗತ್ಯ ಸಿಬ್ಬಂದಿ ಸೇರಿ ಎಲ್ಲ ರೀತಿಯ ನೆರವು ಒದಗಿಸುವುದಾಗಿ ಬಿಎಂಸಿಆರ್‌ಐ ಒಪ್ಪಂದ ಮಾಡಿಕೊಂಡಿದೆ. ಅದರ ಆಧಾರದಲ್ಲಿಯೇ ಸ್ಥಾನಿಕ ವೈದ್ಯರನ್ನು ಚರಕ ಆಸ್ಪತ್ರೆಗೆ ಒದಗಿಸಲಾಗಿದೆ. ಅಷ್ಟಕ್ಕೂ ಬಿಎಂಸಿಆರ್‌ಐಗೆ ಸಮಸ್ಯೆ ಆಗದಂತೆ, ನಿಗದಿಗಿಂತ ಹೆಚ್ಚಿದ್ದ ಸ್ಥಾನಿಕ ವೈದ್ಯಾಧಿಕಾರಿಗಳನ್ನು ಚರಕ ಆಸ್ಪತ್ರೆಯಲ್ಲಿ ಬಳಸಿಕೊಳ್ಳಲಾಗುತ್ತದೆ. ಈ ನೇಮಕದ ಬಗ್ಗೆ ಆಕ್ಷೇಪ ವ್ಯಕ್ತವಾಗಿರುವುದು ಗಮನಕ್ಕೆ ಬಂದಿಲ್ಲ’ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಎನ್‌ಎಂಸಿಗೆ ಪತ್ರ

‘ಬಲವಂತದಿಂದ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ನಮ್ಮನ್ನು ನಿಯೋಜಿಸಲಾಗಿದೆ’ ಎಂದು ಬಿಎಂಸಿಆರ್‌ಐ ಸ್ಥಾನಿಕ ವೈದ್ಯಾಧಿಕಾರಿಗಳು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ದೂರು ನೀಡಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಅವರು, ‘ಚರಕ ಆಸ್ಪತ್ರೆಯು ಎಬಿವಿಎಂಸಿಆರ್‌ಐ ಅಡಿ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ ತರಬೇತಿಗೆ ಅಗತ್ಯ ವಾತಾವರಣವಿಲ್ಲ. ಇದು ಕಲಿಕೆಗೆ ತೊಡಕಾಗಲಿದೆ. ಎನ್‌ಎಂಸಿ ನಿಯಮಾವಳಿ ಪ್ರಕಾರ ಪ್ರತಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿಭಾಗಗಳು ನಿಗದಿತ ಸಂಖ್ಯೆಯಲ್ಲಿ ಪ್ರಾಧ್ಯಾಪಕರು, ಸಿಬ್ಬಂದಿ, ರೋಗಿಗಳು ಹಾಗೂ ಅಗತ್ಯ ಸೌಲಭ್ಯ ಹೊಂದಿರಬೇಕು. ಆದರೆ, ಅಗತ್ಯ ಸೌಲಭ್ಯ ಕಲ್ಪಿಸದೆ, ನಿಯಮಾವಳಿಗಳನ್ನು ಉಲ್ಲಂಘಿಸಿ ನಿಯೋಜಿಸಲಾಗಿದೆ’ ಎಂದು ದೂರಿದ್ದಾರೆ.

‘ಸಮ್ಮಿಲನ’ ಸಮಾರಂಭ ಇಂದು

ಬೆಂಗಳೂರು: ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ ಜಿಲ್ಲಾವಾರು ಸಂಘಗಳ ರಾಜ್ಯಮಟ್ಟದ ಸಂಘಟನಾ ಸಮ್ಮಿಲನ ಸಮಾರಂಭ, 2024–26ರ ಮಾರ್ಗಸೂಚಿ ಬಿಡುಗಡೆ ಮತ್ತು ಹೋಟೆಲ್ ಉದ್ಯಮಿಗಳಿಗೆ ಸನ್ಮಾನ ಕಾರ್ಯಕ್ರಮ ಶನಿವಾರ (ಆಗಸ್ಟ್ 31) ಸಂಜೆ 6ಕ್ಕೆ ಅರಮನೆ ಮೈದಾನದಲ್ಲಿ ನಡೆಯಲಿದೆ. ಸಂಘದ ಗೌರವ ಅಧ್ಯಕ್ಷ ಬಿ. ಚಂದ್ರಶೇಖರ್ ಹೆಬ್ಬಾರ್, ಅಧ್ಯಕ್ಷ ಜಿ.ಕೆ. ಶೆಟ್ಟಿ, ಕಾರ್ಯದರ್ಶಿ ಎಂ.ವಿ. ರಾಘವೇಂದ್ರ ರಾವ್ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಉದ್ಘಾಟಿಸುವರು. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶಾಸಕರು, ಉದ್ಯಮಿಗಳು ಭಾಗವಹಿಸಲಿದ್ದಾರೆ ಎಂದರು.



ದೇಶದಾದ್ಯಂತ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ಕೇಂದ್ರ, ರಾಜ್ಯ ಸರ್ಕಾರಗಳು ತಡೆಯುವಂತೆ ಹಾಗೂ ಸಂತ್ರಸ್ತರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಮೂಲನಿವಾಸಿ ಅಂಬೇಡ್ಕರ್ ಸಂಘದ ಪದಾಧಿಕಾರಿಗಳು ಹೂಡಿ ರಾಮಚಂದ್ರ, ಮುನಿಮಾರಪ್ಪ, ಜೈ ಭೀಮ್ ಸೀನು ನೇತೃತ್ವದಲ್ಲಿ ಕೆ.ಆರ್‌.ಪುರದ ಹಳೆ ಮದ್ರಾಸ್ ರಸ್ತೆಯಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಿದರು

‘ಗ್ರೇಟರ್ ಬೆಂಗಳೂರಿಗೆ ಸಂವಿಧಾನದಲ್ಲಿ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನದಲ್ಲಿ ಅವಕಾಶ ಇಲ್ಲದೇ ಇದ್ದರೂ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸುವ ಮೂಲಕ ಸ್ಥಳೀಯಾಡಳಿತದ ಅಧಿಕಾರವನ್ನು ಕಿತ್ತುಕೊಳ್ಳುವ ಹುನ್ನಾರವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದು ಬಿಬಿಎಂಪಿ ವಿರೋಧ ಪಕ್ಷದ ಮಾಜಿ ನಾಯಕ ಪದ್ಮನಾಭ ರೆಡ್ಡಿ ಆರೋಪಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಒಂದು ನಗರವನ್ನು ಆಡಳಿತದ ಅನುಕೂಲಕ್ಕಾಗಿ ಹೆಚ್ಚು ನಗರಾಡಳಿತವನ್ನಾಗಿ ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಬಿಬಿಎಂಪಿ ಆಗುವ ಮೊದಲು ಬೆಂಗಳೂರು ಕೂಡ ಒಂಬತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿತ್ತು. 2007ರಲ್ಲಿ ಎಚ್‌.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಈ ಒಂಬತ್ತು ನಗರ ಸ್ಥಳೀಯ ಸಂಸ್ಥೆಗಳು ಮತ್ತು 110 ಹಳ್ಳಿಗಳನ್ನು ಸೇರಿಸಿ ಬಿಬಿಎಂಪಿ ಮಾಡಲಾಗಿತ್ತು’ ಎಂದರು.

ಈಗ ಮತ್ತೆ ಬೆಂಗಳೂರು ನಗರವನ್ನು ಛಿದ್ರ ಮಾಡಲು ರಾಜ್ಯ ಸರ್ಕಾರ ಹೊರಟಿದೆ. ಬೇರೆ ಬೇರೆ ಪಾಲಿಕೆ ಮಾಡಿ ಅಧಿಕಾರ ಹಿಡಿಯುವ ಹುನ್ನಾರ ಮಾಡಿದೆ. ಜೊತೆಗೆ ಇವುಗಳನ್ನು ನಿಯಂತ್ರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡುವ ಪ್ರಸ್ತಾಪ ಸದನದಲ್ಲಿ ಮಂಡಿಸಿರುವ ಮಸೂದೆಯಲ್ಲಿದೆ. ಈ ರೀತಿ ಪ್ರಾಧಿಕಾರ ರಚಿಸಲು ಸಂವಿಧಾನದಲ್ಲಿ ಅವಕಾಶವೇ ಇಲ್ಲ ಎಂದು ಹೇಳಿದರು.

ಬೆಂಗಳೂರು ನಗರವನ್ನು ತುಂಡು ತುಂಡು ಮಾಡಿದರೆ ಕೆಲವು ಪ್ರದೇಶಗಳಿಗೆ ಹೆಚ್ಚು ಅನುದಾನ ಸಿಕ್ಕಿ, ಇನ್ನು ಕೆಲವು ಪ್ರದೇಶಗಳಿಗೆ ಅನುದಾನ ಸಿಗದೇ ಅಭಿವೃದ್ಧಿ ಕುಂಠಿತವಾಗಬಹುದು. ತೆರಿಗೆ ಸಂಗ್ರಹದಲ್ಲಿಯೂ ವ್ಯತ್ಯಾಸಗಳಾಗಬಹುದು ಎಂದು ಅವರು ಅನುಮಾನ ವ್ಯಕ್ತಪಡಿಸಿದರು.

ಬೆಂಗಳೂರು ಬಿಜೆಪಿಯ ಭದ್ರಕೋಟೆ. ಇದನ್ನು ಒಡೆಯಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡುತ್ತಿದ್ದಾರೆ. ಪ್ರಾಧಿಕಾರ ರಚನೆಯಾದರೆ ಮುಖ್ಯಮಂತ್ರಿ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಬೆಂಗಳೂರು ಅಭಿವೃದ್ಧಿ ಸಚಿವ ಉಪಾಧ್ಯಕ್ಷರಾಗಿರು-ತ್ತಾರೆ. ಗೃಹ ಸಚಿವ, ಸಾರಿಗೆ ಸಚಿವ, ನಗರಾಭಿವೃದ್ಧಿ ಸಚಿವ, ಇಂಧನ ಸಚಿವ, ನಗರ ವ್ಯಾಪ್ತಿಯ ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಇರುತ್ತಾರೆ. ಆದರೆ, ಇಲ್ಲಿನ ಶಾಸಕರಿಗೆ ಪ್ರಾತಿನಿಧ್ಯ ನೀಡುವ ಪ್ರಸ್ತಾವ ಮಸೂದೆಯಲ್ಲಿ ಇಲ್ಲ ಎಂದು ದೂರಿದರು.

ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡಲಾಗುತ್ತಿದೆ. ಇದರಿಂದ ಅನ್ಯ ಭಾಷಿಕರ ಬಾವುಟ ಹಾರುವ ಅಪಾಯವಿದೆ ಎಂದು ಎಚ್ಚರಿಸಿದರು.

ಚುನಾವಣೆಗೆ ತಡೆಯಾಜ್ಞೆ ಎಲ್ಲಿದೆ?

ಬಿಬಿಎಂಪಿ ಚುನಾವಣೆ ಯಾಕೆ ನಡೆಸುತ್ತಿಲ್ಲ ಎಂದು ಕೇಳಿದ ಕೂಡಲೇ ಪ್ರಕರಣ ನ್ಯಾಯಾಲಯದಲ್ಲಿದೆ ಎಂದು ಸರ್ಕಾರ ಜಾರಿಕೊಳ್ಳುತ್ತಿದೆ. ಪ್ರಕರಣ ನ್ಯಾಯಾಲಯದಲ್ಲಿ ಎಲ್ಲಿದೆ? ಯಾವ ತಡೆಯಾಜ್ಞೆ ಇದೆ ಎಂದು ಪದ್ಮನಾಭ ರೆಡ್ಡಿ ಪ್ರಶ್ನಿಸಿದರು.

ಮೀಸಲಾತಿ ಸರಿಯಾಗಿ ಅನ್ವಯಿಸಿ ಚುನಾವಣೆ ನಡೆಸಿ ಎಂದಷ್ಟೇ ಸುಪ್ರೀಂಕೋರ್ಟ್ ಸಹಿತ ಎಲ್ಲ ನ್ಯಾಯಾಲಯಗಳು ಹೇಳಿರುವುದು. ಮೀಸಲಾತಿ ನಿಗದಿಪಡಿಸಿ ಚುನಾವಣೆ ನಡೆಸಿದರೆ ನಗರದ ಹಿಡಿತ ತಪ್ಪಿ ಹೋಗುತ್ತದೆ ಎಂಬ ಕಾರಣಕ್ಕೆ ಚುನಾವಣೆ ನಡೆಸುತ್ತಿಲ್ಲ ಎಂದು ಆರೋಪಿಸಿದರು.

ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಸುವುದಕ್ಕೂ ಯಾವುದೇ ತಡೆಯಾಜ್ಞೆ ಇಲ್ಲ ಎಂದು ತಿಳಿಸಿದರು.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

House

Hebbal



NORTH FACING Indpt 3 Floor House in Prime Area behind Godrej Woodsman Apt, HEBBAL KEMPAPURA 4290 Sq Ft. **Rs.5.04 Cr.** Only Genuine Buyer **Contact: 8217717864**

Chandra Layout

CHANDRA LAYOUT 50x80 West, Fully Furnished, Good location,Total building Dandeli Teak, 8 BHK. 9008267445.

Srirampura

HOUSE FOR SALE, in Sriramapuram, Land measuring 1500sqft. Building 4000+. Ground +2. Covered parking for 2 Cars. Contact: 9171918295, 9442514001.

J P Nagar

SALE JPNAGAR 1st Phase 30x40 Duplex Livable House North Facing Excellent Location Site Price only. Sunil:9845173427

HOUSE SALE: J.P.Nagar, 6th Phase, BDA site, E/F, 4 bedroom, Separate car shed. Contact: 9880402575.

Nagarabhavi

NAGARBHAVI MALLATHALLI ITI Employees Layout Luxury Triplex house with fully furnished for sale 30/40 south face site East face door Direct owner: 9880311959

Commercial Building

Seshadripuram

SALE OFFICE Premises Fully Furnished 640 Sqft. No.33, 2 Floor, Swiss Complex, Race Course Road: 9845081411

Industrial & Factory

Magadi Road

MAGADI ROAD 1& 2 acre (Nelamangala Tumkuru Road) Sale/Rent. Industrial Converted. Bank Loan: 8971851966, 9880781399

Commerical

Kengeri

SALE 4500 sqft, S/West Corner, Nagadevanahalli Ring Road. Ideal for Shopping Mall, Hospital. etc. 9845780996

Whitefield



FOR SALE
Rental income Rs. 2.35 Lakhs per Month plus GST (MNC), Whitefield - 3290 sq.ft. Fully Furnished, Independent Unit, Ample Parking, Brigade IRV Centre. Contact: 9242286495

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact: 9902038118, 9449060605

Kanakapura Road

WANTED BDA SITE Anjanapura, Banashankari 6`Stage, JP.Nagar 9th, BCCHS, BCMC, Gubblala Doddakallasandra. Agent Excuse. Call: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

WANTED BDA SITE 30x40, 40x60, 50x80 Nagarbhavi, RHCS Layout, Visveshwaraiah, Banashankari 6th Stage, NGF. 8105688602.

Commercial Land

South

RUNNING EDUCATION INSTITUTION with Good Students Strength (State/CBSC/ ICSC) OR 1-5 Acre Land with Clear Title in & Around Bangalore OR Any Dist. Head Quarters in Karnataka. (100% Cheque Payment) Contact: +917483410747 Brokers Excuse.

Commercial Building

Nagarabhavi

WANTED 30X40 Site or Building Commercial around Mudalpalya Any Facing, GKW Layout Road. Call: 9901552147

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE BUILDING Rent Ground+3 Suitable: Hospital, Supermart, Jewellery Shop, Showrooms, Corporate Company Office. Nagarbhavi. Owner: 9448762440

COMMERCIAL SPACE for Rent 2000sqft. 1st Main, Seshadripuram Opp Indian Bank. Brokers Excuse. 9036813906.

Flats

2 BHK 2nd Floor Vanivilas Road Rent 30,000 adv 3 lakh Contact 7019913469

Farm House/Land/ Resorts

14,600 SQFT vacant land available. 5 Mins from nelamangala court complex. Contact 8618213626

Industrial And Factory

AVAILABLE OF Industrial Shed of 95000 sqft at Soukya Road, Whitefield. Contact: 9341234288/ 9663224353/ 9845417487.

PUBLIC NOTICE

PUBLIC NOTICE

I, **VENKATARAMANAPPA** S/o Late Munivenkatappa, R/at No. 802, 3rd Cross, Kidwai Layout, Tulasipura Main Road, Anjanapura, Bangalore – 560062 is the absolute owner of the Residential Site bearing No. 99, V.P. Khata No. 53/1, BBMP Khata No. 37/322, situated at Gollahalli Village, Uttarahalli Hobli, Bangalore South Taluk, measuring East to West 30 Feet and North to South 40 Feet, totally measuring 1,200 Sq. Ft., and bounded on: East by: Site No. 98; West by: Site No. 100; North by: Road and South by: BDA Property and the Original Sale Deed dated 29.08.2001 executed by Sri Hemanna & others in favour of Sri Venkataramanappa, Document No. 6564/2001-02 is not traceable. If the said Original Sale Deed is found by any person/s, they are hereby requested to hand over the same to the below mentioned address.

VENKATARAMANAPPA
No. 802, 3rd Cross, Kidwai Layout, Tulasipura Main Road, Anjanapura, Bangalore – 560 062
Ph: 8553559608 (M)

JOB OPPORTUNITIES

Wanted

REQUIRED STORE Keeper for Swastik Ceramics Co & Age Limit 23-35 Years. Location Jayanagar 5th Block Contact 9741040290

BUSINESS

Business Offers

Business For Sale

RUNNING VEG Restaurant Business For Sale 1600 sqft ground floor J.P.Nagar, 2nd Phase Good Location PH 9845929293/ 7975683818

PERSONAL

Change of Name

I, PUSHPA Narayanaswamy W/o Vijay Kumar Malur Papanna Residing at Vaishnavi Nilaya, Ward No8, Chikka Marikamba Temple Street, Malur Town, Malur, Kolar District. Have changed my name to Naga Pushpa Jangamakote Narayanaswamy vide affidavit dated before Notary M. Jagannatha Malur. Henceforth I shall be called as Naga Pushpa Jangamakote Narayanaswamy only.

I, Vidya Siddaiah D/o Siddaiah R/O no 127/141/4, 3rd cross, Kathriguppe, Banashankari 3rd stage, Bangalore 560085. Have changed my name from Vidya Murugan to Vidya Siddaiah for all future purpose.

I, VIJAYA Kumar Malur Papanna S/o Late R Papanna Residing at Vaishnavi Nilaya, Ward No8, Chikka Marikamba Temple Street, Malur Town, Malur, Kolar District. Have changed my name to Vijay Kumar Malur Papanna Narayanaswamy vide affidavit dated before Notary M. Jagannatha Malur. Henceforth I shall be called as Vijay Kumar Malur Papanna y only.

CHANGE OF NAME

I, **Dr. MAHA JABEEN ASKARY, Dr.MAHA J ASKARY** and **Dr. MAHA JABEEN HUSSAIN**, residing at #85, C Main, Jakkasandra Block, Koramangala, Bengaluru-560034, all above names partain to me only. Vide affidavit dated 30-08-2024 before notary Gangaraju B N, Bengaluru.

AUTOMOTIVE

Four Wheelers Selling

Mahindra

SCORPIO SLX 2006 Black 196000 kms single owner Bengaluru Contact : 9980155854

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331


ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331







ಭಾವ-ಬಂಧದ ನೆನಪು ಗೌರಿ ಬಾಗಿನದ ಒನಪು



ಎಐ ಚಿತ್ರ: ಕಣಕಾಲಮಠ

> ಕಾಲ ಉರುಳಿದೆ. ಹುಟ್ಟಿ, ಬೆಳೆದ ಮನೆಗೆ ಅತಿಥಿಯಾಗಿ ಹೋಗಿ, ಅಮ್ಮನ ಮಡಿಲಿಗೆ ಸ್ವತಃ ಗೌರಿ ಬಾಗಿನ ಕೊಡಬೇಕೆಂದು ನೆನೆದು ಮೈಯಲ್ಲಿ ಸಣ್ಣ ಮಿಂಚು ಹರಿದಿತ್ತು. ಕಣ್ಣಾಲಿಗಳಲ್ಲಿ ನೀರು ಜಿನುಗಿತ್ತು. ಅದೊಂದು ಭಾವನೆಗಳ ಸಂಗಮ.

ಪವಿತ್ರಾ ಭಟ್

ಒಪ್ಪಟವಾಗಿ ಸಾರಿಸಿ ರಂಗೋಲಿಯಿಟ್ಟ ಅಂಗಳ, ದೇವರ ಮನೆಯಲ್ಲಿ ಜೋಡಿಸಿಟ್ಟ ಅರಿಶಿನ, ಕುಂಕುಮ, ಬಳೆ, ಅಕ್ಕಿ, ಮಂಗಲದ್ರವ್ಯಗಳು.. ಅತ್ತ ಅಡುಗೆ ಮನೆಯಿಂದ ಘಮ್ ಎನ್ನುವ ಸಿಹಿ ತಿಂಡಿಗಳ ಸುವಾಸನೆ... ಮನೆ-ಮನದಲ್ಲಿ ಸಡಗರ-ಸಂಭ್ರಮ...

ಹಬ್ಬ ಬಂತೆಂದರೆ ಗ್ರಾಮೀಣ ಭಾಗದ ಮನೆಗಳಲ್ಲಿ ಕಾಣುವ ಸಾಮಾನ್ಯ ನೋಟವಿದು. ಸಂಬಂಧ ಬೆಸೆಯುವ ಹಬ್ಬಗಳಿಗೆ ಹೆಣ್ಣುಮಕ್ಕಳೇ ಸಾಂಸ್ಕೃತಿಕ ರಾಯಭಾರಿಗಳು.

ಅದರಲ್ಲೂ ಗೌರಿ ಹಬ್ಬವಂತೂ ಕರುಳಬಳ್ಳಿ ಸಂಬಂಧದಂತೆ. ಅಮ್ಮನಿಗೆ ಬಾಗಿನ ಕೊಡುವುದೇ ಹೆಣ್ಣುಮಕ್ಕಳ ಸಂಭ್ರಮವನ್ನು ಇಮ್ಮಡಿಯಾಗಿಸುತ್ತದೆ.

ಮೊದಲೆಲ್ಲ ಅಮ್ಮ ಕಾಯಿಸಿಟ್ಟ ಹಂಡೆಯ ಬಿಸಿ ನೀರಿನಲ್ಲಿ ಗಂಟೆಗಟ್ಟಲೆ ಸ್ನಾನ ಮಾಡಿ ಹೊಸ ಬಟ್ಟೆ ತೊಟ್ಟು ಮನೆಯಲ್ಲೆಲ್ಲಾ ಓಡಾಡುತ್ತಿದ್ದವಳಿಗೆ ಮದುವೆಯಾದ ಮೇಲೆ ಅದೇನೋ ಗುರುತರ ಜವಾಬ್ದಾರಿ.

ಮನೆಯಲ್ಲಿ ಎಲ್ಲಾ ಕೆಲಸ ಮುಗಿಸಿ, ಬಾಗಿನ ಕೊಡುವ ನೆಪದಲ್ಲಿ ಆಕೆಗೆ ಅಮ್ಮನನ್ನು ನೋಡುವ ತವಕ. ತವರೂರಿನತ್ತ ಲಗುಬಗೆಯ ಹೆಜ್ಜೆ. ಬಾಳೆ ಎಲೆ ಅಥವಾ ಮರದ ಮೊರಗಳಲ್ಲಿ ಅರಿಶಿನ-ಕುಂಕುಮ, ಬಳೆ, ಅಕ್ಕಿ, ಬೆಲ್ಲ, ಕರಿಮಣಿ, ಕನ್ನಡಿ, ಪುಟ್ಟ ಬಾಚಣಿಗೆ, ಅಂಗಡಿಯನ್ನೆಲ್ಲ ಸುತ್ತಿ ಅಮ್ಮನಿಗಾಗಿ ಹುಡುಕಿ ತಂದ ಸೀರೆ... ಹೀಗೆ ಎಲ್ಲವನ್ನೂ ಒಪ್ಪವಾಗಿ ಜೋಡಿಸುವಾಗ, ಚಿಕ್ಕಂದಿನಲ್ಲಿ ಅಮ್ಮ ಅವಳ ಅಮ್ಮನಿಗಾಗಿ ಪ್ರೀತಿಯಿಂದ ತಯಾರಿಸುತ್ತಿದ್ದ ಗೌರಿ ಬಾಗಿನ ನೋಡಿ ಕಣ್ಣರಳಿಸಿ ನಿಂತದ್ದು ಇನ್ನೂ ಕಣ್ಣಿಗೆ ಕಟ್ಟಿದ ಹಾಗೆಯೇ ಇದೆ.

ಆದರೆ ಕಾಲ ಉರುಳಿದೆ. ಹುಟ್ಟಿ, ಬೆಳೆದ ಮನೆಗೆ ಅತಿಥಿಯಾಗಿ ಹೋಗಿ, ಅಮ್ಮನ ಮಡಿಲಿಗೆ ಸ್ವತಃ ಗೌರಿ ಬಾಗಿನ ಕೊಡಬೇಕೆಂದು ನೆನೆದು ಮೈಯಲ್ಲಿ ಸಣ್ಣ ಮಿಂಚು ಹರಿದಿತ್ತು. ಕಣ್ಣಾಲಿಗಳಲ್ಲಿ ನೀರು ಜಿನುಗಿತ್ತು. ಅದೊಂದು ಭಾವನೆಗಳ ಸಂಗಮ.

'ಪರ್ವತರಾಜನ ಮಗಳು ಪಾರ್ವತಿಯ ಇನ್ನೊಂದು ಹೆಸರು ಗೌರಿ. ಶಿವನನ್ನು ವಿವಾಹವಾದ ಗೌರಿ ವರ್ಷಕ್ಕೊಮ್ಮೆ ಅಂದರೆ ಭಾದ್ರಪದ ಮಾಸದ ಶುಕ್ಲ ಪಕ್ಷ ತದಿಗೆಯ ದಿನದಂದು ಪುತ್ರ ಗಣೇಶನೊಂದಿಗೆ ಕೈಲಾಸದಿಂದ ಭೂಮಿಗೆ ಬಂದು ಮುತ್ತೈದೆಯರಿಂದ ಬಾಗಿನ ಸ್ವೀಕರಿಸಿ ಹರಸುತ್ತಾಳೆ. ಈ ದಿನವನ್ನು ಗೌರಿ ತದಿಗೆ ಎಂದೂ ಕರೆಯುತ್ತಾರೆ. ಗೌರಿಯಂತೆಯೇ ಹೆಣ್ಣುಮಕ್ಕಳು ವ್ರತ ಮಾಡಿ ತವರಿಗೆ ತೆರಳಿ ತಾಯಿಗೆ ಅಥವಾ ನಾದಿನಿ, ಅಕ್ಕ-ತಂಗಿಯರಿಗೆ ಬಾಗಿನ ನೀಡಿ ಆಶೀರ್ವಾದ ಪಡೆದರೆ ಸುಮಂಗಲಿಗಳಾಗುತ್ತಾರೆ ಎನ್ನುವ ನಂಬಿಕೆಯಿದೆ' ಎಂದು ಚಿಕ್ಕಂದಿನಲ್ಲಿ ಅಜ್ಜಿ ಗೌರಿ ಬಾಗಿನಕ್ಕಿರುವ ಪುರಾಣದ ನಂಟಿನ ಬಗ್ಗೆ, ಗೌರಿ ದೇವಿಯ ಕುರಿತಾದ ಕಥೆ ಹೇಳಿದ್ದು ಇನ್ನೂ ನೆನಪಿದೆ.

ನಂಬಿಕೆ, ಸಂಪ್ರದಾಯಗಳ ಹೊರತಾಗಿ ಈ ಬಾಗಿನ ಪದ್ಧತಿ ಹೆಣ್ಣು ಮತ್ತು ಆಕೆಯ ತವರಿನ ನಡುವಿನ ಪ್ರೀತಿಯ ಸಂಬಂಧಕ್ಕೆ ಕನ್ನಡಿಯಿದ್ದಂತೆ. ಇದು ಭಾವದ ಬಂಧ.

ಗಂಡನ ಮನೆಯಲ್ಲಿ ಕುಟುಂಬದ ಏಳಿಗೆಗಾಗಿ, ಸಮೃದ್ಧಿಗಾಗಿ ತನ್ನದೇ ಪ್ರಪಂಚದಲ್ಲಿ ಬದುಕುತ್ತಿದ್ದ ಆಕೆಗೆ ತವರಿಗೆ ತೆರಳಿ ಬಾಲ್ಯದ ದಿನಗಳನ್ನು ನೆನೆದು, ಅಮ್ಮನ ಮಡಿಲಿಗೆ ಪ್ರೀತಿಯ ಬಾಗಿನ ನೀಡುವುದು ಆಕೆಗೊಂದು ಸಮರ್ಪಣಾ ಭಾವ ಮೂಡಿಸುವುದು ಸುಳ್ಳಲ್ಲ.

ವರ್ಷಗಳು ಉರುಳಿದರೂ, ಮುದುಕಿಯಾದರೂ ಹುಟ್ಟಿ ಬೆಳೆದ ಮನೆ, ಅಮ್ಮನ ಮಡಿಲಿನ ನೆನಪು ಮಾತ್ರ ಸದಾ ಹಚ್ಚಹಸಿರು. ❖



ಸ್ಯಾರೀ ಗೌನ್

ಕೆ.ವಿ.ರಾಜಲಕ್ಷ್ಮಿ

ಹೆಣ್ಣು ಮಕ್ಕಳು ಯಾವುದೇ ಪ್ರಕಾರದ ಉಡುಗೆ ತೊಟ್ಟರೂ ಆಕರ್ಷಕವೇ! ಆದರೆ ಸೀರೆಯ ಸ್ಥಾನವೇ ಬೇರೆ. ಪುಟ್ಟ ಹುಡುಗಿಯಿಂದ ಯುವತಿಯವರೆಗೆ, ವಯಸ್ಕರಿಂದ ವೃದ್ಧರವರೆಗೆ ಸೀರೆಯ ಸೆಳೆತವನ್ನು ಹತ್ತಿಕ್ಕಲಾಗದು.

ಹೋಂ ಮೇಕರ್ ಆಗಲಿ ಉದ್ಯೋಗಸ್ಥೆಯಾಗಲಿ ತಮ್ಮದೇ ಆಯ್ಕೆಗಳಿರುತ್ತವೆ. ಸೀರೆ, ಗುಂಪಿನ ಆಕರ್ಷಕ ಬಿಂದು ಆಗುವುದು ಚಂದ. ಆದರೆ ಉಡುವುದಕ್ಕೆ ಸಮಯ ಹೆಚ್ಚು ಕಬಳಿಸುವುದು. ಕೆಲವು ಸೀರೆಗಳು ತ್ರಾಸವಿಲ್ಲದೆ ನೆರಿಗೆ ಸೆರಗು ಮೂಡುವಲ್ಲಿ ಸಹಕರಿಸಿದರೆ ಮತ್ತೂ ಕೆಲವು ಕೊಂಚ ತ್ರಾಸ ನೀಡುವುದು. ಅದರಲ್ಲೂ ಈಗಿನ ವೇಗದ, ಅವಸರದ ಯುಗದಲ್ಲಿ ಸೀರೆ ಉಡಲು ತಾಳ್ಮೆಯುಂಟೇ! ಚೂಡಿ, ಲೆಗ್ಗಿನ್, ಸಲ್ವಾರ್ ಯಾ ಪ್ಯಾಂಟ್ ಟಾಪ್ ಧರಿಸಿ ಕಾಲೇಜು ಕಚೇರಿಗಳಿಗೆ ಧಾವಿಸುವುದು ಸಲೀಸು. ಇದಕ್ಕೆಲ್ಲ ಸಮಾಧಾನವೆಂಬಂತೆ ಈಗ ಟ್ರೆಂಡ್ ಆಗಿರುವುದು ಸ್ಯಾರೀ ಗೌನ್.

ಏನಿದು ಸ್ಯಾರೀ ಗೌನ್?

ಕುಪ್ಪಸ ಮತ್ತು ಲಂಗದ ಭಾಗದೊಂದಿಗೆ ಒಂದುಬದಿಗೆ ಸೀರೆಯ ಕೊನೆಯ ಸುತ್ತು ಮತ್ತು ಸೆರಗು ಬರುವಂತೆ ಹೆಚ್ಚುವರಿ ಬಟ್ಟೆ/ದಾವಣಿ ಇರುತ್ತದೆ. ಒಮ್ಮೆಗೇ ಗೌನ್ ಏರಿಸಿ ದಾವಣಿಯನ್ನು ಸೆರಗಿನಂತೆ ಸುತ್ತಿ ಇಳಿಬಿಟ್ಟರೆ ಕ್ಷಣಾರ್ಧದಲ್ಲಿ ಸೀರಿ ಉಟ್ಟಾಗಿರುತ್ತದೆ. ದಾವಣಿ ಪ್ರತ್ಯೇಕವಾಗಿ ಇರುವಾಗ ಅದರ ಒಂದು ತುದಿಯನ್ನು ಗೌನ್ ಗೆ ಲೂಪ್ /ಗುಂಡಿಯ ಮೂಲಕ ಸುಲಭವಾಗಿ ಸಿಕ್ಕಿಸಿಕೊಂಡರೆ ಸೆರಗು ಸಿದ್ಧ.

ಇದರ ವಿಶೇಷವೆಂದರೆ, ದಾವಣಿಯನ್ನು ಒಂದು ಭುಜಕ್ಕೆ ಇಳಿಸಿದರೆ ಗೌನ್ ದುಪ್ಪಟ್ಟಾ ಲುಕ್ ಕೊಡುತ್ತದೆ.

ಸ್ಯಾರೀ ಗೌನ್ ವಿಶೇಷಗಳನ್ನು ಹೇಳಬಹುದಾದರೆ ಗೌನ್‌ನ ಎದೆಯ ಭಾಗದವರೆಗಿನ ಕುಬುಸ ತೋಳಿರುವ, ತೋಳಿರದ, ಮುಕ್ಕಾಲು ತೋಳು, ಮೆಗಾ ಸ್ಲೀವ್. ಬೋಟ್ ನೆಕ್, ಶೋಲ್ಡರ್ ಸ್ಟ್ರಾಪ್ಸ್ , ಕಾಲರ್ ನೆಕ್, ಹೀಗೆ ಬಗೆಬಗೆಯಾಗಿ ನಮ್ಮ ಅಗತ್ಯಕ್ಕೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಬಹುದು.

ಇನ್ನು ಗೌನ್ ಭಾಗಕ್ಕೆ ಬಂದರೆ ಲೈನಿಂಗ್ ನೊಂದಿಗೆ ಸಾದಾ ಲಂಗ, ಅನಾರ್ಕಲಿ, ಎ ಲೈನ್, ಪ್ಲೀಟೆಡ್, ಲೇಯರ್ಡ್, tiered , ರಫಲ್ಸ್, ಹೈಲೋ, , ಫಿಶ್ ಕಟ್, ಬಾಲ್ ಗೌನ್ ಬ್ರೈಡಲ್ ಗೌನ್ ಹೀಗೆ ಹತ್ತು ಹಲವು ವಿನ್ಯಾಸಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ.

ಎಲ್ಲ ಬಗೆಯ ರೇಷ್ಮೆ, ಕ್ರೇಪ್ ಜಾರ್ಜೆಟ್ ಲೈಕ್ರ ನೆಟ್ಟೆ, ಆರ್ಗಾನ್ಜಾ, ಸ್ಯಾಟಿನ್, ಶಿಮ್ಮರ್, ಸೀಕ್ವಿನ್ಸ್, ಇತ್ಯಾದಿ ಬಟ್ಟೆಗಳಲ್ಲಿ ವಿನ್ಯಾಸಗೊಳಿಸಬಹುದು.

ಇದು ಒಂದುರೀತಿ ಸಾಂಪ್ರದಾಯಿಕ ಹಾಗು ಸಮಕಾಲೀನ ಉಡುಗೆಯಾಗಿದೆ ಉಡುವವರ ಚೆಲುವನ್ನು ವರ್ಧಿಸುವುದೊಂದಿಗೆ, ಸಿಂಗಲ್ ಪೀಸ್ ಆದಕಾರಣ ಸಮಯವನ್ನು ಉಳಿಸುವುದು ಇದರ ವಿಶೇಷತೆ. ❖

ಸಂಜೆಗೆ ಗರಿಗರಿ ದೋಸೆ

ಅರ್ಚನಾ ಬೊಮ್ನಳ್ಳಿ

ರಸಾಸ್ವಾದ



ಸಬ್ಬಸ್ಸಿಗೆ ಸೊಪ್ಪಿನ ಸೆಟ್ ದೋಸೆ

ಬೇಕಾಗುವ ಸಾಮಗ್ರಿ: ಅಕ್ಕಿ ಒಂದು ಕಪ್, ಅವಲಕ್ಕಿ ಕಾಲು ಕಪ್, ಉದ್ದಿನ ಬೇಳೆ ಎರಡು ದೊಡ್ಡ ಚಮಚ, ಕಡಲೆ ಬೇಳೆ ಒಂದು ಚಮಚ, ಮೆಂತೆಕಾಳು ಕಾಲು ಚಮಚ, ಸಬ್ಬಸ್ಸಿಗೆ ಸೊಪ್ಪು ಅರ್ಧ ಕಟ್ಟು, ರುಚಿಗೆ ಉಪ್ಪು.

ಮಾಡುವ ವಿಧಾನ: ಅಕ್ಕಿಬೇಳೆ ಕಾಳುಗಳನ್ನು ಬೆಳಿಗ್ಗೆ ನೆನೆಸಿಕೊಳ್ಳಿ. ಇದು ನಾಲ್ಕೈದು ತಾಸು ನೆಂದ ಮೇಲೆ ನೀರು ಬಾಗಿಸಿ, ಅವಲಕ್ಕಿಯನ್ನು ನೆನೆಸಿಕೊಂಡು ಇದರ ಜೊತೆ ಸೇರಿಸಿ ನುಣ್ಣಗೆ ರುಬ್ಬಿಕೊಂಡು ಆಮೇಲೆ ಸಬ್ಬಸ್ಸಿಗೆ ಸೊಪ್ಪನ್ನೂ ಸೇರಿಸಿ ಮತ್ತೊಮ್ಮೆ ಮಿಕ್ಸಿ ಮಾಡಿಕೊಂಡು ಉಪ್ಪು ಹಾಕಿ. ಹಿಟ್ಟು ಸ್ವಲ್ಪ ಹುಳಿ ಬಂದ ಮೇಲೆ ಕಾದ ತವಾದ ಮೇಲೆ ಸೆಟ್‌ದೋಸೆ ಆಕಾರಕ್ಕೆ ದೋಸೆ ಹೊಯ್ದು ಎರಡೂ ಕಡೆ ಚೆನ್ನಾಗಿ ಬೇಯಿಸಿಕೊಳ್ಳಿ. ಬಿಸಿ ಇರುವಾಗಲೆ ಚಟ್ನಿಯೊಂದಿಗೆ ಸವಿಯಿರಿ. ಬೇಕಿದ್ದರೆ,ಹಿಟ್ಟನ್ನು ಸಂಜೆಗೆ ತಯಾರಿಸಿಕೊಂಡು ಬೆಳಿಗ್ಗೆ ದೋಸೆ ಮಾಡಬಹುದು.



ಹೆಸರುಕಾಳಿನ ದೋಸೆ

ಬೇಕಾಗುವ ಸಾಮಗ್ರಿ: ಹೆಸರುಕಾಳು ಒಂದು ಕಪ್, ಅಕ್ಕಿ ಅರ್ಧ ಕಪ್, ತೆಂಗಿನಕಾಯಿತುರಿ ಕಾಲು ಕಪ್, ಕಡಲೆ ಬೇಳೆ ಒಂದು ಚಮಚ, ಶುಂಠಿ ಒಂದು ಅಂಗುಲ, ರುಚಿಗೆ ಉಪ್ಪು.

ಮಾಡುವ ವಿಧಾನ: ಹೆಸರುಕಾಳು, ಅಕ್ಕಿ, ಕಡಲೆ ಬೇಳೆ ಎಲ್ಲವನ್ನೂ ಬೇರೆ ಬೇರೆಯಾಗಿ ಐದರಿಂದ ಆರು ತಾಸು ನೆನೆಸಿಕೊಳ್ಳಿ. ನಂತರ ನೀರು ಬಾಗಿಸಿ, ಕಾಯಿತುರಿ, ಶುಂಠಿ ಸೇರಿಸಿ ನುಣ್ಣಗೆ ರುಬ್ಬಿಕೊಂಡು ಉಪ್ಪು ಸೇರಿಸಿ ಹಿಟ್ಟನ್ನು ಹದ ಮಾಡಿಕೊಂಡು ಹತ್ತು ನಿಮಿಷ ಬಿಟ್ಟು ನಾನ್‌ಸ್ಟಿಕ್ ತವಾದ ಮೇಲೆ ತೆಳುವಾಗಿ ದೋಸೆ ಹೊಯ್ದು ಬೇಯಿಸಿರಿ.ಇದನ್ನು ಬಿಸಿ ಇರುವಾಗಲೆ ಕಾಯಿಚಟ್ನಿಯೊಂದಿಗೆ ಸವಿಯಿರಿ.

ಚಿರೋಟಿ ರವೆ ಉತ್ತಪ್ಪ



ಬೇಕಾಗುವ ಸಾಮಗ್ರಿ: ಚಿರೋಟಿ ರವೆ ಒಂದೂವರೆ ಕಪ್, ಮೊಸರು ಒಂದು ಕಪ್, ತುರಿದುಕೊಂಡ ಕ್ಯಾರೆಟ್ ಒಂದು ಕಪ್, ಕೊಚ್ಚಿದ ಈರುಳ್ಳಿ ಅರ್ಧ ಕಪ್, ಹಸಿಮೆಣಸು ಎರಡು ಅಥವಾ ಖಾರಕ್ಕೆ ತಕ್ಕಷ್ಟು, ಕೊಚ್ಚಿದ ಶುಂಠಿ ಒಂದು ಚಮಚ, ಕೊಚ್ಚಿಕೊಂಡ ಕೊತ್ತಂಬರಿ ಸೊಪ್ಪು ಅಥವಾÀ ಸಬ್ಬಸ್ಸಿಗೆ ಸೊಪ್ಪು ಸ್ವಲ್ಪ,ಕೊಚ್ಚಿದ ಬೇವಿನಸೊಪ್ಪು ಎರಡು ಎಸಳು, ರುಚಿಗೆ ಉಪ್ಪು.

ಮಾಡುವ ವಿಧಾನ: ಚಿರೋಟಿ ರವೆಗೆ ಉಪ್ಪು, ಮೊಸರು ಸೇರಿಸಿ ಅರ್ಧ ಗಂಟೆ ಬಿಡಿ. ನಂತರ ಇದಕ್ಕೆ ಮೇಲೆ ತಿಳಿಸಿದ ಎಲ್ಲ ಸಾಮಗ್ರಿಗಳನ್ನು ಬೆರೆಸಿ,ಚೆನ್ನಾಗಿ ಕಲಸಿ ಹಿಟ್ಟನ್ನು ಹದ ಮಾಡಿಕೊಳ್ಳಿ. ನಂತರ ನಾನ್‌ಸ್ಟಿಕ್ ತವಾದ ಮೇಲೆ ಸೆಟ್ ದೋಸೆ ಆಕಾರಕ್ಕೆ ಹಿಟ್ಟು ಹಾಕಿ ಮಧ್ಯಮ ಉರಿಯಲ್ಲಿ ಎರಡೂ ಕಡೆ ಚೆನ್ನಾಗಿ ಬೇಯಿಸಿಕೊಳ್ಳಿ. ಬಿಸಿ ಇರುವಾಗಲೆ ಬೆಣ್ಣೆಯೊಂದಿಗೆ ಸವಿಯಿರಿ.

ಅಲ್ಪಾವಧಿಯಲ್ಲಿ ಸಿದ್ಧಗೊಳ್ಳುವ ಪುಲಾವ್

ಕಲಾವತಿ ಬೈಚಬಾಳ



ಪಾಲಕ್ ಪುಲಾವ್

ಬೇಕಾಗುವ ಸಾಮಗ್ರಿ: ಒಂದು ಕಪ್ ಮಾಡಿಟ್ಟುಕೊಂಡಿರುವ ಅನ್ನ (ಬಾಸ್ಮತಿ ಅಥವಾ ಸೋನಾಮಸೂರಿ ಅಕ್ಕಿ ಬಳಸಬಹುದು), ಒಂದು ಚಿಕ್ಕ ಕಟ್ಟು ಪಾಲಕ್, ಐದಾರು ಬೆಳ್ಳುಳ್ಳಿ, ಅರ್ಧ ಇಂಚು ಹಸಿಶುಂಠಿ, ಮೂರು ಹಸಿಮೆಣಸಿನಕಾಯಿ, ಈರುಳ್ಳಿ, ಉಪ್ಪು, ಅರಿಸಿನ ಪುಡಿ, ತಲಾ ಎರಡು ಏಲಕ್ಕಿ, ಲವಂಗ, ಪಲಾವ್ ಎಲೆ, ಐದಾರು ಗೋಡಂಬಿ ಅಥವಾ ಬಾದಾಮಿ ಹಾಗೂ ಎಣ್ಣೆ ಅಥವಾ ತುಪ್ಪ.

ಮಾಡುವ ವಿಧಾನ: ಮೊದಲಿಗೆ ತೊಳೆದು, ಕತ್ತರಿಸಿಟ್ಟುಕೊಂಡ ಪಾಲಕ್, ಐದಾರು ಬೆಳ್ಳುಳ್ಳಿ, ಅರ್ಧ ಇಂಚು ಹಸಿಶುಂಠಿ, ಮೂರು ಹಸಿಮೆಣಸಿನಕಾಯಿಯನ್ನು ಮಿಕ್ಸರ್‌ಗೆ ಹಾಕಿ ನುಣ್ಣಗೆ ರುಬ್ಬಿಟ್ಟುಕೊಳ್ಳಿ. ಬಾಣಲೆಯಲ್ಲಿ ಎರಡ್ಮೂರು ಚಮಚ ಎಣ್ಣೆ ಅಥವಾ ತುಪ್ಪ ಹಾಕಿ, ಏಳೆಂಟು ಗೋಡಂಬಿ ಹಾಕಿ ಹುರಿದಿಟ್ಟುಕೊಳ್ಳಿ. ಬಳಿಕ ಅದೇ ಬಾಣಲೆಗೆ ಜೀರಿಗೆ, ಸಾಸಿವೆ, ತಲಾ ಎರಡು ಏಲಕ್ಕಿ, ಲವಂಗ, ಪಲಾವ್ ಎಲೆ, ಸ್ವಲ್ಪ ಕರಿಬೇವು, ಚಿಟಿಕೆ ಅರಿಶಿಣ ಹಾಕಿ. ಸಣ್ಣಗೆ ಕತ್ತರಿಸಿದ್ದ ಈರುಳ್ಳಿ ಹಾಕಿ, ಅದು ಬೆಂದ ನಂತರ ರುಬ್ಬಿಕೊಂಡಿದ್ದ ಪಾಲಕ್ ಮಿಶ್ರಣ ಹಾಕಿ, ಹಸಿ ವಾಸನೆ ಹೋಗುವವರೆಗೆ ಬೇಯಿಸಿಕೊಳ್ಳಿ. ಬಳಿಕ ಅಗತ್ಯಕ್ಕೆ ತಕ್ಕಷ್ಟು ಉಪ್ಪು, ಸ್ವಲ್ಪ ಗರಂ ಮಸಾಲಾ ಪುಡಿ ಹಾಕಿ ಚನ್ನಾಗಿ ಮಿಶ್ರಣ ಮಾಡಿ. ಅನ್ನ ಸೇರಿಸಿ, ಎರಡ್ಮೂರು ನಿಮಿಷ ಬೇಯಿಸಿದರೆ ಪಾಲಕ್ ಪುಲಾವ್ ಸವಿಯಲು ಸಿದ್ಧ.



ಸಬ್ಬಸ್ಸಿಗೆ ಭಾತ್

ಬೇಕಾಗುವ ಸಾಮಗ್ರಿ: ಮೊದಲೇ ಮಾಡಿಟ್ಟುಕೊಂಡಿದ್ದ ಒಂದು ಕಪ್‌ನಷ್ಟು ಅನ್ನ (ರಾತ್ರಿ ಉಳಿದ ಅನ್ನವನ್ನೂ ಬಳಸಬಹುದು), ಒಂದು ಹಿಡಿ ಸಣ್ಣಗೆ ಹೆಚ್ಚಿದ ಸಬ್ಬಸ್ಸಿಗೆ ಸೊಪ್ಪು, ಉದ್ದಗೆ ಸೀಳಿದ ಎಂಟ್ಹತ್ತು ಬೆಳ್ಳುಳ್ಳಿ, ಮೂರು ಹಸಿಮೆಣಸಿನಕಾಯಿ, ಉದ್ದುದ್ದಗೆ, ಸಣ್ಣಗೆ ಕತ್ತರಿಸಿದ ಸ್ವಲ್ಪ ಕ್ಯಾಬೇಜ್ (ಎಲೆಕೋಸು), ಒಂದು ಈರುಳ್ಳಿ, ಅರಿಸಿನ ಪುಡಿ, ಉಪ್ಪು, ಜೀರಿಗೆ, ಸಾಸಿವೆ, ಕರಿಬೇವು ಎಣ್ಣೆ/ ತುಪ್ಪ.

ಮಾಡುವ ವಿಧಾನ: ಬಾಣಲೆಯಲ್ಲಿ ಎರಡು ಚಮಚ ಎಣ್ಣೆ ಅಥವಾ ತುಪ್ಪ, ಜೀರಿಗೆ, ಸಾಸಿವೆ, ಕರಿಬೇವು ಹಾಗೂ ಉದ್ದಗೆ ಸೀಳಿದ ಹಸಿಮೆಣಸಿನಕಾಯಿ, ಬೆಳ್ಳುಳ್ಳಿ ಒಗ್ಗರಣೆ ಹಾಕಿ. ಸಣ್ಣಗೆ ಹೆಚ್ಚಿದ್ದ ಈರುಳ್ಳಿ ಹಾಕಿ ಬಾಡಿಸಿಕೊಳ್ಳಿ. ನಂತರ ಹೆಚ್ಚಿಟ್ಟ ಸೊಪ್ಪು, ಎರಡು ಚಿಟಿಕೆ ಅರಿಸಿನ ಪುಡಿ ಹಾಕಿ ಚನ್ನಾಗಿ ಬೇಯಿಸಿಕೊಳ್ಳಿ. ಮಾಡಿಟ್ಟ ಅನ್ನವನ್ನು ಬೆರೆಸಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಒಂದೆರೆಡು ನಿಮಿಷದ ವರೆಗೆ ಚನ್ನಾಗಿ ಮಿಶ್ರಣ ಮಾಡಿ. ಬಳಿಕ ಕ್ಯಾಬೇಜ್, ಸ್ವಲ್ಪ ಸಬ್ಬಸ್ಸಿಗೆ ಸೊಪ್ಪು ಹಾಕಿದರೆ ಸಬ್ಬಸ್ಸಿಗೆ ಭಾತ್ ಸವಿಯಲು ಸಿದ್ಧ.

ಮಕ್ಕಳ ನಡತೆ ಸುಧಾರಿಸುವುದು ಹೇಗೆ?

ಅಂತರಂಗ




ಅಕ್ಷರ ದಾಮ್ಲೆ

ನನ್ನ ಮಕ್ಕಳಿಬ್ಬರ ನಡುವೆ ಹೆಚ್ಚಿನ ವಯಸ್ಸಿನಂತರವಿಲ್ಲ. ಮಗನಿಗೆ 16 ಮಗಳಿಗೆ 15. ಆದರೆ ಇಬ್ಬರೂ ವಿಪರೀತ ಗುಟ್ಟುಗಳನ್ನು ಕಾಪಾಡಿಕೊಳ್ಳುತ್ತಾರೆ. ಅವರ ಫೋನಿಗೆ ಸದಾ ಲಾಕ್ ಮಾಡ್ತಾರೆ. ಸೋಷಿಯಲ್ ಮಿಡಿಯಾಗಳಲ್ಲಿ ನನ್ನದಾಗಲಿ, ಅಪ್ಪನದ್ದಾಗಲಿ ಫ್ರೆಂಡ್‌ಶಿಪ್ ರಿಕ್ವೆಸ್ಟ್ ಅಕ್ಸೆಪ್ಟ್ ಮಾಡಿಲ್ಲ. ತಡರಾತ್ರಿ ಫೋನಿನಲ್ಲಿ ಚಾಟ್ ಮಾಡುತ್ತಿರುತ್ತಾರೆ. ಈ ಗುಟ್ಟುಗುಟ್ಟಾಗಿಡುವ ಕಾರಣಕ್ಕೇ ಮನೇಲಿ ಜಗಳಗಳಾಗುತ್ತಿವೆ. ನಾವ್ಯಾರೂ ಅವರ ಖಾಸಗೀತನಕ್ಕೆ ಧಕ್ಕೆ ತರುವುದಿಲ್ಲ ಎಂಬ ಭರವಸೆ ನೀಡಿದಾಗಲೂ ಹೀಗೆ ಲಾಕ್ ಮಾಡುತ್ತಿರುವುದರಿಂದ ಆತಂಕವಾಗುತ್ತಿದೆ. ಮಕ್ಕಳನ್ನು ನಮ್ಮ ಸ್ನೇಹಿತವಲಯಕ್ಕೆ, ನಮ್ಮನ್ನು ಅವರ ಸ್ನೇಹಿತವಲಯಕ್ಕೆ ಪರಿಚಯಿಸಿಕೊಳ್ಳುವುದರಲ್ಲಿ ತೊಂದರೆ ಇದೆಯೇ? ಈ ನಡತೆಯನ್ನು ಹೇಗೆ ಸುಧಾರಿಸುವುದು?

ಬಹುಶಃ ಪ್ರಸ್ತುತ ಸಂದರ್ಭದಲ್ಲಿ ಅನೇಕ ಹೆತ್ತವರನ್ನು ಕಾಡುವ ಪ್ರಶ್ನೆ ಇದು. ಕೋವಿಡ್ ಬರುವವರೆಗೆ ಸ್ವಲ್ಪ ಶಿಸ್ತುಕ್ರಮ ವಹಿಸಿಯಾದರೂ ಮಕ್ಕಳನ್ನು ಮೊಬೈಲ್, ಲಾಪ್‌ಟಾಪ್ ಅಥವಾ ಇನ್ನಿತರ ಎಲೆಕ್ಟ್ರಾನಿಕ್ ಉಪಕರಣಗಳಿಂದ ದೂರ ಇಡುವುದು ಸಾಧ್ಯವಾಗಿತ್ತು. ಆದರೆ, ಕೋವಿಡ್ ಕಾಲದಲ್ಲಿ ಅನಿವಾರ್ಯವಾಗಿ ಮಕ್ಕಳಿಗೆ ಈ ಎಲ್ಲಾ ಉಪಕರಣಗಳನ್ನು ಒದಗಿಸಬೇಕಾಯಿತು. ಜತೆಗೆ ಎಷ್ಟೋ ಶಾಲೆಯಿಂದ ಕೊಡುವ ಮನೆಗೆಲಸಗಳು ಕೂಡಾ ವಾಟ್ಸ್ ಆ್ಯಪ್ ಅಥವಾ ಇ-ಮೇಲ್ ನಲ್ಲಿ ಬರುವುದಕ್ಕೆ ಶುರುವಾಯಿತು. ಮತ್ತೆ ತರಗತಿಗಳನ್ನು ಹಾಜರಾಗುವ ನೆಪದಲ್ಲಿ ವಿದ್ಯಾರ್ಥಿಗಳು ಇನ್ನೇನೋ ಟ್ಯಾಬ್‌ಗಳನ್ನು ತೆರೆದುಕೊಂಡು ಅದರಲ್ಲಿ ಚಾಟ್ ಮಾಡಿಕೊಂಡು ಸಮಯ ಕಳೆಯುವುದನ್ನು ಹೆತ್ತವರು ಅಸಹಾಯಕರಾಗಿ ನೋಡಬೇಕಾದ ಪರಿಸ್ಥಿತಿ ಬಂದಿದೆ. ಅಷ್ಟೇ ಅಲ್ಲದೇ, ಮಕ್ಕಳು ತಮಗೆ ಯಾವ ಫೋನ್ ಬೇಕು ಎಂಬುದನ್ನು ತಾವೇ ನಿರ್ಧರಿಸಿ, ಅದರ ಮೊತ್ತದ ಪರಿವೆಯೇ ಇಲ್ಲದೆ ಹೆತ್ತವರ ಮೇಲೆ ಒತ್ತಡ ಹೇರುವಂತಹ ಪರಿಸ್ಥಿತಿಯನ್ನೂ ಕಾಣುತ್ತಿದ್ದೇವೆ. ಅದರ ಜೊತೆಗೆ ಮೇಲಿನ ಪ್ರಶ್ನೆಯಲ್ಲಿ ಹೇಳಿದಂತೆ ಮಕ್ಕಳು ತಮ್ಮ ಉಪಕರಣಗಳಲ್ಲಿ ಏನು ಮಾಡುತ್ತಿದ್ದಾರೆ ಎಂಬುದನ್ನೇ ಕಂಡುಹಿಡಿಯಲಾಗದ ಪೇಚಾಟಕ್ಕೆ ಸಿಲುಕಿದ್ದಾರೆ ಕೂಡಾ. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಪರಿಹರಿಸಬೇಕಾದರೆ, ಹೆತ್ತವರೆಲ್ಲರೂ ಒಂದಾಗಬೇಕು ಮತ್ತು ಎಲ್ಲರೂ ಒಮ್ಮತದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಆವಾಗ, ಪ್ರತಿಯೊಂದು ಮನೆಯ ಮಹಾಭಾರತಗಳು ಕಡಮೆಯಾಗಬಹುದು.

ಅನೇಕ ಸಂಶೋಧನೆಗಳ ಪ್ರಕಾರ ಹೇಳುವುದಾದರೆ, ಸುಮಾರು 12ರ ವಯಸ್ಸಿನವರೆಗೆ ಮಕ್ಕಳಿಗೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ನಿಷಿದ್ಧ. ಕೆಲವರು ಇದನ್ನು ಇನ್ನೂ ಹೆಚ್ಚಿಸಿ, 16ರವರೆಗೆ ಅಂತಲೂ ಹೇಳಿದ್ದಾರೆ. ಆಮೇಲೂ ಕೂಡಾ ದಿನಕ್ಕೆ ಒಂದೆರಡು ಗಂಟೆಗಳಿಗಿಂತ ಹೆಚ್ಚಾಗಿ ಬಳಸುವುದು ಉತ್ತಮವಲ್ಲ. ಇದನ್ನು ಮಕ್ಕಳಿಗೆ ತಿಳಿಹೇಳಬೇಕು. ಮತ್ತು ಮಕ್ಕಳಿಗೆ ತಮ್ಮ ಜೀವನದಲ್ಲಾಗುತ್ತಿರುವಂತಹ ಏರುಪೇರುಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಆವಾಗ ಅವರುಗಳ ಅಡಗಿಸಿಡುವ ಪ್ರವೃತ್ತಿಯನ್ನು ನಿಧಾನವಾಗಿ ಕಡಮೆ ಮಾಡಬಹುದು. ಅವರ ಸ್ನೇಹಿತ ವಲಯದಲ್ಲಿ ಇರುವುದು ಯಾವ ಕಾರಣಕ್ಕೂ ತಪ್ಪಲ್ಲ. ಬದಲಾಗಿ ಹಿಂದಿನಿಂದಲೂ ಹೇಳಿರುವ ಮಾತೆಂದರೆ, ಮಕ್ಕಳು ದೊಡ್ಡವರಾಗುತ್ತಿದ್ದ ಹಾಗೆಯೇ, ಅವರನ್ನು ಸ್ನೇಹಿತರಂತೆ ಕಾಣಿ ಅಂತ.



ಮಾತ್ರವಲ್ಲ, ಈಗಿನ ಮಕ್ಕಳ ಆತಂಕಗಳು ಅವರು ಒಳಗಾಗುವ ಕೆಲವು ಚಟಗಳು ಮೊದಲೇ ಗೊತ್ತಾದರೆ, ಆವಾಗ ಅವರನ್ನು ಅದರ ಬಲಿಪಶುಗಳಾಗುವುದನ್ನು ತಡೆಯುವುದಕ್ಕೂ ಸಾಧ್ಯವಾಗುತ್ತದೆ. ಈಗ ಅವರಿಗೆ ನಿಮ್ಮ ಶಿಸ್ತಿನ ಕ್ರಮ ಸ್ವಲ್ಪ ಹೇರಿಕೆ ಅಂತ ಅನ್ನಿಸಿದರೂ, ಮುಂದೊಂದು ದಿನ ಅದರ ಮಹತ್ವದ ಅರಿವು ಅವರಿಗಾಗುತ್ತದೆ. ಹೀಗೆ ಮಾಡಬೇಕಾದರೆ, ದಯವಿಟ್ಟು ಪೋಷಕರಾಗಿ ನಿಮಗಾಗುವ ಆತಂಕಗಳನ್ನೂ ಅವರಿಗೆ ತಿಳಿಸಿ. ಎರಡೂ ಮಕ್ಕಳಿಗೂ ಒಂದೇ ರೀತಿಯ ನಿಯಮಗಳನ್ನು ಹಾಕಿ. ಈಗಲೇ ನಿಯಂತ್ರಣಕ್ಕೆ ತನ್ನಿ. ಇನ್ನೂ ಕಾಲ ಮಿಂಚಿಲ್ಲ. ❖

ಜೈಲಿನ ಹೊರಗೆ ಬಿಗಿ ಭದ್ರತೆ: ಶೀಘ್ರ ಬಿಡುಗಡೆಗಾಗಿ ಅಭಿಮಾನಿಗಳಿಂದ ಪೂಜೆ

ಬಳ್ಳಾರಿ: ಕಿರುಕೊಠಡಿಯಲ್ಲಿ ದರ್ಶನ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಗುರುವಾರ ಬೆಂಗಳೂರಿನಿಂದ ಬಳ್ಳಾರಿ ಕಾರಾಗೃಹಕ್ಕೆ ಸ್ಥಳಾಂತರಗೊಂಡಿದ್ದು, ಶುಕ್ರವಾರ ಬೇಸರದಲ್ಲೇ ಕಳೆದರು.

'ಹೊಸ ಜಾಗ, ಸೌಲಭ್ಯಗಳು ಇಲ್ಲದ ಕೊಠಡಿಯಲ್ಲಿ ಇರಿಸಿದ್ದ ದರ್ಶನ್ ಬೇಸರದಲ್ಲಿದ್ದರು. ಬೆಂಗಳೂರಿನಿಂದ ತಮ್ಮೊಂದಿಗೆ ಆಧ್ಯಾತ್ಮದ ಎರಡು ಪುಸ್ತಕಗಳನ್ನು ತಂದಿದ್ದರು. ಅದರಲ್ಲೊಂದು ಲಲಿತಾ ಸಹಸ್ರನಾಮ ಶ್ಲೋಕದ್ದಾಗಿತ್ತು. ಅದನ್ನು ಓದುತ್ತಿರಬಹುದು' ಎಂದು ಕಾರಾಗೃಹದ ಅಧಿಕಾರಿಗಳು ತಿಳಿಸಿದರು. ದರ್ಶನ್ ಇರುವ ಹೊರ ವಿಶೇಷ ಭದ್ರತಾ ಕೊಠಡಿಯು 10X6 ಅಡಿ ವಿಸ್ತೀರ್ಣದ್ದಾಗಿದ್ದು, ಅದರಲ್ಲಿ ಶೌಚಾಲಯವೂ ಇದೆ.

ಜೈಲಿನ ಮೆನು ಪ್ರಕಾರ, ಶುಕ್ರವಾರ ಕೈದಿಗಳಿಗೆ ಬೆಳಿಗ್ಗೆ ಉಪ್ಪಿಟ್ಟು (355 ಗ್ರಾಂ), ಮಧ್ಯಾಹ್ನ ಅನ್ನ (355 ಗ್ರಾಂ)-ಸಾಂಬಾರು (655 ಗ್ರಾಂ),ಮಜ್ಜಿಗೆ (205 ಎಂ.ಎಲ್) ನೀಡಲಾಯಿತು. 'ಸಂಜೆ ಮಾಂಸಾಹಾರ ಚಿಕನ್ ನೀಡಲಾಯಿತು' ಎಂದು ಅಧಿಕಾರಿಗಳು ಹೇಳಿದರು. ಕೈದಿಗಳಿಗೆ ಚಿಕನ್ 200 ಗ್ರಾಂ, ಮಟನ್ ಆದರೆ 90 ಗ್ರಾಂ ನೀಡಲಾಗುತ್ತದೆ.

ಈ ಎಲ್ಲದರ ಮಧ್ಯೆ ಅಭಿಮಾನಿಗಳು ನಗರದ ಅಧಿದೇವತೆ ಕನಕದುರ್ಗೆ ದೇವಾಲಯದಲ್ಲಿ ದರ್ಶನ್ ಸೌಖ್ಯ ಹಾಗೂ ಶೀಘ್ರ ಬಿಡುಗಡೆಗೆ ಪೂಜೆ ಸಲ್ಲಿಸಿದರು. 501 ತೆಂಗಿನ ಕಾಯಿ ಒಡೆದರು. ಪೂಜೆ ಮಾಡಿಸಿದ ಕುಂಕುಮವನ್ನು ದರ್ಶನ್‌ಗೆ ತಲುಪಿಸಲು ಜೈಲಿನ ಅಧಿಕಾರಿಗಳಿಗೆ ಮನವಿ ಮಾಡಿದರು.

ದರ್ಶನ್ ಇರುವ ಕಾರಣಕ್ಕೆ ಬಳ್ಳಾರಿ ಜೈಲಿನ ಹೊರಗೆ ಬಿಗಿ ಭದ್ರತೆ ಕಲ್ಪಿಸಲಾಗಿದೆ. ಜೈಲಿನಲ್ಲಿ ಬಂದಿಯಾಗಿರುವ ತಮ್ಮವರನ್ನು ನೋಡಲು ಕುಟುಂಬಸ್ಥರು ಶುಕ್ರವಾರವೂ ಬಂದಿದ್ದರು. ಅವರು ತಂದಿದ್ದ ಆಹಾರದ ಪೊಟ್ಟಣಗಳನ್ನು ಹಾಗೆಯೇ ಹಿಂದಕ್ಕೆ ಕಳುಹಿಸಲಾಯಿತು. ತಮ್ಮವರನ್ನು ಕಾಣಲು ರಾಯಚೂರಿನಿಂದ ರೊಟ್ಟಿ, ಶೇಂಗಾ ಪುಡಿಯೊಂದಿಗೆ ಬಂದಿದ್ದ ಕುಟುಂಬವೊಂದು, ಅದನ್ನು ತಲುಪಿಸಲಾಗದೇ ಬೇಸರದಲ್ಲೇ ಹಿಂದಿರುಗಿತು.



ನಟ ದರ್ಶನ್ ಶೀಘ್ರ ಬಿಡುಗಡೆಗೆ ಕೋರಿ ಅಭಿಮಾನಿಗಳು ಶುಕ್ರವಾರ ಬಳ್ಳಾರಿಯ ಕನಕದುರ್ಗಮ್ಮ ದೇವಾಲಯದ ಎದುರು 501 ತೆಂಗಿನಕಾಯಿ ಒಡೆದರು

ಹಾರ ಹಾಕಲು ಪ್ರತಿಮೆ ಹತ್ತಿದ ಅಭಿಮಾನಿ

ಬಳ್ಳಾರಿ: ದರ್ಶನ್ ಬಿಡುಗಡೆಗೆ ಪ್ರಾರ್ಥಿಸಿ ನಗರದ ಕನಕದುರ್ಗೆ ದೇಗುಲದಲ್ಲಿ ಪೂಜೆ ಮಾಡಿಸಿದ ಅಭಿಮಾನಿಗಳು ಬಳಿಕ ದೇಗುಲದ ಹೊರಗಿನ ದೇವಿಯ ಪ್ರತಿಮೆ ಮೇಲೆ ಹತ್ತಿ ಹಾರ ಹಾಕಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

'ನಗರದ ಅಧಿದೇವತೆ ಎಂದೇ ಪರಿಗಣಿಸಲಾಗಿರುವ ಕನಕದುರ್ಗೆ ಪ್ರತಿಮೆ ಮೇಲೆ ಕಾಲಿಟ್ಟು ಹಾರ ಹಾಕಿರುವುದು ಸರಿಯಲ್ಲ. ಇದರಿಂದ ಭಕ್ತರ ಭಾವನೆಗಳಿಗೆ ಧಕ್ಕೆಯುಂಟಾಗಿದೆ. ಪ್ರತಿಮೆಗೆ ಹಾರ ಹಾಕಲೆಂದೇ ಕ್ರೇನ್ ವ್ಯವಸ್ಥೆ ಇದೆ. ಅದನ್ನು ಬಳಸಬಹುದಿತ್ತು' ಎಂದು ದೇವಸ್ಥಾನದ ಧರ್ಮದರ್ಶಿ ಗಾದೆಪ್ಪ ಹೇಳಿದ್ದಾರೆ.

'ಬಂದೀಖಾನೆ ಡಿಜಿಪಿಗೆ ನೋಟಿಸ್'

ಹುಬ್ಬಳ್ಳಿ: ತಪ್ಪು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. 9 ಜನರ ಅಮಾನತು ಆಗಿದೆ. ದರ್ಶನ್‌ಗೆ ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲಾಗಿದೆ. ಬಂದೀಖಾನೆ ಡಿಜಿಪಿಗೂ ನೋಟಿಸ್ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದರ್ಶನ್ ಪ್ರಕರಣದ ಬಗ್ಗೆ ಸುದ್ದಿಗಾರರ ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

ಇಂಡಿಯನ್ ಅಕಾಡೆಮಿ ಕಾಲೇಜಿನಲ್ಲಿ 'ಸಂಸ್ಥಾಪಕರ ದಿನ'

ಬೆಂಗಳೂರು: ಬೆಂಗಳೂರು ಉತ್ತರ ಭಾಗದ ಪ್ರತಿಷ್ಠಿತ ಕಾಲೇಜು ಇಂಡಿಯನ್ ಅಕಾಡೆಮಿ ಪದವಿ ಕಾಲೇಜಿನಲ್ಲಿ ಆ.30 ರಂದು 'ಸಂಸ್ಥಾಪಕರ ದಿನಾಚರಣೆ' ಆಚರಿಸಲಾಯಿತು.

ಕೇಂದ್ರ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)ಯ ಡಿಇಬಿಎಲ್ ವಿಭಾಗದ ವಿಜ್ಞಾನಿ ಹಾಗೂ ನಿರ್ದೇಶಕ ಡಾ. ಟಿ.ಎಮ್. ಕೊಟ್ರೇಶ್ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ ಮಾತನಾಡಿದ ಡಾ. ಟಿ.ಎಮ್. ಕೊಟ್ರೇಶ್ ಅವರು ವಿದ್ಯಾ ಸಂಸ್ಥೆಯ ಧ್ಯೇಯ, ದೂರದೃಷ್ಟಿ, ಕಾರ್ಯ ವೈಖರಿ ಕುರಿತು 'ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಏಳಿಗೆ ಹೊಂದಬೇಕಾದರೆ ದೂರದೃಷ್ಟಿ ಹಾಗೂ ಉತ್ತಮ ನಾಯಕತ್ವದ ಗುಣ ಇರಬೇಕು.ಅಂತಹಗುಣವಿರುವ ವ್ಯಕ್ತಿ ಅಥವಾ ಸಂಸ್ಥೆ ತನ್ನೊಂದಿಗಿರುವ ಎಲ್ಲರನ್ನೂ, ಎಲ್ಲವನ್ನೂ ಮುನ್ನಡೆಸಬಲ್ಲದು' ಎಂದು ಹೇಳಿದರು.

ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ. ಟಿ. ಸೋಮಶೇಖರ್ ಅವರು 'ಸಮುದಾಯದ ಒಳಿತಿಗಾಗಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಿದಾಗ ಮಾತ್ರವೇ ಗುರಿ ತಲುಪಲು ಸಾಧ್ಯ' ಎಂದರು.

ಇಂಡಿಯನ್ ಅಕಾಡೆಮಿ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ನಿರ್ದೇಶಕಿ ಡಾ. ರೀನಾ ಶ್ಯಾಂ ಅವರು ಸ್ವಾಗತ ಭಾಷಣ ಮಾಡಿದರೆ, ಇಂಡಿಯನ್ ಅಕಾಡೆಮಿ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಎನ್ ತಿಲಗಾ ಅವರು ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾ ಸಂಸ್ಥೆಗಳ ಬೆಳವಣಿಗೆ ಮತ್ತು ಸಾಧನೆಗಳ ಬಗ್ಗೆ ವಿವರಿಸಿದರು.

ಪದವಿ ಕಾಲೇಜಿನ ಉಪ ಪ್ರಾಂಶುಪಾಲೆ ಡಾ. ಸಿ.ಟಿ. ಮೀನಾಚಿ ಸುಂದರಂ ಅವರು ಮುಖ್ಯ ಅತಿಥಿ ಡಾ. ಟಿ.ಎಮ್. ಕೊಟ್ರೇಶ್ ಅವರನ್ನು ಪರಿಚಯಿಸಿ, ಸನ್ಮಾನಿಸಿದರು.



ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ. ಟಿ. ಸೋಮಶೇಖರ್ ಅವರು ಡಾ. ಟಿ.ಎಮ್. ಕೊಟ್ರೇಶ್ ಅವರನ್ನು ಸನ್ಮಾನಿಸಿದರು. ಕಾರ್ಯದರ್ಶಿ ಶ್ರೀಮತಿ ಭಾರತಿ ತುಮ್ಮಲ ಉಪಸ್ಥಿತರಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಚುನಾವಣೆಗೆ ಮೀನಮೇಷ: ಅನುದಾನಕ್ಕೆ ಕೊಕ್ಕೆ

15ನೇ ಹಣಕಾಸು ಆಯೋಗ–ಸ್ಥಳೀಯ ಸಂಸ್ಥೆಗಳಿಗೆ ಭಾಗಶಃ ಅನುದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: 15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಸ್ಥಳೀಯ ಸಂಸ್ಥೆಗಳಿಗೆ ಕರ್ನಾಟಕ ರಾಜ್ಯಕ್ಕೆ ಭಾಗಶಃ ಅನುದಾನವಷ್ಟೇ ಬಿಡುಗಡೆಯಾಗಿದೆ. ಇನ್ನೂ ₹11,826 ಕೋಟಿ ಬಿಡುಗಡೆಯಾಗಬೇಕಿದೆ.

2021ರಿಂದ 2026ರ ಅವಧಿಗೆ ₹55,754 ಕೋಟಿ ಅನುದಾನವನ್ನು (ಸ್ಥಳೀಯ ಸಂಸ್ಥೆ, ವಿಪತ್ತು ನಿರ್ವಹಣೆ ಹಾಗೂ ಸಹಾಯಾನುದಾನ) ಕರ್ನಾಟಕಕ್ಕೆ ಬಿಡುಗಡೆ ಮಾಡಲು ಆಯೋಗ ಶಿಫಾರಸು ಮಾಡಿತ್ತು. ಈ ವರೆಗೆ ₹39,704 ಕೋಟಿ ಬಿಡುಗಡೆಯಾಗಿದೆ. ಇದರಲ್ಲಿ ತೆರಿಗೆ ಪಾಲು ಹಂಚಿಕೆಯ ಬಳಿಕ ಆದಾಯ ಕೊರತೆ ಅನುದಾನವೂ (1,631 ಕೋಟಿ) ಸೇರಿದೆ. ಈ ಅನುದಾನವನ್ನು ಕೇಂದ್ರ ಸರ್ಕಾರ 2021-22ನೇ ಆರ್ಥಿಕ ವರ್ಷದಲ್ಲೇ ಬಿಡುಗಡೆಗೊಳಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ₹21,877 ಕೋಟಿ ಅನುದಾನ ಹಂಚಿಕೆ ಮಾಡಲಾಗಿತ್ತು. ಈ ವರೆಗೆ ರಾಜ್ಯಕ್ಕೆ ಬಂದಿರುವುದು ₹10,051 ಕೋಟಿ ಮಾತ್ರ. ₹27,877 ಕೋಟಿ ಸಹಾಯಾನುದಾನಕ್ಕೆ ಆಯೋಗ ಶಿಫಾರಸು ಮಾಡಿತ್ತು. ಇಲ್ಲಿಯವರೆಗೆ ₹19,852 ಕೋಟಿಯನ್ನು ಕೇಂದ್ರ ಕೊಟ್ಟಿದೆ.

ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸದ ಕಾರಣಕ್ಕೆ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಿಲ್ಲ ಎಂಬುದು ಕೇಂದ್ರದ ಸಮಜಾಯಿಷಿ. 'ಸಂವಿಧಾನದ 243 ಇ ವಿಧಿಯ ಅಡಿಯ ಪ್ರಕಾರ, ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸುವುದು ರಾಜ್ಯ ಸರ್ಕಾರಗಳ ಹೊಣೆ. ಚುನಾವಣೆ ನಡೆಸಲು ಅಡ್ಡಿಯಾಗಿರುವ ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸುವಂತೆ ಕರ್ನಾಟಕ ಸರ್ಕಾರಕ್ಕೆ ಹಲವು ಸಲ ಸಲಹೆ ನೀಡಲಾಗಿತ್ತು. ಆದರೂ, ರಾಜ್ಯ ಸರ್ಕಾರ ಈವರೆಗೆ ಚುನಾವಣೆ ನಡೆಸಿಲ್ಲ. ಉಳಿದ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ. ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಬಾಕಿ ಅನುದಾನ ನೀಡಲಾಗುತ್ತದೆ' ಎಂದು ಹಣಕಾಸು ಸಚಿವಾಲಯದ ಮೂಲಗಳು ತಿಳಿಸಿವೆ.

'ಆಯೋಗದ ಶಿಫಾರಸಿನ ಪ್ರಕಾರ, ಸಹಾಯನುದಾನವನ್ನು ವರ್ಷವಾರು ಬಿಡುಗಡೆ ಮಾಡಲಾಗಿದೆ. ನೋಡಲ್ ಸಚಿವಾಲಯಗಳ ಶಿಫಾರಸು ಹಾಗೂ ನಿಗದಿಪಡಿಸಿದ ಷರತ್ತುಗಳ ಅನ್ವಯ ರಾಜ್ಯಗಳಿಗೆ ಅನುದಾನ ವರ್ಗಾಯಿಸಲಾಗಿದೆ. ಯಾವುದೇ ರಾಜ್ಯಕ್ಕೆ ಸಹಾಯಾನುದಾನ ಬಾಕಿ ಇಲ್ಲ' ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ವಿಪತ್ತು ನಿರ್ವಹಣೆ: ದುಪ್ಪಟ್ಟು ಅನುದಾನ

ವಿಪತ್ತು ನಿರ್ವಹಣಾ ಅನುದಾನದ ರೂಪದಲ್ಲಿ ಐದು ವರ್ಷದ ಅವಧಿಗೆ ರಾಜ್ಯಕ್ಕೆ ₹4,369 ಕೋಟಿ ನಿಗದಿಪಡಿಸಲಾಗಿದೆ. ಆದರೆ, ಕಳೆದ ನಾಲ್ಕು ವರ್ಷಗಳಲ್ಲಿ ₹8,170 ಕೋಟಿ ಬಿಡುಗಡೆಯಾಗಿದೆ. ಅಂದರೆ, ಕೇಂದ್ರ ಸರ್ಕಾರವು ದುಪ್ಪಟ್ಟು ಅನುದಾನ ನೀಡಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕ ಹಾಗೂ ಹಿಮಾಚಲ ಪ್ರದೇಶಕ್ಕೆ ಅತಿ ಹೆಚ್ಚು ಅನುದಾನ ಕೊಡಲಾಗಿದೆ.

ಲೈಂಗಿಕ ಕಿರುಕುಳ: ದೈಹಿಕ ಶಿಕ್ಷಣ ಶಿಕ್ಷಕ ಅಮಾನತು

ಕಲಬುರಗಿ: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯ ನಡೆಸಿರುವ ಆರೋಪಗಳ ಹಿನ್ನೆಲೆಯಲ್ಲಿ ಜಿಲ್ಲೆಯ ಜೇವರ್ಗಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಪ್ರಭುಗೌಡ ಮಾಡಗಿ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಆದೇಶಿಸಿದ್ದಾರೆ.

ಪ್ರಭುಗೌಡ ತಮ್ಮೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ ಶಾಲೆಯ ಐವರು ವಿದ್ಯಾರ್ಥಿನಿಯರು ಲಿಖಿತ ದೂರು ಸಲ್ಲಿಸಿದ್ದರು. ಈ ಕುರಿತು ಜಂಟಿ ತಪಾಸಣಾ ವರದಿ ನೀಡುವಂತೆ ಜಿಲ್ಲಾಧಿಕಾರಿ ಫೌಜಿಯಾ ಬಿಸಿಎಂ ಇಲಾಖೆ ಜಿಲ್ಲಾ ಅಧಿಕಾರಿ ಪ್ರಭು ದೊರೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಜಾವೀದ್ ಕರಂಗಿ ಅವರಿಗೆ ಸೂಚಿಸಿದ್ದರು. ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಾಲ್ವರು ವಿದ್ಯಾರ್ಥಿನಿಯರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಕುರಿತು ತಿಳಿಸಿದ್ದರು. ಈ ವರದಿ ಆಧರಿಸಿ ಪ್ರಭುಗೌಡ ಅವರನ್ನು ಅಮಾನತುಗೊಳಿಸಲಾಗಿದೆ.

ಜೇವರ್ಗಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಓದುತ್ತಿರುವ ಎಲ್ಲರೂ ವಿದ್ಯಾರ್ಥಿನಿಯರೇ ಆಗಿದ್ದು, ಪುರುಷ ದೈಹಿಕ ಶಿಕ್ಷಣ ಶಿಕ್ಷಕನನ್ನು ನಿಯೋಜಿಸಿರುವ ಬಗ್ಗೆ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಸಂತ ಕುಮಾರ್ ಸೇರಿ ನಾಲ್ವರಿಗೆ 'ಮರಿದೇವರು ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪ್ರೊ. ಸಿ.ಎಚ್. ಮರಿದೇವರು ಪ್ರತಿಷ್ಠಾನ ದತ್ತಿ ಪ್ರಶಸ್ತಿ'ಗೆ ಪ್ರಾಧ್ಯಾಪಕ ಬಿ.ವಿ.ವಸಂತ ಕುಮಾರ್ ಸೇರಿ ನಾಲ್ವರು ಆಯ್ಕೆಯಾಗಿದ್ದಾರೆ.

ಶಿಕ್ಷಣ ಕ್ಷೇತ್ರದಿಂದ ವಸಂತ ಕುಮಾರ್ ಅವರನ್ನು, ಸಾಹಿತ್ಯ ಕ್ಷೇತ್ರದಿಂದ ಮ.ನಂಜುಂಡ ಸ್ವಾಮಿ, ಸಂಸ್ಕೃತಿ ಮತ್ತು ಕಲಾ ಕ್ಷೇತ್ರದಿಂದ ಸುಧಾ ನರಸಿಂಹರಾಜು, ಕೃಷಿ ಮತ್ತು ನೀರಾವರಿ ಕ್ಷೇತ್ರದಿಂದ ಸಿದ್ಧಗಂಗಯ್ಯ ಹೊಲತಾಳು ಮತ್ತು ಕನ್ನಡ ಸೇವೆಗಾಗಿ ಚಿಕ್ಕನಾಯಕನಹಳ್ಳಿ ಕನ್ನಡ ಸಂಘವನ್ನು ಆಯ್ಕೆ ಮಾಡಲಾಗಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಪ್ರಶಸ್ತಿಯು ತಲಾ ₹15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ತುಮಕೂರು ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾಗಿದ್ದ, ಲೇಖಕ ಹಾಗೂ ಶಿಕ್ಷಣ ತಜ್ಞ ಸಿ.ಎಚ್. ಮರಿದೇವರು ಅವರು ಈ ದತ್ತಿಯನ್ನು ಪರಿಷತ್ತಿನಲ್ಲಿ ಸ್ಥಾಪಿಸಿದ್ದಾರೆ.

ಶಿಕ್ಷಣ, ಸಾಹಿತ್ಯ, ಕೃಷಿ, ನೀರಾವರಿ, ಕನ್ನಡ ಸೇವೆ ಹಾಗೂ ಸಂಗೀತ ಕ್ಷೇತ್ರದಲ್ಲಿ ಮೌಲಿಕ ಸೇವೆ ಸಲ್ಲಿಸಿದ ಐವರು ಸಾಧಕರಿಗೆ ಪುರಸ್ಕಾರ ನೀಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.



ಬಿ.ವಿ.ವಸಂತ ಕುಮಾರ್



ಮ.ನಂಜುಂಡ ಸ್ವಾಮಿ



ಸುಧಾ ನರಸಿಂಹ ರಾಜು



ಸಿದ್ಧಗಂಗಯ್ಯ ಹೊಲತಾಳು

'ಭಾಷಾಂತರ ಶಾಖೆ' ರಚನೆಗೆ ಮನಸ್ಸು ಮಾಡದ ಕೆಪಿಎಸ್‌ಸಿ

ಒಂದನೇ ಪುಟದಿಂದ...

ಭಾಷಾಂತರವನ್ನು ಲೋಪಗಳಿಲ್ಲದಂತೆ ನಿರ್ವಹಿಸಲು ಶಾಖೆಯ ಅಗತ್ಯವಿದ್ದು, ಶಾಖೆ ಆರಂಭಿಸಲು ಅನುಮತಿ ನೀಡಿದರೆ ಭಾಷಾಂತರ ತಜ್ಞರು, ವಿಷಯ ಪರಿಣತರು, ಸಂಶೋಧಕರು, ಅಧಿಕಾರಿಗಳ ತಂಡವನ್ನು ನಿರ್ದೇಶನಾಲಯವೇ ನಿಯೋಜನೆ ಮಾಡಲಿದೆ ಎಂದು ಜುಲೈ 2021ರಲ್ಲಿ ಪತ್ರ ಬರೆಯಲಾಗಿದೆ.

'ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿದ್ದು, ಕಾಯ್ದೆಗಳು, ಕಾನೂನು, ಆದೇಶ, ತೀರ್ಪುಗಳನ್ನು ಇಂಗ್ಲಿಷ್ ಸೇರಿದಂತೆ ಬೇರೆ ಬೇರೆ ಭಾಷೆಗಳಿಂದ ತಪ್ಪಿಲ್ಲದಂತೆ, ಅರ್ಥ ವ್ಯತ್ಯಯವಾಗದಂತೆ ಕನ್ನಡಕ್ಕೆ ಅನುವಾದ ಮಾಡುವುದು ಅತ್ಯಂತ ಅಗತ್ಯ. ಹಾಗೆಯೇ, ರಾಜ್ಯ ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ನಡೆಸುವ ಬಹುತೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳೂ ಸೇರಿದಂತೆ ವಿವಿಧ ನೇಮಕಾತಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದರಿಂದ ಕಾಯಂ ಆದ ಭಾಷಾಂತರ ಶಾಖೆಯ ಅಗತ್ಯವಿದೆ' ಎಂದು ಪತ್ರದಲ್ಲಿ ವಿವರಿಸಲಾಗಿತ್ತು.

ಭಾಷಾಂತರಕಾರರು ಭಾಷಾಂತರಿಸಿದ ಕರಡು ಪ್ರತಿಯನ್ನು ಸಂಶೋಧನಾಧಿಕಾರಿಗಳು ಮೊದಲನೆಯ ಹಂತದಲ್ಲಿ ಪರಿಶೀಲಸಬೇಕು. ನಂತರ ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರ ಹಂತದ ಅಧಿಕಾರಿಗಳು ಕರಡಚ್ಚು ಪರಿಶೀಲನೆ ನಡೆಸುತ್ತಾರೆ. ಅಂತಿಮವಾಗಿ ಮುದ್ರಣಕ್ಕೆ ಕಳುಹಿಸಲಾಗುತ್ತಿದೆ. ಈ ಎಲ್ಲ ಪ್ರಕ್ರಿಯೆಗಳನ್ನು ನಿರ್ವಹಿಸಲು ಆಯೋಗದಲ್ಲೇ ಪ್ರತ್ಯೇಕ ಶಾಖೆಯ ಅಗತ್ಯವಿದೆ ಎಂದು ಮನವರಿಕೆ ಮಾಡಲಾಗಿತ್ತು ಎಂದು ನಿರ್ದೇಶನಾಲಯದ ಮೂಲಗಳು ಹೇಳಿವೆ.

'ಕೆಪಿಎಸ್‌ಸಿ ಇಂತಹ ಯಾವ ಕ್ರಮವನ್ನೂ ಕೈಗೊಳ್ಳದೆ ಇದೇ ಏಪ್ರಿಲ್‌ನಲ್ಲಿ ಭಾಷಾಂತರ ನಿರ್ದೇಶನಾಲಯಕ್ಕೆ ಪತ್ರ ಬರೆದು ಆಯೋಗದಲ್ಲಿ ಕೆಲವೊಂದು ಕಾಗದ ಪತ್ರಗಳನ್ನು ತರ್ಜುಮೆ ಮಾಡಲು ಇಬ್ಬರು ಭಾಷಾಂತರಕಾರರನ್ನು ನಿಯೋಜಿಸುವಂತೆ ಕೋರಿಕೆ ಸಲ್ಲಿಸಿತ್ತು. ಆದರೆ, ಅವರು ತರ್ಜುಮೆ ಮಾಡಿದ ಕರಡನ್ನು ವಿಷಯ ಪರಿಣತರಿಂದ ಪರಿಶೀಲಿಸದೆ ಮುದ್ರಣಕ್ಕೆ ಕಳುಹಿಸಿರುವುದು ಎಡವಟ್ಟುಗಳಿಗೆ ಕಾರಣ' ಎನ್ನುತ್ತಾರೆ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನಾ ಇಲಾಖೆಯ ಅಧಿಕಾರಿಗಳು.

ಮುಖ್ಯಾಂಶಗಳು

- ಭಾಷಾಂತರ ನಿಯಮ ಪಾಲಿಸದೆ ತರ್ಜುಮೆ
- ಪ್ರಶ್ನೆ ಸಿದ್ಧಪಡಿಸುವಾಗ ವಿಷಯ ಪರಿಣತರ ಕಡೆಗಣನೆ
- ಕರಡು ಪ್ರತಿ ಪರಿಶೀಲಿಸದೇ ಮುದ್ರಣಕ್ಕೆ

ಕೊಡಗಿನಲ್ಲಿ ಮುಂದುವರಿದ ಸಾಧಾರಣ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ಸಾಧಾರಣ ಮಳೆ ಮುಂದುವರಿದಿದೆ. ಶೀತಗಾಳಿ ಜೋರಾಗಿ ಬೀಸುತ್ತಿದೆ.

ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಭಾಗಮಂಡಲ, ಮಡಿಕೇರಿ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿಯಲ್ಲಿ ತಲಾ 3 ಸೆಂ.ಮೀನಷ್ಟು ಮಳೆಯಾಗಿದೆ.

ಧರೆಗುರುಳಿದ ಮರ; ವಾಹನ ಜಖಂ: ಹೊಸಪೇಟೆ (ವಿಜಯನಗರ)– ನಗರದಲ್ಲಿ ಶುಕ್ರವಾರ ಸಂಜೆ ಸುಂಟರಗಾಳಿ ರೂಪದ ಗಾಳಿ ಕೆಲ ಕ್ಷಣ ಬೀಸಿದ್ದರಿಂದ ಪಟೇಲ್ ನಗರದಲ್ಲಿ ಬೃಹತ್ ಮರ ಉರುಳಿ ಬಿತ್ತು. ಅದರಡಿ ಸಿಲುಕಿದ ಆಟೊದಲ್ಲಿದ್ದ ಇಬ್ಬರಿಗೆ ಯಾವುದೇ ಅಪಾಯ ಆಗಲಿಲ್ಲ. ನಂತರ ಸುರಿದ ಭಾರಿ ಮಳೆಯಿಂದ ಕೆಲ ಮನೆಗಳಿಗೆ ನೀರು ನುಗ್ಗಿತು.

ಪಟೇಲ್ ನಗರದಲ್ಲಿ ಮರಬಿದ್ದು ಹಲವು ಮನೆಗಳಿಗೆ ವಿದ್ಯುತ್ ಪೂರೈಕೆ ಬಂದ್ ಆಯಿತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	124.35	18,606	18,259
ಹಾರಂಗಿ	2,859	2,858.91	2,315	2,008
ಕಬಿನಿ	2,284.00	2,283.15	6,628	5,163
ಹೇಮಾವತಿ	2,922	2,921.90	11,861	12,375
ಲಿಂಗನಮಕ್ಕಿ	1,819	1,817.30	19,414	21,838
ಸೂಪಾ (ಮೀ)	564	560.32	14,288	8,203.49
ಮಾಣಿ	595	590.06	2,677	-
ತುಂಗಭದ್ರಾ	1,633	1,629.56	34,083	10,067
ಮಲಪ್ರಭಾ	2,079.5	2,078.40	4,544	3,000
ಘಟಪ್ರಭಾ	2175	2,174.22	22,470	22,470
ಭದ್ರಾ *	186	180.1	12,137	3,943
ಆಲಮಟ್ಟಿ (ಮೀ)	519.6	519.26	1,75,000	1,76,540
ನಾರಾಯಣಪುರ (ಮೀ)	492.25	490.97	1,85,000	1,78,500

* ನೆಲಮಟ್ಟದಿಂದ

'ಬಿಎಸ್‌ವೈ ಜೈಲಿಗೆ ಕಳಿಸುವವರು ಬಂದು ವಾದ ಮಂಡಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿನ ಬೆಳಗಾಯ್ತು ಎಂದರೆ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಜೈಲಿಗೆ ಹೋಗುತ್ತಾರೆ ಎಂದು ಆಡಳಿತಾರೂಢ ಕಾಂಗ್ರೆಸ್ ಸಚಿವರು, ಶಾಸಕರು ಹೇಳಿಕೆ ನೀಡುತ್ತಿದ್ದಾರೆ. ಹಾಗಾದರೆ, ಅಂತಹವರೆಲ್ಲಾ ಬಂದು ಕೋರ್ಟ್‌ನಲ್ಲಿ ವಾದ ಮಂಡಿಸಲಿ' ಎಂದು ಬಿ.ಎಸ್.ಯಡಿಯೂರಪ್ಪ ಪರ ಹಿರಿಯ ವಕೀಲರು ಹೈಕೋರ್ಟ್‌ನಲ್ಲಿ ನ್ಯಾಯಪೀಠದ ಮುಂದೆ ಮೌಖಿಕ ಸವಾಲು ಹಾಕಿದರು.



ಯಡಿಯೂರಪ್ಪ

'ಪೋಕ್ಸೊ ಪ್ರಕರಣದಲ್ಲಿ ಜಾಮೀನು ಮತ್ತು ಬೆಂಗಳೂರಿನ ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಯಡಿಯೂರಪ್ಪ ಪರ ಹಾಜರಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್, 'ದಿನ ಬೆಳಗಾಯ್ತು ಎಂದರೆ ಒಬ್ಬರಲ್ಲಾ ಒಬ್ಬ ಸಚಿವರು ಯಡಿಯೂರಪ್ಪ ಅವರನ್ನು ಪೋಕ್ಸೊ ಪ್ರಕರಣದಲ್ಲಿ ಪ್ರಾಸಿಕ್ಯೂಟ್ ಮಾಡಲಾಗುತ್ತದೆ. ಅವರು ನ್ಯಾಯಾಲಯಕ್ಕೆ ಶರಣಾಗಬೇಕು. ಜೈಲಿಗೆ ಹೋಗುತ್ತಾರೆ. ತಡೆಯಾಜ್ಞೆ ತೆರವು ಮಾಡುವಂತೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಹಾಗಾದರೆ, ಅಂತಹವರೆಲ್ಲಾ ಇಲ್ಲಿಗೆ ಬಂದು ವಾದ ಮಂಡಿಸಲಿ ನೋಡೋಣ' ಎಂದು ಮೌಖಿಕವಾಗಿ ಸವಾಲು ಎಸೆದರು.



'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಎಲ್‌ಎ, ಎಂಪಿಗಳು ಪೋಸ್ಕೊ, ಪೋಸ್ಕೊ ಎಂದು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ಯಡಿಯೂರಪ್ಪನವರ ಹಣೆಬರಹದಲ್ಲಿ ಇದ್ದರೆ ಅವರು ಜೈಲಿಗೆ ಹೋಗುತ್ತಾರೆ ಬಿಡಿ' ಎಂದರು.

ಇದಕ್ಕೆ ನ್ಯಾಯಮೂರ್ತಿಗಳು, 'ಅದೇನದು ಪೋಸ್ಕೊ, ಪೋಸ್ಕೊ' ಎಂದು ಪ್ರಶ್ನಿಸಿದರಲ್ಲದೆ, 'ಅದು ಪೋಸ್ಕೊ ಅಲ್ಲ ಪೋಕ್ಸೊ' ಎಂದು ಲಘು ಧಾಟಿಯಲ್ಲಿ ಹೇಳಿದರು. ಆಗ ನಾಗೇಶ್ ಅವರು, 'ಪೋಸ್ಕೊ ಎಂದು ನಾನು ಹೇಳುತ್ತಿಲ್ಲ. ಯಡಿಯೂರಪ್ಪ ಅವರನ್ನು ಸ್ಮರಿಸುತ್ತಿರುವ ರಾಜಕಾರಣಿಗಳು ಪೋಸ್ಕೊ, ಪೋಸ್ಕೊ ಎನ್ನುತ್ತಿದ್ದಾರೆ' ಎಂದು ತಾವು ನುಡಿದ ಪದದ ವ್ಯಂಗ್ಯವನ್ನು ಬಿಡಿಸಿಟ್ಟರು.

ಸಿಐಡಿ ಪರ ಹಾಜರಾಗಿದ್ದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯ್ಕ್ ಅವರು, 'ಈ ಪ್ರಕರಣದಲ್ಲಿ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗುತ್ತಿದ್ದು ಅದಕ್ಕಾಗಿ ಸ್ವಲ್ಪ ಕಾಲಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. 'ಅಂತಿಮವಾಗಿ ನ್ಯಾಯಪೀಠವು ಮಧ್ಯಂತರ ಆದೇಶ ಮುಂದುವರಿಯಲಿದ್ದು, ವಿಚಾರಣೆಯನ್ನು ಸೆಪ್ಟೆಂಬರ್ 5ಕ್ಕೆ ಮುಂದೂಡಲಾಗಿದೆ' ಎಂದು ಆದೇಶಿಸಿತು.

ಕೆ.ಎಚ್.ಶ್ರೀನಿವಾಸ್ ನಿಧನ

ಬೆಂಗಳೂರು: ಮಾಜಿ ಸಚಿವ ಕೆ.ಎಚ್. ಶ್ರೀನಿವಾಸ್ (86) ಅವರು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಿಧನರಾದರು.

ಅವರಿಗೆ ಪತ್ನಿ ಶಾಲಿನಿ ಶ್ರೀನಿವಾಸ್, ಮೂವರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಕಾನುಗೋಡು ಗ್ರಾಮದಲ್ಲಿ 1938ರ ಫೆಬ್ರವರಿ 5ರಂದು ಜನಿಸಿದರು. ಶ್ರೀನಿವಾಸ್ ಅವರು 1967ರಲ್ಲಿ ಸಾಗರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆ ಆಗುವ ಮೂಲಕ ರಾಜಕೀಯ ಜೀವನ ಆರಂಭಿಸಿದರು. ಆ ಚುನಾವಣೆಯಲ್ಲಿ ಅವರು ಕಾಗೋಡು ತಿಮ್ಮಪ್ಪ ಅವರನ್ನು 700 ಮತಗಳಿಂದ ಪರಾಭವಗೊಳಿಸಿದ್ದರು. 1978ರಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆ ಆದರು. ಅರಸು ಸಂಪುಟದಲ್ಲಿ ಇಂಧನ, ವಾರ್ತಾ, ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

1985ರಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಪುನರಾಯ್ಕೆಯಾದರು. 1989 ಮತ್ತು 1994ರ ಚುನಾವಣೆಗಳಲ್ಲಿ ಸೋತರು. 1996ರಲ್ಲಿ ಜೆಡಿಎಸ್ ಸೇರಿದರು. 1998-2004 ಅವಧಿಗೆ ವಿಧಾನಪರಿಷತ್ ಸದಸ್ಯರಾಗಿದ್ದರು. ಎಸ್.ಎಂ. ಕೃಷ್ಣ ಅವರ ಅವಧಿಯಲ್ಲಿ ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದರು. ಜೆಡಿಎಸ್ ತೊರೆದು ಅವರು ಬಿಜೆಪಿ ಸೇರಿದರು. ಅಲ್ಲಿ ಪಕ್ಷದ ಪ್ರಣಾಳಿಕೆ ಸಮಿತಿಯಲ್ಲಿ ಕಾರ್ಯ ನಿರ್ವಹಿಸಿದರು. ಬಿ.ಎಸ್.ಯಡಿಯೂರಪ್ಪ ಅವರು ಕೆಜೆಪಿ ಕಟ್ಟಿದಾಗ ಆ ಪಕ್ಷವನ್ನು ಸೇರಿದರು.

ಕೆಜೆಪಿ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷರಾಗಿದ್ದರು. 2004ರಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಆ ಬಳಿಕ ಅವರು ಸಕ್ರಿಯ ರಾಜಕಾರಣದಿಂದ ದೂರ ಉಳಿದರು.

ಕುವೆಂಪು ಮತ್ತು ಶಾಂತವೇರಿ ಗೋಪಾಲಗೌಡ ಅವರ ಪ್ರಭಾವಕ್ಕೆ ಒಳಗಾಗಿದ್ದ ಶ್ರೀನಿವಾಸ್, ಯು.ಆರ್. ಅನಂತಮೂರ್ತಿ, ಕೆ.ವಿ.ಸುಬ್ಬಣ್ಣ, ಲಂಕೇಶ್ ಅವರ ಒಡನಾಡಿಯೂ ಆಗಿದ್ದರು. ಕವಿಯೂ ಆಗಿದ್ದ ಅವರು ಕಾನುಗೋಡು ಮನೆ, ಚಂದ್ರ ನೀನೊಬ್ಬನೆ, ಒಳಸೊನ್ನೆ ಹೊರಸೊನ್ನೆ, ಗುಬ್ಬಚ್ಚಿಯ ಗೂಡು ಕವನ ಸಂಕಲನಗಳನ್ನು ಪ್ರಕಟಿಸಿದ್ದರು. ಉತ್ತಮ ಸಂಸದೀಯ ಪಟುವೂ ಆಗಿದ್ದರು.

ಶಿಕ್ಷಣ ಕ್ಷೇತ್ರಕ್ಕೂ ಅವರು ಕೊಡುಗೆ ನೀಡಿದ್ದರು. ಸಾಗರ ವಿದ್ಯಾವರ್ಧಕ ಸಂಘದ ಮೊದಲ ಕಾರ್ಯದರ್ಶಿಯಾಗಿದ್ದರು. ಈ ಸಂಘವು ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನವಾಗಿ ಬದಲಾಯಿತು. ಕೆಲ ಕಾಲ ಕಾರ್ಯದರ್ಶಿಯಾಗಿದ್ದ ಶ್ರೀನಿವಾಸ್, ಬಳಿಕ ಅಧ್ಯಕ್ಷರಾಗಿದ್ದರು. ಸಾಗರದ ಲಾಲ್ ಬಹದ್ದೂರ್ ಕಾಲೇಜು ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.



ಕೆ.ಎಚ್ ಶ್ರೀನಿವಾಸ್



❦ ಸುಭಾಷಿತ ❦

ಮಕ್ಕಳ ತಾಯಿಯಾಗಿ ನಾನು ಪದಕ ಗೆಲ್ಲಬಲ್ಲೆನಾದರೆ, ನೀವು ಸಹ ನಿಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಬಹುದು.

-ಮೇರಿ ಕೋಮ್

ಉತ್ತರದಾಯಿತ್ವ ಇಲ್ಲದ ಕೆಪಿಎಸ್‌ಸಿ ಬೇಕಿದೆ ಆಮೂಲಾಗ್ರ ಬದಲಾವಣೆ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಇತ್ತೀಚೆಗೆ ನಡೆಸಿದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದ ರೀತಿ ಅತ್ಯಂತ ಕಳಪೆಯಾಗಿತ್ತು. ಈ ಕಾರಣಕ್ಕೆ ಆಯೋಗ ಮತ್ತೆ ಸುದ್ದಿಯಲ್ಲಿದೆ. ಕೆಪಿಎಸ್‌ಸಿ ಒಳ್ಳೆಯದಲ್ಲದ ಕಾರಣಕ್ಕೆ ಸುದ್ದಿಯಾಗುವುದೇ ಹೆಚ್ಚು. ಭ್ರಷ್ಟಾಚಾರ, ಸ್ವಜನಪಕ್ಷಪಾತ, ಹಟಮಾರಿ ಧೋರಣೆಯಂತಹ ಕಾರಣಗಳಿಗಾಗಿ ಸುದ್ದಿಯಾಗುತ್ತಲೇ ಇರುತ್ತದೆ. ಆಯೋಗದ ಕಾರ್ಯವೈಖರಿ ಸುಧಾರಣೆಗೆ ನಡೆಸಿದ ಎಲ್ಲ ಯತ್ನಗಳು ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತೆ ಆಗಿವೆ. ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಸೇರಿ ಸಂಬಂಧಪಟ್ಟ ಎಲ್ಲರೂ ತಮಗೆ ಉತ್ತರದಾಯಿತ್ವ ಇಲ್ಲವೇ ಇಲ್ಲ ಎನ್ನುವಂತೆ ನಡೆದುಕೊಳ್ಳುತ್ತಿದ್ದಾರೆ. ಇದಕ್ಕೆ ಮೂಗುದಾರ ಇಲ್ಲದಂತಾಗಿದೆ. ರಾಜ್ಯ ಸರ್ಕಾರ, ರಾಜ್ಯಪಾಲರು ತಕ್ಷಣವೇ ಮಧ್ಯಪ್ರವೇಶ ಮಾಡಿ ಶಿಸ್ತಿನಿಂದ ನಡೆಯುವಂತೆ ಮಾಡದೇ ಇದ್ದರೆ ಇದು ಇನ್ನಷ್ಟು ಅಧೋಗತಿಗೆ ಇಳಿಯುವ ಸಾಧ್ಯತೆ ಇದೆ. ಕರ್ನಾಟಕದ ಯುವಕರ ಕನಸುಗಳನ್ನು ನುಚ್ಚುನೂರು ಮಾಡುವುದೇ ತನ್ನ ಗುರಿ ಎಂದು ಕೆಪಿಎಸ್‌ಸಿ ಭಾವಿಸಿದಂತೆ ಇದೆ. ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಗಳ ಕನ್ನಡ ಅನುವಾದ ತೀರಾ ಅಸಂಬದ್ಧವಾಗಿತ್ತು. ಇಂಗ್ಲಿಷ್ ಮತ್ತು ಕನ್ನಡದ ಕೆಲವು ಪ್ರಶ್ನೆಗಳು ತದ್ವಿರುದ್ಧ ಅರ್ಥ ಧ್ವನಿಸುವಂತಿದ್ದವು. ಹಲವಾರು ವರ್ಷಗಳಿಂದ ಕಷ್ಟಪಟ್ಟು ತಯಾರಿ ನಡೆಸಿದ ಅಭ್ಯರ್ಥಿಗಳು ಪ್ರಶ್ನೆಗಳನ್ನು ನೋಡಿ ಕಕ್ಕಾಬಿಕ್ಕಿಯಾದರು ಎಂದೂ ವರದಿಯಾಗಿದೆ. ಗೂಗಲ್ ಅಥವಾ ಕೃತಕ ಬುದ್ಧಿಮತ್ತೆಯನ್ನು ಬಳಸಿ ಭಾಷಾಂತರ ಮಾಡಲಾಗಿದೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ. ಈ ಆರೋಪಕ್ಕೆ ಸ್ಪಷ್ಟನೆ ನೀಡಿರುವ ಕೆಪಿಎಸ್‌ಸಿ ಕಾರ್ಯದರ್ಶಿ, ಪ್ರಶ್ನೆಗಳನ್ನು ಭಾಷಾಂತರ ಇಲಾಖೆಯ ಭಾಷಾಂತರಕಾರರೇ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇಷ್ಟು ಕೆಟ್ಟದಾಗಿ ಭಾಷಾಂತರ ಮಾಡಿದವರಿಗೆ ತಕ್ಕ ಶಿಕ್ಷೆ ಆಗಬೇಕು. ಕನ್ನಡದ ಕಗ್ಗೊಲೆಗೆ ಕಾರಣರಾದ ಎಲ್ಲರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಅನುವಾದದಲ್ಲಿನ ಪ್ರಮಾದದ ಬಗ್ಗೆ ವಿಷಾದ ವ್ಯಕ್ತಪಡಿಸುವ ಸೌಜನ್ಯ ಕೂಡ ಕೆಪಿಎಸ್‌ಸಿ ಆಡಳಿತಕ್ಕೆ ಇಲ್ಲದಿರುವುದು ನೋವಿನ ಸಂಗತಿ. ಅಲ್ಲದೆ ಪೂರ್ವಭಾವಿ ಪರೀಕ್ಷೆಯ ಕೀ ಉತ್ತರಗಳನ್ನು ಪ್ರಕಟಿಸಲಾಗಿದ್ದು, ಆಕ್ಷೇಪ ಇದ್ದರೆ ಸಲ್ಲಿಸಬಹುದು ಎಂದೂ ಅಭ್ಯರ್ಥಿಗಳಿಗೆ ತಿಳಿಸಲಾಗಿದೆ. ಆಕ್ಷೇಪ ಸಲ್ಲಿಸಲು ಪ್ರತಿ ಪ್ರಶ್ನೆಗೆ ₹ 50 ಶುಲ್ಕ ನಿಗದಿ ಮಾಡಿರುವುದಾಗಿಯೂ ಆಯೋಗ ಹೇಳಿದೆ. ಆಯೋಗವೇ ಮಾಡಿರುವ ತಪ್ಪಿನ ಕುರಿತು ಆಕ್ಷೇಪ ಸಲ್ಲಿಸುವುದಕ್ಕೂ ಅಭ್ಯರ್ಥಿಗಳೇ ದಂಡ ತೆರಬೇಕು ಎನ್ನುವ ಧೋರಣೆ ಸರಿಯಲ್ಲ. ಅನುವಾದದಲ್ಲಿನ ಅಧ್ವಾನಗಳನ್ನು ನೋಡಿದರೆ, ಕನ್ನಡದಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ಮರುಪರೀಕ್ಷೆ ನಡೆಸಬೇಕು ಎಂಬ ಬೇಡಿಕೆ ನ್ಯಾಯಯುತವಾದುದು ಎನ್ನಿಸುತ್ತದೆ. ಇಂತಹ ಎಡವಟ್ಟುಗಳನ್ನು ನಿವಾರಿಸಬೇಕಾದರೆ ಇಂಗ್ಲಿಷ್‌ನಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಅದನ್ನು ಕನ್ನಡಕ್ಕೆ ಅನುವಾದಿಸುವ ಪರಿಪಾಟ ಕೈಬಿಡಬೇಕು. ಕನ್ನಡದಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಅದನ್ನು ಇಂಗ್ಲಿಷ್‌ಗೆ ಭಾಷಾಂತರಿಸುವ ಸಾಧ್ಯತೆ ಕುರಿತು ಪರಿಶೀಲಿಸಿ, ನಿರ್ಧಾರಕ್ಕೆ ಬರಬೇಕು.



ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಆಯೋಗವನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಬೇಕು

ಕೆಪಿಎಸ್‌ಸಿಗೆ ಕಾಯಕಲ್ಪ ಕಲ್ಪಿಸಲು ಸಿದ್ದರಾಮಯ್ಯ ಅವರು ಮೊದಲ ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಪಿ.ಸಿ.ಹೋಟಾ ಸಮಿತಿಯನ್ನು ರಚಿಸಿದ್ದರು. ಸಮಿತಿಯ ಹಲವು ಶಿಫಾರಸುಗಳು ಜಾರಿಗೆ ಬಂದಿವೆ. ಆದರೂ ಆಯೋಗದ ಕಾರ್ಯವೈಖರಿಯಲ್ಲಿ ಕಿಂಚಿತ್ತೂ ಬದಲಾವಣೆ ಆಗಿಲ್ಲ. ಸುಧಾರಣೆಯ ದೃಷ್ಟಿಯಿಂದ ಈ ಎರಡು ದಶಕಗಳಲ್ಲಿ ಆಯೋಗ ಒಂದು ಹೆಜ್ಜೆ ಕೂಡ ಮುಂದೆ ಇಟ್ಟಿಲ್ಲ. ರಾಜ್ಯದ ಉದ್ಯೋಗ ಆಕಾಂಕ್ಷಿಗಳ ಸಂಪೂರ್ಣ ಭ್ರಮನಿರಸನಗೊಂಡಿದ್ದಾರೆ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಪ್ರಕ್ರಿಯೆ ನಡೆಸುತ್ತಿದೆ, ಆ ಪ್ರಕ್ರಿಯೆ ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕು ಮತ್ತು ಪಾರದರ್ಶಕವಾಗಿ ಇರಬೇಕು. ಆಯೋಗ ಇತ್ತೀಚಿನ ವರ್ಷಗಳಲ್ಲಿ ನಡೆಸಿದ ನೇಮಕಾತಿಗೆ ಸಂಬಂಧಿಸಿದ ಬಹುತೇಕ ಪರೀಕ್ಷೆಗಳು ವಿವಾದಕ್ಕೆ ಒಳಗಾಗಿವೆ. ಈ ಕುರಿತು ನ್ಯಾಯಾಲಯಗಳಲ್ಲಿ ವಿಚಾರಣೆಗಳೂ ನಡೆಯುತ್ತಿವೆ. ಸಾಂವಿಧಾನಿಕ ಸಂಸ್ಥೆಯೊಂದು ನಡೆಸುವ ಪರೀಕ್ಷೆಗೆ ಇಂತಹ ಸ್ಥಿತಿ ಬರಬಾರದು. ಈಗಲಾದರೂ ಎಚ್ಚೆತ್ತುಕೊಂಡು ಆಯೋಗವನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಬೇಕು. ಕೆಪಿಎಸ್‌ಸಿ ಸದಸ್ಯರ ನೇಮಕಾತಿ ಮತ್ತು ಅಲ್ಲಿಗೆ ಹಿರಿಯ ಅಧಿಕಾರಿಗಳ ನಿಯೋಜನೆಯಲ್ಲಿ ಅತಿಯಾದ ರಾಜಕೀಯ ಹಸ್ತಕ್ಷೇಪ ಇರುವುದು ಕೂಡ ಈ ದುರವಸ್ಥೆಗೆ ಒಂದು ಪ್ರಧಾನ ಕಾರಣ. ಈ ರೀತಿಯ ಸಮಸ್ಯೆಗಳು ಮರುಕಳಿಸದಂತೆ ಮಾಡಲು ಕೆಪಿಎಸ್‌ಸಿಗೆ ಸದಸ್ಯರ ನೇಮಕಾತಿ, ಅಧಿಕಾರಿಗಳ ನಿಯೋಜನೆಯೂ ಸೇರಿದಂತೆ ಆಯೋಗಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲಿ ಪಾರದರ್ಶಕತೆಗೆ ಒತ್ತು ನೀಡಿ, ಆಮೂಲಾಗ್ರ ಬದಲಾವಣೆ ತರುವ ಇಚ್ಛಾಶಕ್ತಿಯನ್ನು ರಾಜ್ಯ ಸರ್ಕಾರ ಪ್ರದರ್ಶಿಸಬೇಕು.

ಆಧುನಿಕ ರಾಜಕೀಯ ಚಿಂತನಾಕ್ರಮ: ನೀಡಲೇಬೇಕಿದೆ ಪುನಶ್ಚೇತನ

ಹೋದರೆಲ್ಲಿ ನಮ್ಮ ರಾಜಕೀಯ ಚಿಂತಕರು?



ವಿಶ್ಲೇಷಣೆ

ಯೋಗೇಂದ್ರ ಯಾದವ್

ಪ್ರಧಾನಿ ನರೇಂದ್ರ ಮೋದಿ ಅವರು ಮೊನ್ನೆ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ, 1950ರಿಂದಲೇ ಚಾಲ್ತಿಯಲ್ಲಿರುವ 'ಅಭಿವೃದ್ಧಿ' ಎಂಬ ಸವಕಲು ಘೋಷಣೆಯನ್ನೇ ಎತ್ತಿಕೊಂಡು, ಸ್ವಾತಂತ್ರ್ಯ ಬಂದು ನೂರು ವರ್ಷಗಳಾಗುವ ಹೊತ್ತಿಗೆ ದೇಶವು 'ವಿಕಸಿತ ಭಾರತ'ವಾಗಬೇಕು ಎಂದರು. ಇದು ಈ ಒಬ್ಬ ಜನನಾಯಕನ ಬೌದ್ಧಿಕತೆಯ ಮಿತಿ ಮಾತ್ರವಲ್ಲ. ಎಲ್ಲ ಪಕ್ಷ, ಎಲ್ಲ ರಾಜಕೀಯ ಸಿದ್ಧಾಂತ ಮತ್ತು ಎಲ್ಲ ರಾಜಕೀಯ ನಾಯಕರಲ್ಲಿ ರಾಜಕೀಯ ಪ್ರಜ್ಞೆ, ಪರಿಕಲ್ಪನೆ ಮತ್ತು ದೂರಾಲೋಚನೆಗಳು ಸಂಕುಚಿತವಾಗುತ್ತಿರುವುದನ್ನು ಆ ಮಾತು ಪ್ರತಿಬಿಂಬಿಸುತ್ತಿತ್ತು.


ಶೆಲ್ಡಾನ್ ಪೊಲ್ಲಾಕ್ ಎಂಬ ಸಂಸ್ಕೃತ ವಿದ್ವಾಂಸ, 18ನೇ ಶತಮಾನದ ಭಾರತದಲ್ಲಿ 'ಸಂಸ್ಕೃತದ ಸಾವು' ಎಂಬ ಪ್ರಬಂಧವನ್ನು 20 ವರ್ಷಗಳ ಹಿಂದೆ ಬರೆದಿದ್ದ. ವಾಸ್ತವದಲ್ಲಿ ಸಂಸ್ಕೃತ ಮೃತಭಾಷೆ ಎಂದು ಹೇಳುವುದು ಅವನ ಉದ್ದೇಶವಾಗಿರಲಿಲ್ಲ ಮತ್ತು ಸಂಸ್ಕೃತ ಈಗಲೂ ಬಳಕೆಯಲ್ಲಿದೆ. ನಮ್ಮ ನಾಗರಿಕತೆಯ ಸಾಂಸ್ಕೃತಿಕ ಪರಿಕಲ್ಪನೆಗಳು ಮತ್ತು ಬೌದ್ಧಿಕತೆಯನ್ನು ವಸಾಹತುವಿನ ಕಾಲದಲ್ಲಿ ದಾಖಲಿಸುವ ಮತ್ತು ಮುಂದಿನ ಪೀಳಿಗೆಗೆ ದಾಟಿಸುವ ಮಾಧ್ಯಮವಾಗುವುದಕ್ಕಷ್ಟೇ ಸಂಸ್ಕೃತ ಸೀಮಿತ ಆಯಿತು ಎಂಬುದು ಆತನ ಪ್ರತಿಪಾದನೆಯಾಗಿತ್ತು. ನಂತರದ ದಿನಗಳಲ್ಲಿ ಸುದೀಪ್ತ ಕವಿರಾಜ್ ಇದನ್ನೇ ವಿಸ್ತರಿಸುತ್ತಾ, 'ಸಂಸ್ಕೃತ ಜ್ಞಾನದ ಹಠಾತ್ ಸಾವು' ಎಂದು ಮಾರ್ಪಡಿಸಿದರು.

20ನೇ ಶತಮಾನದಲ್ಲಿ ವಸಾಹತು ಭಾರತ ಮತ್ತು ವಸಾಹತೋತ್ತರ ಭಾರತದ ರಾಜಕಾರಣವನ್ನು ಪೋಷಿಸಿದ್ದ, ಆಧುನಿಕ ಭಾರತದ ರಾಜಕೀಯ ಚಿಂತನೆಯ ಮಹಾನ್ ಪರಂಪರೆಯೂ ಸಂಸ್ಕೃತದಂತೆಯೇ ಹಠಾತ್ ಸಾವಿಗೀಡಾಗಿದೆ. ಕುಸಿಯುತ್ತಿರುವ ರಾಜಕೀಯ ನೈತಿಕತೆಯತ್ತ ಮಾತ್ರ ಎಲ್ಲರೂ ಬೊಟ್ಟು ಮಾಡುತ್ತಿದ್ದಾರೆ. ಹಾಗೆ ಮಾಡುತ್ತಾ ರಾಜಕೀಯ ಪ್ರಜ್ಞೆಯ ಸವೆತ, ರಾಜಕೀಯ ಪರಿಭಾಷೆಗಳ ಕುಸಿತ, ರಾಜಕೀಯ ಟೀಕೆ–ಟಿಪ್ಪಣಿಗಳ ಬಗೆಗಿನ ಅಪಥ್ಯ, ರಾಜಕೀಯ ತೀರ್ಮಾನದಲ್ಲಿನ ಬೌದ್ಧಿಕ ಬಡತನ ಮತ್ತು ಕ್ಷೀಣಿಸುತ್ತಿರುವ ರಾಜಕೀಯ ಕಾರ್ಯಸೂಚಿಗಳಂತಹ ಗಂಭೀರ ಸಮಸ್ಯೆಗಳನ್ನು ಮರೆಯುತ್ತಿದ್ದೇವೆ. ಭಾರತದ ರಾಜಕಾರಣವನ್ನು ರೂಪಿಸಿದ್ದ ಚಿಂತನೆಗಳ ನದಿ ಹಠಾತ್ತಾಗಿ ಬತ್ತಿಹೋಗಿದೆ. ಇದನ್ನೇ ಚಂದ ಮಾಡಿ, 'ಆಧುನಿಕ ಭಾರತೀಯ ರಾಜಕೀಯ ಚಿಂತನೆಗಳ ಹಠಾತ್ ನಿಧನ' ಎನ್ನಬಹುದು.

ಜಗತ್ತಿನ ಎಲ್ಲ ಚಿಂತನಾ ಚಳವಳಿಗಳ ಸಾವಿಗೆ ಹೇಗೆ ದಿನಾಂಕವನ್ನು ನಿಗದಿ ಮಾಡಲಾಗದೋ ಹಾಗೆಯೇ ಭಾರತದ ರಾಜಕೀಯ ಚಿಂತನೆಗಳೂ ಇಂಥದ್ದೇ ದಿನ ಸತ್ತುಹೋದವು ಎಂದು ಹೇಳಲಾಗದು. ಆದರೆ, ವಸಾಹತೋತ್ತರ ಭಾರತದ ಮೊದಲ ಒಂದೆರಡು ದಶಕಗಳಲ್ಲೇ ಇದು ಸಂಭವಿಸಿತು ಎಂದು ಸ್ಥೂಲವಾಗಿ ಹೇಳಬಹುದು. 1947ರ ಹೊತ್ತಿಗೆ ಇದ್ದ ರಾಜಕೀಯ ಚಿಂತಕರನ್ನು ನೆನಪಿಸಿಕೊಳ್ಳಿ. ನಮಗೆ ನೆನಪಾಗುವುದು ಗಾಂಧಿ, ನೆಹರೂ ಮತ್ತು ಅಂಬೇಡ್ಕರ್ ಮಾತ್ರವಲ್ಲ. ಆಗ ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಿದ್ದರೂ ಬೌದ್ಧಿಕ ರಾಜಕಾರಣದ ಮೇರುಶಿಖರಗಳಂತಿದ್ದ ಎಂ.ಎನ್. ರಾಯ್, ಶ್ರೀ ಅರಬಿಂದೊ ಅಂತಹವರೂ ಇದ್ದರು. ಸಕ್ರಿಯವಾಗಿ ಇದ್ದವರಲ್ಲೇ ಕಾಂಗ್ರೆಸ್‌ನ ಮೌಲಾನಾ ಅಬುಲ್ ಕಲಾಂ ಆಜಾದ್, ಸಮಾಜವಾದದ ನೆಲಗಟ್ಟಿನ ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ್ ನಾರಾಯಣ್ ಮತ್ತು ರಾಮಮನೋಹರ ಲೋಹಿಯಾ, ಕಮ್ಯುನಿಸ್ಟರ ಪೈಕಿ ಎಸ್.ಎ.ಡಾಂಗೆ ಮತ್ತು ಪಿ.ಸಿ.ಜೋಷಿ, ಸಾಮಾಜಿಕ ನ್ಯಾಯದ ಪ್ರತಿಪಾದಕ ರಾಮಸ್ವಾಮಿ ನಾಯ್ಕರ್ ಪೆರಿಯಾರ್, ಆರ್ಥಿಕ ತಜ್ಞ ಸಿ.ರಾಜಗೋಪಾಲಾಚಾರಿ, ಒಂದೆಡೆ ಹಿಂದುತ್ವದ ಪ್ರತಿಪಾದಕ ವಿ.ಡಿ. ಸಾವರ್ಕರ್, ಮತ್ತೊಂದೆಡೆ ಕಟ್ಟಾ ಇಸ್ಲಾಂವಾದದ ಮೌಲಾನಾ ಮೌದೂದಿ ಇದ್ದರು. ಹೀಗೆ ಎಲ್ಲ ರಾಜಕೀಯ ಸಿದ್ಧಾಂತಗಳಿಗೆ ಸಂಬಂಧಿಸಿದ ಚಿಂತಕರ ದಂಡೇ ಇತ್ತು.

ಅವರ ಚಿಂತನೆ, ಸಿದ್ಧಾಂತಗಳನ್ನು ನೀವು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಆದರೆ ಅವರೆಲ್ಲರೂ ರಾಜಕೀಯ ಚಿಂತಕರಾಗಿದ್ದರು ಎಂಬುದನ್ನು ನಿರಾಕರಿಸಲಾಗದು. ಅವರ ರಾಜಕೀಯ ಕ್ರಿಯೆಗಳು ಮತ್ತು ರಾಜಕಾರಣವು ಭವಿಷ್ಯದ ಭಾರತವನ್ನು ಕಟ್ಟುವುದರಲ್ಲೇ ಕೇಂದ್ರಿತವಾಗಿದ್ದವು. ಪ್ರತಿದಿನದ ರಾಜಕಾರಣದ ಭಾಗವಾಗಿದ್ದರೂ ಇತರ ವಿಷಯಗಳ ಬಗ್ಗೆಯೂ ಅವರು ಯೋಚಿಸುತ್ತಿದ್ದರು, ಮಾತನಾಡುತ್ತಿದ್ದರು ಮತ್ತು ಬರೆಯುತ್ತಿದ್ದರು. ಅವರೆಲ್ಲರ ಚಿಂತನೆ ಮತ್ತು ಕ್ರಿಯೆಗಳು ಭಾರತಕ್ಕೇ ಕೇಂದ್ರಿತವಾಗಿದ್ದರೂ ಜಗತ್ತಿನಲ್ಲಿ ಏನಾಗುತ್ತಿದೆ ಎಂಬುದರ ಆಳವಾದ ಅರಿವು ಅವರಲ್ಲಿತ್ತು. ಓದು ಮತ್ತು ಬರಹ ಇಂಗ್ಲಿಷ್‌ನಲ್ಲೇ ಇದ್ದರೂ ಭಾರತೀಯ ಭಾಷೆಗಳ ಜತೆಗಿನ ಕೊಂಡಿಯನ್ನು ಅವರು ಕಳಚಿಕೊಂಡಿರಲಿಲ್ಲ. ಪರಂಪರೆ ಮತ್ತು ಆಧುನಿಕತೆ ಕುರಿತಾದ ಅವರ ನಿಲುವುಗಳು ಭಿನ್ನವಾಗಿದ್ದರೂ ಅಪ್ಪಟ ದೇಸೀಯವಾದ ಮತ್ತು ಭಾರತಕ್ಕೆ ಹೊಂದುವ ಆಧುನಿಕತೆಯನ್ನು ಸಾಮೂಹಿಕವಾಗಿ ರೂಪಿಸಿದರು. ಅವರೆಲ್ಲರ ರಾಜಕೀಯ ಪ್ರತಿಪಾದನೆಗಳ ಮಹಾಪೂರವು ನಮ್ಮ ಸಂವಿಧಾನ, ವೈವಿಧ್ಯಮಯ ರಾಜಕೀಯ ಸಿದ್ಧಾಂತಗಳು ಮತ್ತು ಸ್ಪರ್ಧಾತ್ಮಕ ರಾಜಕಾರಣವನ್ನು ರೂಪಿಸಿತು.

ಸ್ವಾತಂತ್ರ್ಯ ಬಂದ ನಂತರದ ಮೊದಲ 25 ವರ್ಷಗಳಲ್ಲೇ ಈ ಪರಂಪರೆ ಹಠಾತ್ ಕಣ್ಮರೆಯಾಯಿತು. 70ರ ದಶಕದ ಹೊತ್ತಿಗೆ ಮೇಲಿನ ರಾಜಕೀಯ ಚಿಂತಕರಲ್ಲಿ ಬಹುತೇಕರು ಇಹಲೋಕ ತ್ಯಜಿಸಿದರು. ಅವರ ಚಿಂತನೆಗಳು ಸಿದ್ಧಾಂತವಾಗಿಯಷ್ಟೇ ಉಳಿದವು. ಆ ಹೊತ್ತಿಗೂ ರಾಜಕೀಯ ಚಿಂತಕರಲ್ಲಿ ಹಲವರು ರಾಜಕಾರಣಿಗಳೇ ಆಗಿದ್ದರೂ ಅವರ ಚಿಂತನೆಯು 1947ರಲ್ಲಿ ಇದ್ದ ಮಟ್ಟದಲ್ಲಿ ಇರಲಿಲ್ಲ.



ಜಯಪ್ರಕಾಶ್ ನಾರಾಯಣ್ ಅವರ 'ಸಂಪೂರ್ಣ ಕ್ರಾಂತಿ' ಸಮಾಜವಾದದ ಕೊನೆಯ ಸೊಡರಾಗಿ ಉಳಿದಿತ್ತು, ಚಾರು ಮಜುಂದಾರ್ ಅವರು ಮಾರ್ಕ್ಸ್‌ವಾದದ ಕಡೆಯ ಪ್ರವರ್ತಕರಲ್ಲಿ ಒಬ್ಬರಾಗಿದ್ದರು, ಏಕಮುಖಿಯಾಗಿದ್ದರೂ ವಿನೋಬಾ ಭಾವೆ ಅವರು ಗಾಂಧಿವಾದದ ವಾರಸುದಾರಿಕೆ ಹೊತ್ತಿದ್ದರು, ಹಿಂದುತ್ವದ ಅಳಿದುಳಿದಿದ್ದ ಚಿಂತನೆಗಳನ್ನು ಎಂ.ಎಸ್.ಗೋಲ್ವಾಲ್ಕರ್ ಒಗ್ಗೂಡಿಸಿದ್ದರು, ಗ್ರಾಮಕೇಂದ್ರಿತ ಭಾರತದ ಚಿಂತನೆಯನ್ನು ಚರಣ್ ಸಿಂಗ್ ಕಟ್ಟಿದ್ದರು... ಈ ಪಟ್ಟಿ ಅಪೂರ್ಣವೇ ಆಗಿದ್ದರೂ ಖಂಡಿತವಾಗಿಯೂ ಸರಿಯಾದದ್ದೇ ಆಗಿದೆ.

ಉಳಿದಿದ್ದ ರಾಜಕೀಯ ಚಿಂತಕರೂ ಕಾರ್ಯಕರ್ತರೂ 20ನೇ ಶತಮಾನದ ಅಂತ್ಯದ ಹೊತ್ತಿಗೆ ಮರೆಯಾದರು. ಕಿಶನ್ ಪಟ್ನಾಯಕ್, ಸಚ್ಚಿದಾನಂದ ಸಿನ್ಹಾ, ರಾಮದಯಾಳ್ ಮುಂಡಾ, ಧರಂ ಪಾಲ್ ಮತ್ತು ಬಿ.ಡಿ. ಶರ್ಮಾ ಅವರು ಮುಖ್ಯವಾಹಿನಿಯ ರಾಜಕಾರಣದಿಂದ ಹೊರಗೇ ಉಳಿದರು. ಅಲ್ಲಿಗೇ ಕೊನೆ. ರಾಜಕೀಯ ಮತ್ತು ರಾಜಕಾರಣವನ್ನು ಕಡೆದು ರೂಪಿಸುವ ಅರ್ಥಪೂರ್ಣವಾದ ರಾಜಕೀಯ ಚಿಂತನೆ ಇಲ್ಲದೇ ಹೋಯಿತು.

ಆಧುನಿಕ ಭಾರತೀಯ ರಾಜಕೀಯ ಚಿಂತನೆಯ ಸಾವು ಎಂದರೆ ನಮ್ಮಲ್ಲಿ ಪ್ರಖರ ಬುದ್ಧಿಯ ಚಿಂತಕರು ಮತ್ತು ಬರಹಗಾರರು ಇಲ್ಲ ಎಂದರ್ಥವಲ್ಲ. ಈ ಹಿಂದೆ ಇದ್ದುದಕ್ಕಿಂತಲೂ ಅಂತಹವರು ಈಗ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ರಾಜಕಾರಣವು ಅವರ ಚಿಂತನಾ ಕ್ರಮದ ಕೇಂದ್ರಬಿಂದುವಲ್ಲ ಎಂಬುದನ್ನು ಹೇಳಬೇಕಾಗುತ್ತದೆ. ಈಗಿನ ವೈವಿಧ್ಯಮಯ ರಾಜಕೀಯ ಚಿಂತನಾ ಕ್ರಮಗಳು ಭಿನ್ನ ರಾಜಕಾರಣಗಳನ್ನು ಒಗ್ಗೂಡಿಸುವಂತಹ ತರ್ಕಬದ್ಧ ಸಂವಾದ, ವ್ಯಾಪಕ ಚರ್ಚೆ ಮತ್ತು ಅರ್ಥಪೂರ್ಣವಾದ ಮಾತುಕತೆಯನ್ನಂತೂ ರೂಪಿಸುತ್ತಿಲ್ಲ. ಇದಕ್ಕೆ ಅಪವಾದಗಳೂ ಇವೆ. ಅಭಿವೃದ್ಧಿಯ ಪ್ರಬಲ ಮಾದರಿಯ ಟೀಕಾಕಾರರು, ಪರ್ಯಾಯವಾಗಿ ಬಹುತ್ವದ ಶೋಧಕರು, ಸ್ತ್ರೀವಾದಿಗಳು, ಅಂಬೇಡ್ಕರ್‌ವಾದಿಗಳು ರಾಜಕೀಯ ಚಿಂತನೆಯ ಪರಂಪರೆಯನ್ನು ಇಂದಿಗೂ ಜೀವಂತವಾಗಿ ಇರಿಸಿದ್ದಾರೆ.

ಒಟ್ಟಾರೆಯಾಗಿ ನೋಡುವುದಾದರೆ, ರಾಜಕೀಯ ಚಿಂತನೆ ಎಂಬುದು ನಿಧಾನವಾಗಿ ವಿದ್ವಾಂಸ ಲೋಕದಲ್ಲೇ ಕೇಂದ್ರಿತವಾಗುತ್ತಿದೆ. ಈ ಪರಿವರ್ತನೆ ರಜನಿ ಕೊಠಾರಿ, ಡಿ.ಎಲ್.ಸೇಠ್, ಆಶಿಶ್ ನಂದಿ, ಪಾರ್ಥ ಚಟರ್ಜಿ, ಸುದೀಪ್ತ ಕವಿರಾಜ್ ಮತ್ತು ರಾಜೀವ್ ಭಾರ್ಗವ ಅವರಂತಹ ಪ್ರಖರ ರಾಜಕೀಯ ಸಿದ್ಧಾಂತಿಗಳನ್ನು ರೂಪಿಸಿದೆ. ಆದರೆ ಅವರ ರಾಜಕೀಯ ಚಿಂತನೆಗಳು ಈಗಿನ ರಾಜಕಾರಣವನ್ನು ಆಳವಾಗಿ ಪ್ರಭಾವಿಸಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು. ಈ ಒಂದಿಬ್ಬರ ಉದಾಹರಣೆಗಳನ್ನು ಹೊರತುಪಡಿಸಿ ರಾಜಕೀಯ ಚಿಂತನೆಯನ್ನು ರಾಜ್ಯಶಾಸ್ತ್ರ ಎಂಬ ಶೈಕ್ಷಣಿಕ ಶಿಸ್ತು ಆವರಿಸಿಕೊಂಡಿದ್ದು ರಾಜಕಾರಣಕ್ಕೂ ಬೌದ್ಧಿಕತೆಗೂ ವಿಧ್ವಂಸಕವಾಗಿಯೇ ಪರಿಣಮಿಸಿತು. ರಾಜಕಾರಣದೊಟ್ಟಿಗೆ ಬೆರೆಯದ, ಇಂಗ್ಲಿಷ್ ಬಿಟ್ಟು ಬೇರೆ ಭಾಷೆಯಲ್ಲಿರದ ರಾಜ್ಯಶಾಸ್ತ್ರವು ಶೈಕ್ಷಣಿಕ ಒಲವು ಮತ್ತು ಈರ್ಷ್ಯೆಗಳಿಗಷ್ಟೇ ಸೀಮಿತವಾಗುತ್ತಿದೆ. ಈಗಿನ ರಾಜಕೀಯಕ್ಕೂ ಅದಕ್ಕೂ ಸಂಬಂಧವೇ ಇಲ್ಲದಂತಿದೆ.

ನಮ್ಮ ರಾಜಕಾರಣದ ಇಂದಿನ ಹೀನಾಯ ಸ್ಥಿತಿಯು ಮೇಲಿನ ಇಂತಹ ಸೊರಗುವಿಕೆಯ ಪ್ರತಿಫಲ. ನಮ್ಮ ಗಣರಾಜ್ಯವನ್ನು ಮರುಗಳಿಸಿಕೊಳ್ಳಲು ಆಧುನಿಕ ಭಾರತೀಯ ರಾಜಕೀಯ ಚಿಂತನಾಕ್ರಮಗಳಿಗೆ ಪುನಶ್ಚೇತನ ನೀಡಲೇಬೇಕಿದೆ.

ಚುರುಮುರಿ



ಕೈದಿ ದೇವೋಭವ!

• ಚಂದ್ರಕಾಂತ ವಡ್ಡು

ಅಂದು ಪವಿತ್ರ ಶ್ರಾವಣ ಸೋಮವಾರ. ತಿಂಗಳೇಶನ ಗೃಹಲಕ್ಷ್ಮಿ ಶ್ರದ್ಧಾಭಕ್ತಿಯಿಂದ ಸುದ್ದಿವಾಹಿನಿಗಳನ್ನು ವೀಕ್ಷಿಸುತ್ತಿದ್ದಳು. ಜಿಲ್ಲಾ ವರದಿಗಾರರು ದೇವಸ್ಥಾನಗಳ ಬದಲು ಕರ್ನಾಟಕದ ವಿವಿಧ ಕಾರಾಗೃಹಗಳ ಪ್ರತ್ಯಕ್ಷ ದರ್ಶನ, ಸಿಬ್ಬಂದಿ ಸಂದರ್ಶನ ಮಾಡಿಸುತ್ತಿದ್ದರು.

'ನೋಡಿ, ನಿಮ್ಮ ಕಾರಾಗೃಹಕ್ಕೆ ಬೆಂಗಳೂರಿನಿಂದ ವಿಶೇಷ ಅತಿಥಿಗಳು ಬರುತ್ತಿದ್ದಾರೆ. ಅವರನ್ನು ಸ್ವಾಗತಿಸಲು ನೀವು ಏನೆಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೀರಿ?'

'ನಮ್ಮದು ಸ್ವತಂತ್ರಪೂರ್ವ ಇತಿಹಾಸವುಳ್ಳ ಕಾರಾಗೃಹ. ಎಂಥೆಂಥ ಮಹಾನ್ ಅಪರಾಧಿಗಳನ್ನು ನೋಡಿಕೊಂಡ ಅನುಭವ, ಕೀರ್ತಿ ನಮಗಿದೆ. ನಮ್ಮ ಮೇಲಿನ ನಂಬಿಕೆಯಿಂದ ಈಗ ಕೆಲವು ಗಣ್ಯ ಕೈದಿಗಳನ್ನು ಇಲ್ಲಿಗೆ ಕಳಿಸುತ್ತಿದ್ದಾರೆ. ಇದು ನಮಗೆ ಹೆಮ್ಮೆಯ ವಿಷಯ'.

'ಬೆಂಗಳೂರಿನಲ್ಲಿ ಆರೋಪಿಗಳಿಗೆ ರಾಜಾತಿಥ್ಯ ನೀಡಲಾಗುತ್ತಿತ್ತಂತೆ... ನಿಮ್ಮಲ್ಲಿಯ ಸೌಲಭ್ಯಗಳ ಬಗ್ಗೆ ಒಂದಿಷ್ಟು ಹೇಳಬಹುದೇ?'

'ನಮ್ಮದು ಚಿಕ್ಕ ಜಿಲ್ಲಾ ಕೇಂದ್ರ. ಮಹಾನಗರದಂತೆ ಇಲ್ಲಿ ಕೇಳಿದ್ದೆಲ್ಲಾ ಒದಗಿಸಲು ಹೇಗೆ ಸಾಧ್ಯ? ಆದರೂ ನಾವು ಶಕ್ತಿಮೀರಿ ಶ್ರಮಿಸುತ್ತೇವೆ, ಅನುಮಾನ ಬೇಡ'.

'ಕೈದಿಗಳ ಸಾಮೂಹಿಕ ವರ್ಗಾವಣೆ ಬಗ್ಗೆ ನಿಮ್ಮ ಅಭಿಪ್ರಾಯ?'

'ಕೈದಿಗಳಿಗೆ ಆಗಲಿ, ನೌಕರರಿಗಾಗಲಿ ವರ್ಗಾವಣೆಯೇ 'ಶಿಕ್ಷೆ' ಆಗಬಾರದು. ಅವರಿಗೆ ಬೇರೆಬೇರೆ ವ್ಯವಸ್ಥೆಗಳ ಸ್ವಾನುಭವ ದಕ್ಕುವಂತಾಗಬೇಕು. ಇದೊಂಥರ ವಿಕೇಂದ್ರೀಕರಣ. ನಮ್ಮ ಜೈಲಿನ ಬಗ್ಗೆ ಈವರೆಗೆ ಯಾವೊಬ್ಬ ಕೈದಿಯೂ ದೂರಿಲ್ಲ'.

'ಹಾಗಾದರೆ ಬೆಂಗಳೂರಿನಂತೆ ನಿಮ್ಮ ಜೈಲು ಕೂಡ 'ಕೈದಿಸ್ನೇಹಿ' ಎನ್ನಿ...'

'ಹೌದು, ಇಲ್ಲಿಗೆ ಬರುವವರು ಯಾರೇ ಇರಲಿ, ಎಷ್ಟೇ ಕೊಲೆ-ದರೋಡೆ ಮಾಡಿರಲಿ, ನಮಗೆ ಮಾತ್ರ ಅತಿಥಿಗಳೇ. ಅತಿಥಿ ಸತ್ಕಾರ ನಮ್ಮ ಜೈಲುಸಂಸ್ಕೃತಿ'.

'ಸೆರೆಮನೆಗಳ ಸುಧಾರಣೆ ಬಗ್ಗೆ ನಿಮ್ಮ ಸಲಹೆಗಳು...'

'ಕೈದಿಗಳಿಗೆ ಈಗ ದೊರೆಯುತ್ತಿರುವ ರಹಸ್ಯ ಸೌಲಭ್ಯಗಳು ಕಾನೂನುಬದ್ಧವಾಗಿ ದೊರೆಯುವಂತಾಗಬೇಕು. ಸೆರೆವಾಸ ಇನ್ನಷ್ಟು ಆಕರ್ಷಕವೂ ಜನಪ್ರಿಯವೂ ಆಗಲು ಈ ನಿಟ್ಟಿನ ಕ್ರಮ ಅತ್ಯಗತ್ಯ'.

ದಿನದ ಟ್ವೀಟ್

ಜೀವನಶೈಲಿ ಉತ್ತಮವಾಗಲಿ



ಭಾರತದಲ್ಲಿ ಅನೇಕರು ತಡೆಗಟ್ಟಬಹುದಾದ ದೀರ್ಘಕಾಲಿಕ ಕಾಯಿಲೆಗಳಿಂದ ಬಾಧಿತರಾಗಿದ್ದಾರೆ. ಅಂತಹವರು ಜೀವನ ಶೈಲಿಯಲ್ಲಿ ಒಂದಷ್ಟು ಬದಲಾವಣೆ ಮಾಡಿಕೊಳ್ಳುವ ಮೂಲಕ ರೋಗಗಳನ್ನು ತಡೆಗಟ್ಟಬಹುದು ಮತ್ತು ಎಷ್ಟೋ ಕಾಯಿಲೆಗಳನ್ನು ನಿಯಂತ್ರಿಸುವ ಮೂಲಕ ಆರೋಗ್ಯಕ್ಕಾಗಿ ವ್ಯಯಿಸಬೇಕಾದ ಹಣವನ್ನು ಉಳಿಸಬಹುದು.

ಧೀರಜ್ ಗರ್ಗ್, ಆರೋಗ್ಯ ಸಲಹೆಗಾರ

ಕಿಡಿನುಡಿ



ಎಚ್.ಡಿ.ಕುಮಾರಸ್ವಾಮಿ ಅವರು ಈಗ ನಮ್ಮ ಜಿಲ್ಲೆ ಬಿಟ್ಟು ಮಂಡ್ಯಕ್ಕೆ ಹೋಗಿದ್ದಾರೆ. ಆ ವಿಚಾರಕ್ಕೆ ತಲೆಕೆಡಿಸಿಕೊಳ್ಳುವುದು ಬೇಡ. ಚರ್ಚೆ ಮಾಡುವುದೂ ಬೇಡ. ಅವರು ಕಾರ್ಖಾನೆ ಮಾಡುತ್ತಾರಂತೆ. ನಾವು ಅದಕ್ಕಾಗಿ ಕಾಯುತ್ತಾ ಕೂತಿರೋಣ. ನಮ್ಮ ಹುಡುಗರನ್ನು ಕೆಲಸಕ್ಕೆಂದು ಅಲ್ಲಿಗೆ ಕಳುಹಿಸೋಣ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 31-8-1999

• ಬೇಹು ವೈಫಲ್ಯ: ಕ್ಷಮೆಗೆ ಸೋನಿಯಾ ಆಗ್ರಹ

ಚಂದ್ರಪುರ (ಮಹಾರಾಷ್ಟ್ರ), ಆ. 30 (ಪಿಟಿಐ): ಕಾರ್ಗಿಲ್ ಹೋರಾಟಕ್ಕೆ ಮುನ್ನ ಆದ ಬೇಹುಗಾರಿಕೆ ವೈಫಲ್ಯಕ್ಕಾಗಿ ಸರ್ಕಾರವು ಕ್ಷಮೆ ಯಾಚಿಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇಂದು ಒತ್ತಾಯಿಸಿದರು.

ವೈಫಲ್ಯದಿಂದಾಗಿ ನೂರಾರು ಮಂದಿ ಧೀರ ಸೈನಿಕರು ಜೀವದ ಬೆಲೆ ತೆರಬೇಕಾಗಿ ಬಂದಿತೆಂದು ಅವರು ಸ್ಮರಿಸಿದರು.

'ನಿರ್ಲಕ್ಷ್ಯ ಹಾಗೂ ವೈಫಲ್ಯಕ್ಕೆ ಬಿಜೆಪಿ ನೇತೃತ್ವದ ಸರ್ಕಾರ ನಾಚಿಕೆಯಿಂದ ತಲೆತಗ್ಗಿಸಬೇಕು. ಇದರಿಂದ ಕಾರ್ಗಿಲ್‌ನಲ್ಲಿ ಯುದ್ಧಕ್ಕೆ ಸಮಾನವಾದ ಪರಿಸ್ಥಿತಿ ಉಂಟಾಯಿತು' ಎಂದು ಸೋನಿಯಾ ಟೀಕಿಸಿದರು.

• ಆಸ್ತಿ ವಿವರ ನೀಡದ ಸಚಿವರ ರಾಜೀನಾಮೆ

ಬೆಂಗಳೂರು, ಆ. 30– ಗೃಹ ಖಾತೆಯ ಸಹಾಯಕ ಸಚಿವ ಅಶ್ವತ್ಥನಾರಾಯಣ ರೆಡ್ಡಿ ಮತ್ತು ಭಾರಿ ನೀರಾವರಿ ಖಾತೆಯ ಸಹಾಯಕ ಸಚಿವ ನಾಗಪ್ಪ ಸಾಲೋನಿ ಅವರು ಹೈಕೋರ್ಟ್ ನಿರ್ದೇಶನದಂತೆ ಇಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಲೋಕಾಯುಕ್ತಕ್ಕೆ ಸೂಕ್ತ ಕಾಲದಲ್ಲಿ ತಮ್ಮ ಆಸ್ತಿಗಳ ವಿವರ ನೀಡಿಲ್ಲ ಎಂಬ ಕಾರಣಕ್ಕಾಗಿ ಈ ಇಬ್ಬರು ಸಚಿವರು ಮೂರು ದಿನಗಳೊಳಗೆ ರಾಜೀನಾಮೆ ನೀಡಬೇಕು ಎಂದು ಹೈಕೋರ್ಟ್ ತೀರ್ಪು ನೀಡಿತ್ತು. ಅದರಂತೆ ಈ ಸಚಿವರು ಸಲ್ಲಿಸಿರುವ ರಾಜೀನಾಮೆ ತಮಗೆ ತಲುಪಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 31-8-1974

• ಕೃಷ್ಣಾ ಜಲವಿವಾದ: ರಾಜ್ಯ ಎಂ.ಪಿ.ಗಳ ಜತೆ ಶೀಘ್ರವೇ ಪಂತ್ ಚರ್ಚೆ

ನವದೆಹಲಿ, ಆ. 30– ಕೃಷ್ಣಾ ನೀರಿನ ಹಂಚಿಕೆಯ ವಿವಾದದ ಬಗ್ಗೆ ಪಂಚಾಯ್ತಿ ನೀಡುವ ಅಂತಿಮ ತೀರ್ಪನ್ನು ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು ಅಂಗೀಕರಿಸಬೇಕು ಎಂದು ನೀರಾವರಿ ಮತ್ತು ವಿದ್ಯುತ್ ಸಚಿವ ಕೆ.ಸಿ. ಪಂತ್ ಇಂದು ರಾಜ್ಯಸಭೆಯಲ್ಲಿ ಸೂಚಿಸಿದ್ದಾರೆ.

ಪಂಚಾಯ್ತಿಯ ತೀರ್ಪನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುವಂತೆ ಅಗತ್ಯ ವಾತಾವರಣವನ್ನು ಉಂಟು ಮಾಡುವಂತೆ ಅವರು ಮೂರು ರಾಜ್ಯಗಳ ಸಂಸತ್ ಸದಸ್ಯರನ್ನು ಕೋರಿದರು.

ಪಂಚಾಯ್ತಿಯ ಕಲಾಪದಿಂದ ಕರ್ನಾಟಕದ ಪ್ರತಿನಿಧಿಗಳು ಹೊರ ಹೋದರೆಂಬ ವರದಿಗಳ ಬಗ್ಗೆ ಗಮನ ಸೆಳೆವ ಮಂಡನೆಯ ಚರ್ಚೆಗೆ ಉತ್ತರಿಸುತ್ತಿದ್ದ ಸಚಿವ ಪಂತ್, ತಾವು ಶೀಘ್ರವೇ ಸಂಬಂಧಪಟ್ಟ ರಾಜ್ಯಗಳ ಸಂಸತ್ ಸದಸ್ಯರನ್ನು ಭೇಟಿ ಮಾಡಿ ಚರ್ಚಿಸುವುದಾಗಿ ತಿಳಿಸಿದರು.

• ಶಿಕ್ಷಕರ ನಿವೃತ್ತಿ ವಯಸ್ಸು ಇಳಿಸುವ ಸರ್ಕಾರದ ಅಧಿಕಾರಕ್ಕೆ ಹೈಕೋರ್ಟ್ ಬಹುಮತದ ಸಮರ್ಥನೆ

ಬೆಂಗಳೂರು, ಆ. 30– ಶಿಕ್ಷಕರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸಲು ರಾಜ್ಯ ಸರ್ಕಾರಕ್ಕೆ ಇರುವ ಹಕ್ಕನ್ನು ಕರ್ನಾಟಕ ಹೈಕೋರ್ಟ್ ಸಮರ್ಥಿಸಿದೆ.

ಹೈಕೋರ್ಟಿನ ಪೂರ್ಣ ಪೀಠದ ನ್ಯಾಯಾಧೀಶರು ಈ ಬಹುಮತದ ತೀರ್ಪನ್ನು ನೀಡಿದ್ದಾರೆ.

ರಾಜ್ಯ ಪುನರ್‌ರಚನಾ ಶಾಸನದನ್ವಯ ಶಿಕ್ಷಕರ ನಿವೃತ್ತಿ ವಯಸ್ಸನ್ನು ಇಳಿಸಲು ರಾಜ್ಯ ಸರ್ಕಾರಕ್ಕೆ ಇರುವ ಹಕ್ಕನ್ನು ಸಮರ್ಥಿಸಿ ನ್ಯಾಯಮೂರ್ತಿಗಳಾದ ಬಿ. ವೆಂಕಟಸ್ವಾಮಿ ಮತ್ತು ಕೆ. ಜಗನ್ನಾಥ ಶೆಟ್ಟಿ ತೀರ್ಪು ನೀಡಿದ್ದಾರೆ.

ಸಂಗತ

ಬೆಳೆಸಬೇಕಿದೆ ಮಹಿಳಾ ಸಂವೇದನೆ

ಹೆಣ್ತನದ ಘನತೆಯ ಮೇಲೆ ನಡೆಯುತ್ತಿರುವ ರಾಕ್ಷಸೀ ದೌರ್ಜನ್ಯಗಳನ್ನು ತಡೆಗಟ್ಟಲು ಸಮಾಜದಲ್ಲಿ ತಳಮಟ್ಟದಿಂದಲೇ ಲಿಂಗತ್ವ ಸೂಕ್ಷ್ಮತೆಯನ್ನು ಮೂಡಿಸಬೇಕಾದ ತುರ್ತಿದೆ

• ನಾ.ದಿವಾಕರ

ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅಮಾನುಷ ಅತ್ಯಾಚಾರ ಹಾಗೂ ಕೊಲೆ, ಭಾರತದಲ್ಲಿ ಮಹಿಳೆಯರ ರಕ್ಷಣೆಯ ಬಗ್ಗೆ ಸರ್ಕಾರಗಳು ಮತ್ತೊಮ್ಮೆ ಯೋಚನೆ ಮಾಡುವಂತೆ ಮಾಡಿವೆ. ಸಮಾಜದಲ್ಲಿ ಇಂತಹ ಆಘಾತಕಾರಿ, ಆತ್ಮಘಾತುಕ ಪ್ರಕರಣಗಳು ನಡೆದ ನಂತರ ಧಿಗ್ಗನೆ ಎದ್ದುಕುಳಿತುಕೊಳ್ಳುವ ಆಡಳಿತ ವ್ಯವಸ್ಥೆ, ಭರವಸೆಗಳ ಮಹಾಪೂರವನ್ನೇ ಹರಿಸುವುದು ಹೊಸ ವಿದ್ಯಮಾನವೇನಲ್ಲ. ಕೋಲ್ಕತ್ತ ಪ್ರಕರಣವೂ ಈ ಸರಣಿಯ ಮತ್ತೊಂದು ಪ್ರಸಂಗ.


ಪುರುಷಾಧಿಪತ್ಯ ಮತ್ತು ಪಿತೃಪ್ರಧಾನ ಧೋರಣೆಯು ಭಾರತೀಯ ಸಮಾಜದಲ್ಲಿ ವ್ರಣವಾಗಿ ಕಾಡುತ್ತಿದೆ. ಉತ್ತರದಿಂದ ದಕ್ಷಿಣದವರೆಗೆ ಬಾಲಕಿಯರಿಂದ ವೃದ್ಧೆಯರವರೆಗೂ ಮಹಿಳೆಯರ ಮೇಲಿನ ದೌರ್ಜನ್ಯ ವ್ಯಾಪಿಸಿರುವುದು ಅತ್ಯಂತ ದುರದೃಷ್ಟಕರ ಮತ್ತು ನಾಗರಿಕ ಸಮಾಜ ತಲೆ ತಗ್ಗಿಸುವಂಥದ್ದು.

ಸಹಜವಾಗಿಯೇ ತಮ್ಮ ಮಹಿಳಾ ಪರ ಧೋರಣೆಯನ್ನು ಮತ್ತೊಮ್ಮೆ ಪ್ರಮಾಣೀಕರಿಸಿ ಸಾಬೀತು ಪಡಿಸಬೇಕಾದ ಅನಿವಾರ್ಯ ಸರ್ಕಾರಗಳಿಗೆ ಎದುರಾಗಿದೆ. ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸುವವರೆಗೂ ವಿಸ್ತರಿಸುವ ಈ ಪ್ರಮಾಣೀಕರಣ ಎಷ್ಟು ಕಾಲ ಉಸಿರಾಡುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆದಿರುವ ಅತ್ಯಾಚಾರದ ಪ್ರಕರಣಗಳನ್ನು ಗಮನಿಸಿದರೆ, ಇದು ಕಾನೂನು ವ್ಯವಸ್ಥೆಯಿಂದಷ್ಟೇ ಸರಿಪಡಿಸುವ ವ್ಯಾಧಿಯಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಒಂದು ಪ್ರತಿಬಂಧಕ ಶಕ್ತಿಯಾಗಿ ಕಾಯ್ದೆ ಕಾನೂನುಗಳು ಪಾತಕಿಗಳಲ್ಲಿ ಭೀತಿ ಹುಟ್ಟಿಸುವುದು ಸಹಜ. ಆದರೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರ, ಕಿರುಕುಳಗಳನ್ನು ಈ ರೀತಿ ವ್ಯಕ್ತಿಗತ ನೆಲೆಯಲ್ಲಿ ನೋಡಲಾಗುವುದಿಲ್ಲ.

ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಅಧ್ಯಯನಕ್ಕೆ ಕೇರಳ ಸರ್ಕಾರ ನೇಮಿಸಿದ್ದ ನ್ಯಾಯಮೂರ್ತಿ ಕೆ. ಹೇಮಾ ಸಮಿತಿಯ ವರದಿ ಆರು ವರ್ಷಗಳ ವಿಳಂಬದ ನಂತರ ಬಹಿರಂಗಗೊಂಡ ಬೆನ್ನಲ್ಲೇ ಕೇರಳದ ಚಿತ್ರರಂಗ ಕಂಪಿಸಲಾರಂಭಿಸಿದೆ. ಕೆಲವು ವರ್ಷಗಳ ಮುನ್ನ ದೇಶವ್ಯಾಪಿಯಾಗಿ ನಡೆದ ಮೀ ಟೂ ಆಂದೋಲನ ಮತ್ತೊಮ್ಮೆ ಚಾಲನೆ ಪಡೆದಿದೆ. ಮಲಯಾಳಂ ಚಿತ್ರರಂಗದತ್ತ ಬೊಟ್ಟು ಮಾಡಿ ತೋರಿಸುತ್ತಾ ನಮ್ಮ ಬೆನ್ನು ತಟ್ಟಿಕೊಳ್ಳುವ ಮುನ್ನ, ಕನ್ನಡ ಚಿತ್ರರಂಗವೂ ಇಂತಹ ಪ್ರಕರಣಗಳಿಂದ ಸಂಪೂರ್ಣವಾಗಿ ಮುಕ್ತವಾಗಿರಲು ಸಾಧ್ಯವಿಲ್ಲ ಎಂಬ ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕಿದೆ. ಏಕೆಂದರೆ ಭಾರತದ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆ ಇಂದಿಗೂ ಸ್ವಂತ ಅಭಿವ್ಯಕ್ತಿ ಅಥವಾ ಸ್ವಾಯತ್ತ ವ್ಯಕ್ತಿತ್ವಕ್ಕಾಗಿ ಹೋರಾಡಲೇಬೇಕಾದ ಪರಿಸ್ಥಿತಿ ಇದೆ. ಸಾಂಸ್ಕೃತಿಕ ವಲಯದ ಸಾಂಸ್ಥಿಕ ಹುದ್ದೆಗಳಿಂದ ರಾಜಕೀಯ ಅಧಿಕಾರ ಕೇಂದ್ರಗಳ ವರೆಗೂ ವ್ಯಾಪಿಸುವ ಪುರುಷಪ್ರಧಾನ ಮೌಲ್ಯಗಳ ದೃಷ್ಟಿಕೋನ ಇನ್ನಾದರೂ ಬದಲಾಗಬೇಕು.

ಅಧಿಕಾರ ಕೇಂದ್ರಗಳಲ್ಲಿ, ಸಾರ್ವಜನಿಕ ಸೇವಾ ವಲಯಗಳಲ್ಲಿ, ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಮಹಿಳೆಯರಿಗೆ ನೀಡಬೇಕಾದ ಪ್ರಾತಿನಿಧಿಕ ಸ್ಥಾನಗಳನ್ನು ಕಲ್ಪಿಸುವಲ್ಲೂ ವಿಫಲವಾಗುತ್ತಿರುವ ಭಾರತೀಯ ಸಮಾಜ, ದೇಶದಾದ್ಯಂತ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುತ್ತದೆ ಎಂದು ನಿರೀಕ್ಷಿಸುವುದಾದರೂ ಹೇಗೆ?

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಸಿಂಡಿಕೇಟ್‌ಗಳಿಗೆ ಇತ್ತೀಚೆಗೆ ನಡೆದಿರುವ ಸದಸ್ಯರ ನೇಮಕದಲ್ಲಿ, ಕೆಲವು ಸ್ಥಾನಗಳನ್ನಷ್ಟೇ ಮಹಿಳೆಯರಿಗೆ ನೀಡಲಾಗಿದೆ. ಸಮಾಜದಲ್ಲಿ ಲಿಂಗತ್ವ ಸಮಾನತೆ ಮತ್ತು ಸೂಕ್ಷ್ಮತೆಯನ್ನು ಬೆಳೆಸಲು ಪ್ರಧಾನ ಪಾತ್ರ ವಹಿಸಬೇಕಾದ ಶೈಕ್ಷಣಿಕ ವಲಯದಲ್ಲೇ ಈ ಅಸಮಾನತೆ ತಾಂಡವವಾಡುತ್ತಿರುವಾಗ, ಮೇಲ್ಪದರದಿಂದ ತಳಸ್ತರದವರೆಗೂ ಜನರಿಗೆ ಮನರಂಜನೆ ನೀಡುವ ಸಿನಿಮಾ ರಂಗದಲ್ಲೇ ಹೆಣ್ಣುಮಕ್ಕಳ ಘನತೆ ಅಪಾಯಕ್ಕೆ ಈಡಾಗಿರುವಾಗ, ಲಿಂಗಸೂಕ್ಷ್ಮತೆ, ಸಂವೇದನೆಯನ್ನು ಎಲ್ಲಿಂದು ಹುಡುಕಲು ಸಾಧ್ಯ?



ಸರ್ಕಾರಗಳು ಕಠಿಣ ಕಾನೂನುಗಳನ್ನು ಜಾರಿಗೊಳಿಸಬೇಕು, ಇರುವ ಕಾನೂನು ವ್ಯವಸ್ಥೆಯನ್ನು ಬಿಗಿಗೊಳಿಸಬೇಕು, ಹೆಣ್ಣುಮಕ್ಕಳಿಗೆ ಭೌತಿಕವಾಗಿ ರಕ್ಷಣೆ ನೀಡಬೇಕು ಎಂಬಂತಹ ಆಗ್ರಹಗಳನ್ನು ಕೆಲ ಕ್ಷಣ ಬದಿಗಿಟ್ಟು ಪ್ರಾಮಾಣಿಕವಾಗಿ ಯೋಚಿಸಿ ನೋಡಿದರೆ, ಮಹಿಳೆಯರ ಮೇಲೆ ನಡೆಯುತ್ತಿರುವ ಈ ಆತ್ಮಘಾತುಕ ದೌರ್ಜನ್ಯಗಳ ಮೂಲವನ್ನು ಶೋಧಿಸಬಹುದು. ರಾಜಕೀಯ ಪಕ್ಷಗಳಿಗೆ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರತಿ ಪ್ರಕರಣವೂ 'ಇವರು' ಮತ್ತು 'ಅವರ' ನಡುವಿನ ಅಸ್ಮಿತೆಗಳಲ್ಲಿ ಕಾಣುತ್ತದೆ. ಪಾತಕಿಗಳು ಮತ್ತು ಸಂತ್ರಸ್ತರನ್ನು ತಮ್ಮ ರಾಜಕೀಯ ಅನುಕೂಲಗಳಿಗೆ ತಕ್ಕಂತೆ ವಿಂಗಡಿಸುವ ಕ್ಷುದ್ರ ರಾಜಕಾರಣದ ನಡುವೆ, ದೌರ್ಜನ್ಯಕ್ಕೊಳಗಾದ ಅಸಹಾಯಕ ಮಹಿಳೆಯರ ಆಕ್ರಂದನ ಎಲ್ಲೋ ಕಳೆದುಹೋಗಿರುತ್ತದೆ. ಹೆಣ್ತನದ ಘನತೆಯ ಮೇಲೆ ನಡೆಯುತ್ತಿರುವ ರಾಕ್ಷಸೀ ದೌರ್ಜನ್ಯಗಳನ್ನು ತಡೆಗಟ್ಟಲು ಕಾಯ್ದೆ ಕಾನೂನುಗಳಿಗಿಂತಲೂ ಹೆಚ್ಚಾಗಿ ಸಮಾಜದಲ್ಲಿ ತಳಮಟ್ಟದಿಂದಲೇ ಲಿಂಗತ್ವ ಸೂಕ್ಷ್ಮತೆ, ಮಹಿಳಾ ಸಂವೇದನೆಯನ್ನು ಬೆಳೆಸಬೇಕಾದ ತುರ್ತು ಎದುರಾಗಿದೆ. ಸರ್ಕಾರಗಳಿಗೆ ಇದು ಪ್ರಾಯೋಜಿತ ಕಾರ್ಯಕ್ರಮವಾಗಿಬಿಡುತ್ತದೆ.

ಈ ವಿಷಮ ಸನ್ನಿವೇಶದಲ್ಲಿ ನಾಗರಿಕ ಸಂಘಟನೆಗಳೇ ಈ ಕೈಂಕರ್ಯವನ್ನು ತಮ್ಮ ಆದ್ಯತೆಯಾಗಿ ಪರಿಗಣಿಸಿ ಮುನ್ನಡೆಯಬೇಕಿದೆ.

ವಾಚಕರ ವಾಣಿ

ಕವಿಗಳನ್ನು ಗುರುತಿಸುವ ಕೆಲಸವಾಗಲಿ

ದಸರಾ ಮಹೋತ್ಸವದ ಕವಿಗೋಷ್ಠಿಯ ಉಪಸಮಿತಿಯಿಂದ ಪ್ರಾದೇಶಿಕ ಹಾಗೂ ವಿಖ್ಯಾತ ಕವಿಗೋಷ್ಠಿಗೆ ಕವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇದು, ಬರಹಗಾರರನ್ನು ಮುಜುಗರಕ್ಕೆ ಈಡು ಮಾಡುವ ಸಂಗತಿ. ದಸರಾ ಕವಿಗೋಷ್ಠಿಗೆ ತನ್ನದೇ ಆದ ಹಿನ್ನೆಲೆ ಮತ್ತು ಸಾಂಸ್ಕೃತಿಕ ಅನನ್ಯತೆ ಇದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿ ಜಿಲ್ಲೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ನೆರವಿನೊಂದಿಗೆ ಕವಿಗೋಷ್ಠಿಗೆ ಹೆಸರುಗಳನ್ನು ಅಂತಿಮಗೊಳಿಸಬೇಕು. ಕವಿಗಳು ತಾವೇ ಅರ್ಜಿ ಹಾಕಿಕೊಂಡು ಕವಿಗೋಷ್ಠಿಯಲ್ಲಿ ಭಾಗವಹಿಸಬೇಕು ಎನ್ನುವುದು ಒಳ್ಳೆಯ ಸಂಪ್ರದಾಯವಲ್ಲ.

ಸಮಿತಿಯು ಯಾವುದೇ ಶಿಫಾರಸುಗಳಿಗೆ ಸುಲಭವಾಗಿ ಒಳಗಾಗಬಾರದು. ಹಾಗೇನಾದರೂ ಆದರೆ ಕವಿಗೋಷ್ಠಿಯ ಗುಣಮಟ್ಟ ಕಡಿಮೆಯಾಗಿ, ಅಲ್ಲಿ ಸೇರುವ ಕಾವ್ಯಾಸಕ್ತರಿಗೆ ನಿರಾಸೆಯಾಗುತ್ತದೆ. ನಮ್ಮೆಲ್ಲರ ಪ್ರಜ್ಞೆಯನ್ನು ಅರಳಿಸುವ, ವಿಚಾರಕ್ಕೆ ಹಚ್ಚುವ, ಕಾವ್ಯ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡಿರುವ ಕವಿಗಳನ್ನು ಗುರುತಿಸಿ ಅವಕಾಶ ಕಲ್ಪಿಸಿಕೊಟ್ಟರೆ ಕವಿಗೋಷ್ಠಿಗೆ ಅರ್ಥ ಬರಲು ಸಾಧ್ಯ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಅನೇಕ ಕವಿಗಳು ಇತ್ತೀಚೆಗೆ ಗಜಲ್‌ಗಳನ್ನು ಬರೆಯುತ್ತಿದ್ದಾರೆ. ಈ ಮಹೋತ್ಸವದಲ್ಲಿ ಗಜಲ್‌ಗೆ ಸಂಬಂಧಿಸಿದ ಪ್ರತ್ಯೇಕ ಗೋಷ್ಠಿಯನ್ನು ಏರ್ಪಡಿಸುವುದು ಕೂಡ ಸೂಕ್ತ.

ದಸ್ತಗೀರಸಾಬ್ ದಿನ್ನಿ, ಬಳ್ಳಾರಿ

ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸಿ

'ಎಲ್ಲ ಶಾಸಕರೂ ತಾವು ಪ್ರತಿನಿಧಿಸುವ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ತಲಾ ಐದು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅವುಗಳನ್ನು ಸಬಲೀಕರಣಗೊಳಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮನವಿ ಮಾಡಿಕೊಂಡಿದ್ದಾರೆ (ಪ್ರ.ವಾ., ಆ. 30). ಇದೊಂದು ಸಾಮಾಜಿಕ ಚಿಂತನೆ ಮತ್ತು ಕನ್ನಡ ಕಟ್ಟುವ ಕೆಲಸಕ್ಕೆ ಇರಬೇಕಾದ ಕಳಕಳಿ. ಪ್ರಸ್ತುತ ಅಧಿಕಾರಸ್ಥ ರಾಜಕಾರಣಿಗಳು ಕೆಲವು ವಿಶೇಷ ಹಬ್ಬ ಹರಿದಿನಗಳಲ್ಲಿ ಭಜನೆ, ಪೂಜೆ, ಆರ್ಕೆಸ್ಟ್ರಾ, ಉಪಾಹಾರದ ವ್ಯವಸ್ಥೆ ಹಾಗೂ ಆಯ್ದ ಕೆಲವರಿಗೆ ಸನ್ಮಾನ ಮಾಡುವ ಪರಿಪಾಟ ಬೆಳೆಸಿಕೊಂಡಿದ್ದಾರೆ. ಇಂತಹ ಜನಪ್ರಿಯ ಗಿಮಿಕ್‌ಗಳನ್ನು ಮಾಡಿ ಮತ ಕೇಳುವ ಬದಲಿಗೆ, ತಮ್ಮ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸುವುದು ಶಾಶ್ವತ ಕೆಲಸವಾಗಿ ಉಳಿಯುತ್ತದೆ.

ಶಾಸಕರ ಜೊತೆಗೆ ಆಯಾ ತಾಲ್ಲೂಕಿನಲ್ಲಿ ಇರುವ ಸ್ಥಿತಿವಂತರು, ಮುಂದೆ ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬರಬೇಕೆಂದು ಕನಸು ಕಾಣುತ್ತಿರುವವರು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆ ಮತ್ತು ಗ್ರಂಥಾಲಯ ಕಟ್ಟಡಗಳನ್ನು ದುರಸ್ತಿ ಮಾಡಿಸಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಆಕ್ಷೇಪ ಸಲ್ಲಿಕೆ: ಶುಲ್ಕ ಕಡಿಮೆಯಾಗಲಿ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆಸಿದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಗಳನ್ನು ಗೂಗಲ್ ಅಥವಾ ಎ.ಐ. ಮೂಲಕ ಕನ್ನಡಕ್ಕೆ ಅನುವಾದ ಮಾಡಲಾಗಿದೆ ಎಂಬ ಟೀಕೆಗಳನ್ನು ತಳ್ಳಿಹಾಕಿರುವ ಕೆಪಿಎಸ್‌ಸಿ, ಅನುವಾದ ಮಾಡಿದ್ದು ಭಾಷಾಂತರಕಾರರು ಎಂದು ಹೇಳಿರುವುದನ್ನು ಓದಿ (ಪ್ರ.ವಾ., ಆ. 30) ಆಶ್ಚರ್ಯವಾಯಿತು. ಪೂರ್ವಭಾವಿ ಪರೀಕ್ಷೆಯ ಕೀ ಉತ್ತರಗಳನ್ನು ಬಿಡುಗಡೆ ಮಾಡಲಾಗಿದ್ದು, ಆಕ್ಷೇಪ ಸಲ್ಲಿಸಲು ಪ್ರತಿ ಪ್ರಶ್ನೆಗೆ ₹ 50 ಶುಲ್ಕ ನಿಗದಿ ಮಾಡಿರುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಅನೇಕ ಬಡ ವಿದ್ಯಾರ್ಥಿಗಳು ತಮ್ಮ ಕನಸಿನ ಹುದ್ದೆಯನ್ನು ಪಡೆಯುವುದಕ್ಕಾಗಿ ದೂರದ ಊರಿಗೆ ಹೋಗಿ ಕೋಚಿಂಗ್ ಸೆಂಟರ್‌ಗಳಿಗೆ ಸೇರಿ ಬಾಡಿಗೆ ಕೋಣೆಗಳಲ್ಲಿ ಇದ್ದು ಅಧ್ಯಯನ ನಡೆಸಿರುತ್ತಾರೆ. ಪರೀಕ್ಷೆ ಬರೆಯುವುದಕ್ಕೆ ಬೇರೆ ಊರುಗಳಿಗೆ ಹೋಗುವುದಕ್ಕೂ ಹಣ ಖರ್ಚು ಮಾಡಿರುತ್ತಾರೆ. ಅದರ ಜೊತೆಗೆ ಮೊನ್ನೆ ಪರೀಕ್ಷೆಯಲ್ಲಿ ಬಂದಂತಹ ಪ್ರಶ್ನೆಗಳಿಂದ ಆಘಾತಕ್ಕೆ ಒಳಗಾಗಿದ್ದಾರೆ.

ಹೀಗಿರುವಾಗ, ಆಕ್ಷೇಪ ಸಲ್ಲಿಸಲು ಪ್ರತಿ ಪ್ರಶ್ನೆಗೆ ₹ 50 ಶುಲ್ಕ ನಿಗದಿ ಮಾಡಿರುವುದು ಸರಿಯಲ್ಲ. ಬಡ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗುವ ಸಾಧ್ಯತೆ ಹೆಚ್ಚು. ಹಾಗಾಗಿ, ಆಯೋಗವು ಶುಲ್ಕದ ದರವನ್ನು ಕಡಿಮೆ ಮಾಡುವುದು ಸೂಕ್ತ.

ಅಂಬಿಕಾ ಬಿ.ಟಿ., ಹಾಸನ

ಸಿರಿವಂತಿಕೆಯ ಪಟ್ಟ!

ವರ್ಷಕ್ಕೊಬ್ಬರು ಮೇಲೇರುವ
ಸಿರಿವಂತಿಕೆಯ ಜೂಟಾಟ
ಬಹುಸಂಖ್ಯಾತ ಜನರಿಗಿದು
ಅರ್ಥವಾಗದ ಮನರಂಜನೆಯ ಆಟ
ಪತ್ರಿಕೆ ಓದುವ ಬಡ ಬೋರೇಗೌಡನಿಗೂ
ಕೋಟಿ ಎಂಬುದೀಗ ಬಾಯಿಪಾಠ!

ನೀ.ಗೂ.ರಮೇಶ್, ಮೈಸೂರು

ಗ್ರಂಥಾಲಯವೇನು ನ್ಯಾಯಬೆಲೆ ಅಂಗಡಿಯೇ?

ಜ್ಞಾನವನ್ನು ಬಿತ್ತರಿಸುವ ಕೇಂದ್ರವಾಗಿರುವ ಗ್ರಂಥಾಲಯಗಳು ಇಂದು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿವೆ. ಗ್ರಾಮ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಇದ್ದರೂ ಇಲ್ಲದಂತಾಗಿವೆ. ಮೊಬೈಲ್ ಫೋನ್ ಬಂದ ಮೇಲೆ ಗ್ರಂಥಾಲಯಗಳಿಗೆ ಭೇಟಿ ನೀಡುವವರ ಸಂಖ್ಯೆ ಕಡಿಮೆಯಾದರೂ ಇಂದಿಗೂ ಸಾರ್ವಜನಿಕ ಗ್ರಂಥಾಲಯವನ್ನು ಬಳಸುವ ಸಾವಿರಾರು ಜನರನ್ನು ಕಾಣುತ್ತೇವೆ. ಆದರೆ ಗ್ರಂಥಾಲಯದಲ್ಲಿ ಕನ್ನಡ, ಇಂಗ್ಲಿಷ್ ಪತ್ರಿಕೆಗಳು, ಒಂದೆರಡು ಮಾಸಿಕಗಳನ್ನು ಬಿಟ್ಟರೆ, ಹತ್ತು -ಹದಿನೈದು ವರ್ಷಗಳ ಹಿಂದೆ ಪ್ರಕಟಗೊಂಡ ಹಳೆಯ ಪುಸ್ತಕಗಳೇ ಹೆಚ್ಚಿಗೆ ಕಾಣಸಿಗುತ್ತವೆ. ಇತ್ತೀಚೆಗೆ ಬಿಡುಗಡೆಯಾದ ಹಲವಾರು ಉತ್ಕೃಷ್ಟ ಪುಸ್ತಕಗಳಾಗಲಿ, ಮಕ್ಕಳ ಪುಸ್ತಕಗಳಾಗಲಿ ನೋಡಲು ಸಿಗುವುದಿಲ್ಲ. ಮೇಲ್ವಿಚಾರಕರನ್ನು ಕೇಳಿದರೆ ಅವರು ಮೇಲಿನ ಅಧಿಕಾರಿಗಳಿಗೆ ತಿಳಿಸುತ್ತೇವೆ ಎಂದು ಹೇಳಿ ಸುಮ್ಮನಾಗುತ್ತಾರೆ.

ಕೆಲವೆಡೆ ಸಾರ್ವಜನಿಕ ಗ್ರಂಥಾಲಯದ ಫಲಕವಷ್ಟೇ ಇದ್ದು, ನ್ಯಾಯಬೆಲೆ ಅಂಗಡಿಯ ಹಾಗೆ ವಾರದಲ್ಲಿ ಎರಡು-ಮೂರು ದಿನ ಮಾತ್ರ ಬಾಗಿಲು ತೆಗೆಯುತ್ತಿದ್ದಾರೆ. ಇಂತಹ ನಿರ್ಲಕ್ಷ್ಯದಿಂದಲೇ ಓದುಗರ ಸಂಖ್ಯೆ ಇಳಿಮುಖವಾಗಿದೆ. ಇದರ ಕುರಿತು ಸರ್ಕಾರ ಮುತುವರ್ಜಿ ವಹಿಸಬೇಕು.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯ ಕೊಲೆ ಪ್ರಕರಣ

ಮರುತನಿಖೆ ಕೋರಿಕೆ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಮರು ತನಿಖೆಗೆ ಆದೇಶಿಸಬೇಕು ಹಾಗೂ ಪ್ರಕರಣದಿಂದ ಆರೋಪಿ ಸಂತೋಷ್ ರಾವ್ ಅವರನ್ನು ಖುಲಾಸೆಗೊಳಿಸಿದ ಸಿಬಿಐ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಲಾಗಿದ್ದ ಪ್ರತ್ಯೇಕ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧದ ಅರ್ಜಿಗಳ ಮೇಲಿನ ವಿಚಾರಣೆ ಅಲಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿಗಳಾದ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿತು. ಆದೇಶದ ಪ್ರತಿ ಇನ್ನಷ್ಟೇ ಲಭ್ಯವಾಗಬೇಕಿದೆ. ರಾಜ್ಯ ಪ್ರಾಸಿಕ್ಯೂಷನ್ ಪರ ವಿಜಯಕುಮಾರ್ ಮಜಗೆ ವಾದ ಮಂಡಿಸಿದ್ದರು.

ಪ್ರಕರಣವೇನು?: 'ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಎಸ್‌ಡಿಎಂ



ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯ ಮೇಲೆ 2012ರಲ್ಲಿ ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ' ಎಂಬ ಆರೋಪದ ಈ ಪ್ರಕರಣವನ್ನು ಬೆಳ್ತಂಗಡಿ ಠಾಣಾ ಪೊಲೀಸರು ಪ್ರಾಥಮಿಕವಾಗಿ ತನಿಖೆ ನಡೆಸಿದ್ದರು. ಬಳಿಕ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. 2012ರ ನವೆಂಬರ್ 6ರಂದು ಸಿಐಡಿ ತನಿಖೆಯನ್ನು ಸಿಬಿಐಗೆ ವರ್ಗಾಯಿಸಿ ಸರ್ಕಾರ ಆದೇಶಿಸಿತ್ತು. ಸಿಬಿಐ, ಕಾರ್ಕಳದ ಸಂತೋಷ್ ರಾವ್ ಆರೋಪಿ ಎಂದು ಗುರುತಿಸಿತ್ತು. 2023ರ ಜುಲೈ 16ರಂದು ಸಿಬಿಐ ವಿಶೇಷ ನ್ಯಾಯಾಲಯ ಸಂತೋಷ್ ರಾವ್ ಅವರನ್ನು ಖುಲಾಸೆಗೊಳಿಸಿತ್ತು.

'ಪ್ರಕರಣದ ಮರು ತನಿಖೆಗೆ ಆದೇಶಿಸಬೇಕು' ಎಂದು ಕೋರಿ ಸೌಜನ್ಯಳ ತಂದೆ ಧರ್ಮಸ್ಥಳದ ನಿವಾಸಿ ಚಂದಪ್ಪ ಗೌಡರ ರಿಟ್ ಅರ್ಜಿ, 'ಕಾರ್ಕಳ ತಾಲ್ಲೂಕಿನ ಕುಕುಂದೂರಿನ ಸಂತೋಷ್ ರಾವ್ ಅವರನ್ನು ಪ್ರಕರಣದಿಂದ ಖುಲಾಸೆಗೊಳಿಸಿದ ಸಿಬಿಐ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಸಿಬಿಐ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ಮತ್ತು 'ಪ್ರಕರಣದಲ್ಲಿ ನಿಜವಾದ ತಪ್ಪಿತಸ್ಥನನ್ನು ಪತ್ತೆ ಹಚ್ಚಲು ಸಿಬಿಐಗೆ ನಿರ್ದೇಶಿಸಬೇಕು' ಎಂದು ಕೋರಿ ಸಂತೋಷ್ ರಾವ್ ಮೂರು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದರು.

ಚಂದಪ್ಪ ಗೌಡ ಮನವಿ: 'ಸೂಕ್ತ ಸಾಕ್ಷ್ಯಾಧಾರಗಳಿಲ್ಲ ಎಂದು ಆರೋಪಿ ಸಂತೋಷ್ ರಾವ್ ಅವರನ್ನು ಸಿಬಿಐ ವಿಶೇಷ ನ್ಯಾಯಾಲಯ ಖುಲಾಸೆಗೊಳಿಸಿದೆ.ಕೃತ್ಯದಲ್ಲಿ ಆರೋಪಿಯ ಪಾತ್ರ ಇರುವುದನ್ನು ಮತ್ತು ಅವರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ. ಗೋಲ್ಡನ್ ಅವರ್‌ನಲ್ಲಿ ತನಿಖೆಯನ್ನು ಸಮರ್ಪಕವಾಗಿ ನಡೆಸಿಲ್ಲ ಎಂದು ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಇದರಿಂದ ಇಡೀ ತನಿಖೆ ನ್ಯಾಯೋಚಿತವಾಗಿ ನಡೆದಿಲ್ಲ ಎಂಬುದು ಸ್ಪಷ್ಟವಾಗಲಿದೆ. ಆದ್ದರಿಂದ ಮರು ತನಿಖೆ ನಡೆಸಲು ಆದೇಶಿಸಬೇಕು' ಎಂದು ಚಂದಪ್ಪ ಗೌಡ ತಮ್ಮ ಅರ್ಜಿಯಲ್ಲಿ ಮನವಿ ಮಾಡಿದ್ದರು. ಚಂದಪ್ಪ ಗೌಡ ಪರ ಹೈಕೋರ್ಟ್ ವಕೀಲ ಎಂ.ಆರ್.ಬಾಲಕೃಷ್ಣ ವಾದ ಮಂಡಿಸಿದ್ದರು.

ಸಿಬಿಐ ಕೋರಿಕೆ: 'ಸೌಜನ್ಯಳ ಮೇಲೆ ಅತ್ಯಾಚಾರ ಮತ್ತು ಕೊಲೆ ನಡೆದ ಎರಡನೇ ದಿನಕ್ಕೆ ಆರೋಪಿ ಸಂತೋಷ್ ರಾವ್ ಅವರನ್ನು ಬಂಧಿಸಲಾಗಿತ್ತು. ಸಂತೋಷ್ ರಾವ್ ಆ ಊರಿನವರಲ್ಲ. ಘಟನಾ ಸ್ಥಳದಲ್ಲಿ ಏಕೆ ಇದ್ದರು ಎಂಬುದಕ್ಕೆ ಅವರು ವಿವರಣೆ ನೀಡಿಲ್ಲ. ತನ್ನ ಬೆನ್ನು ಹಾಗೂ ಮಂಡಿಯಲ್ಲಿ ಗಾಯವಾಗಿರುವುದಕ್ಕೂ ಸೂಕ್ತ ವಿವರಣೆ ಕೊಟ್ಟಿಲ್ಲ. ಘಟನಾ ಸ್ಥಳದಲ್ಲಿ ಬಿಳಿ ಪಂಚೆಯೊಂದನ್ನು ವಶಕ್ಕೆ ಪಡೆಯಲಾಗಿದ್ದು, ಅದರಲ್ಲಿ ಸಂತೋಷ್ ರಾವ್ ಕೂದಲು ಸಿಕ್ಕಿದೆ. ಈ ಕೂದಲು ಸಂತೋಷ್ ರಾವ್‌ದೇ ಎಂಬುದು ಡಿಎನ್‌ಎ ವರದಿಯಲ್ಲಿ ಸಾಬೀತಾಗಿದೆ. ಹೀಗಾಗಿ, ಸಂತೋಷ್ ರಾವ್ ಅತ್ಯಾಚಾರ ಮತ್ತು ಕೊಲೆ ಮಾಡಿದ್ದಾರೆ. ಆದ್ದರಿಂದ, ಅವರನ್ನು ದೋಷಿಯಾಗಿ ಪರಿಗಣಿಸಿ ಶಿಕ್ಷೆ ವಿಧಿಸಬೇಕು' ಎಂದು ಸಿಬಿಐ ಕೋರಿತ್ತು.

> **ಸಂತೋಷ್ ರಾವ್ ಅರ್ಜಿ**
>
> 'ಯಾವುದೇ ತಪ್ಪು ಮಾಡದಿದ್ದರೂ ಪೊಲೀಸರು ನನ್ನನ್ನು ಬಂಧಿಸಿದ್ದರು. ವಿಶೇಷ ನ್ಯಾಯಾಲಯ ನನ್ನನ್ನು ಈಗಾಗಲೇ ದೋಷಮುಕ್ತಗೊಳಿಸಿದೆ. ಆದರೆ, ನಿಜವಾದ ಅಪರಾಧಿ ತಪ್ಪಿಸಿಕೊಂಡಿದ್ದಾನೆ. ಹಾಗಾಗಿ, ಪ್ರಕರಣದ ಮರು ತನಿಖೆ ನಡೆಸಿ, ನಿಜವಾದ ಅಪರಾಧಿಯನ್ನು ಬಂಧಿಸಬೇಕು. ತನಿಖಾಧಿಕಾರಿಗಳು ದುರುದ್ದೇಶಪೂರ್ವಕವಾಗಿ ನನ್ನನ್ನು ವಿಚಾರಣೆಗೆ ಒಳಪಡಿಸಿದ್ದ ಕಾರಣ ನನಗೆ ₹50 ಲಕ್ಷ ಪರಿಹಾರ ನೀಡಲು ರಾಜ್ಯ ಸರ್ಕಾರಕ್ಕೆ ಆದೇಶಿಸಬೇಕು' ಎಂದು ಸಂತೋಷರಾವ್ ತಮ್ಮ ಅರ್ಜಿಯಲ್ಲಿ ಕೋರಿದ್ದರು. ಸಂತೋಷ್ ರಾವ್ ಪರ ಕೆ.ಮೋಹಿತ್ ಕುಮಾರ್ ವಾದ ಮಂಡಿಸಿದ್ದರು.



ಬಾನಲ್ಲಿ ಚಿತ್ತಾರ

ಬೀದರ್ ಕೋಟೆ ಆವರಣದಲ್ಲಿ ಭಾರತೀಯ ವಾಯುಪಡೆ ಹಾಗೂ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ಎರಡು ದಿನಗಳ ಏರ್ ಶೋನಲ್ಲಿ ಶುಕ್ರವಾರ ಯುದ್ಧ ವಿಮಾನಗಳು ಬಾನಲ್ಲಿ ಮೂಡಿಸಿದ ಕೇಸರಿ–ಬಿಳಿ–ಹಸಿರು ಬಣ್ಣದ ದೃಶ್ಯ ಗಮನ ಸೆಳೆಯಿತು

ಪ್ರಜಾವಾಣಿ ಚಿತ್ರ: ಲೋಕೇಶ ವಿ. ಬಿರಾದಾರ

ಬಿಕಿನಿ ಫೋಟೊಶೂಟ್‌ಗೆ ತಡೆ: ಯುವತಿ ಆರೋಪ

ಪ್ರಜಾವಾಣಿ ವಾರ್ತೆ

ಉಡುಪಿ: ಪಡುಬಿದ್ರಿ ಬೀಚ್‌ನಲ್ಲಿ ಬಿಕಿನಿ ಹಾಕಿ ಫೋಟೊ ತೆಗೆದುಕೊಳ್ಳುವಾಗ ಪೊಲೀಸರು ತಡೆದಿದ್ದಾರೆ ಎಂದು ಯುವತಿಯೊಬ್ಬರು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ.

ಖ್ಯಾತಿಶ್ರೀ ಹೆಸರಿನ ಇನ್‌ಸ್ಟಾಗ್ರಾಂ ಖಾತೆ ಹೊಂದಿರುವ ಯುವತಿ, ಬೀಚ್‌ನಲ್ಲಿ ಬಿಕಿನಿ ಹಾಕಿ ತೆಗೆದಿರುವ ಫೋಟೊವನ್ನೂ, ಇಬ್ಬರು ಪೊಲೀಸರು ಅವರ ಬಳಿ ಬರುತ್ತಿರುವ ಮತ್ತು ಬೀಚ್‌ನಲ್ಲಿ ಕುಳಿತಿದ್ದ ಕೆಲವರ ಫೋಟೊಗಳನ್ನೂ ಪೋಸ್ಟ್ ಮಾಡಿದ್ದಾರೆ

'ಪಡುಬಿದ್ರಿ ಬೀಚ್‌ನಲ್ಲಿ ಗಂಡ ನನ್ನ ಫೋಟೊ ತೆಗೆಯುತ್ತಿದ್ದರು. ಆಗ ಅಲ್ಲಿಗೆ ಇಬ್ಬರು ಪೊಲೀಸರು ಬಂದು ಬಿಕಿನಿ ಯಾಕೆ ಧರಿಸಿದ್ದೀರಿ. ಅದಕ್ಕೆ ಅನುಮತಿ ಇದೆಯಾ ಎಂದು ಪ್ರಶ್ನಿಸಿದರು' ಎಂದು ಬರೆದುಕೊಂಡಿದ್ದಾರೆ.

'ಬಿಕಿನಿ ಹಾಕಿಕೊಂಡು ಬೀಚ್‌ಗೆ ಬರೋದು ಕಾನೂನುಬದ್ಧ. ಅದಕ್ಕೆ ಯಾವುದೇ ಅನುಮತಿ ಬೇಡ ಎಂದು ನನ್ನ ಗಂಡ ಪೊಲೀಸರಿಗೆ ತಿಳಿಸಿದರು. ಆಗ ಪೊಲೀಸರು ದೂರದಲ್ಲಿ ಕುಳಿತಿದ್ದ ಗುಂಪೊಂದನ್ನು ತೋರಿಸಿ, ನೀವು ಬಟ್ಟೆ ಬದಲಾಯಿಸದಿದ್ದರೆ ಅವರು ನಿಮ್ಮ ಮೇಲೆ ಹಲ್ಲೆ ನಡೆಸಬಹುದು ಎಂದರು. ನನ್ನ ಹಕ್ಕುಗಳನ್ನು ರಕ್ಷಣೆ ಮಾಡಬೇಕಾದ ಪೊಲೀಸರು ಆ ರೀತಿ ವರ್ತಿಸಿದ್ದಾರೆ' ಎಂದು ಯುವತಿ ಅಸಮಾಧಾನ ತೋಡಿಕೊಂಡಿದ್ದಾರೆ.

'ನಾವು ಅಲ್ಲಿಂದ ನಮ್ಮ ರೂಮ್‌ಗೆ ಬಂದೆವು. ಅಲ್ಲಿಂದ ನೋಡಿದಾಗ ಪೊಲೀಸರು ಆ ರೌಡಿಗಳ ಜೊತೆಗೆ ಮಾತನಾಡುತ್ತಿದ್ದರು. ಆ ಸ್ಥಳ ಸುರಕ್ಷಿತವಲ್ಲ ಎಂದು ಅರಿತು ಮುಂದಿನ ಗ್ರಾಮಕ್ಕೆ ಹೊರಟೆವು' ಎಂದು ಯುವತಿ ಫೋಟೊದ ಮೇಲೆ ಬರೆದುಕೊಂಡಿದ್ದಾರೆ.

ವಸತಿ ಪ್ರದೇಶದಲ್ಲಿ ಫೋಟೊ ಶೂಟ್: 'ಆರೋಪ ಮಾಡಿರುವ ದೆಹಲಿ ಮೂಲದ ಯುವತಿ ವಸತಿ ಪ್ರದೇಶದಲ್ಲಿರುವ ಕಡಲ ತೀರದಲ್ಲಿ ಸಂಜೆ ವೇಳೆ ಬಿಕಿನಿ ಹಾಕಿಕೊಂಡು ಫೋಟೊ ತೆಗೆಸಿಕೊಂಡಿದ್ದಾರೆ. ಆಗ ಸಾರ್ವಜನಿಕರು ಪೊಲೀಸರಿಗೆ ಕರೆ ಮಾಡಿದ್ದಾರೆ. ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿರುವುದರಿಂದ ಅಲ್ಲಿಂದ ತೆರಳಬೇಕೆಂದು ಪೊಲೀಸರು ಸೂಚಿಸಿದ್ದಾರೆ. ಪಡುಬಿದ್ರಿಯ ಬ್ಲೂ ಫ್ಲಾಗ್ ಬೀಚ್‌ನಲ್ಲಿ ಇದೇ ಯುವತಿ ಬಿಕಿನಿ ಹಾಕಿ ಫೋಟೊ ಶೂಟ್ ಮಾಡಿದ್ದಾರೆ. ಅದಕ್ಕೆ ಯಾರೂ ಆಕ್ಷೇಪ ವ್ಯಕ್ತಪಡಿಸಿರಲಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಕಳಸ ತಾಲ್ಲೂಕಿನ ಎಸ್‌.ಕೆ.ಮೇಗಲ್ ಗ್ರಾಮದಲ್ಲಿ ಯುವಕನ ಮೃತದೇಹವನ್ನು ಬಡಿಗೆಗೆ ಕಟ್ಟಿ ಹೊತ್ತುಕೊಂಡು ಸಾಗಿಸಲಾಯಿತು

ವಿಶೇಷ ಪೂಜೆ ಮಾಡಿದ ಸಿ.ಎಂ

ಪ್ರಜಾವಾಣಿ ವಾರ್ತೆ

ದೇವರಗುಡ್ಡ (ಹಾವೇರಿ ಜಿಲ್ಲೆ): ಇಲ್ಲಿಯ ಸುಕ್ಷೇತ್ರ ಮಾಲತೇಶ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಪೂಜೆ ಸಲ್ಲಿಸಿದರು. ಅರ್ಚಕರು, ಪೂಜಾ ಕೈಂಕರ್ಯಗಳನ್ನು ಪೂರ್ಣಗೊಳಿಸಿದರು. ಬಳಿಕ, ಗಂಗಮಾಳಮ್ಮ ದೇವಸ್ಥಾನಕ್ಕೂ ಭೇಟಿ ನೀಡಿ ನಮಸ್ಕರಿಸಿದರು. ನಂತರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕಂಚಿನ ಪ್ರತಿಮೆ ಮತ್ತು ಕನಕ ಭವನ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಸಚಿವ ಎಚ್‌.ಕೆ.ಪಾಟೀಲ ಮಾತನಾಡಿ,'ನನಗೂ ಮತ್ತು ಮುಖ್ಯಮಂತ್ರಿಯವರಿಗೆ ಮಾಲತೇಶ ದೇವರ ಆಶೀರ್ವಾದ ಸಿಕ್ಕಿದೆ' ಎಂದರು.

'ಮುಖ್ಯಮಂತ್ರಿ ಅವರಿಗೆ ಕಂಟಕ ಬರಲಿ ಎನ್ನುವವರು ಈಗ ಹೆಚ್ಚಾಗಿದ್ದಾರೆ. ಮುಖ್ಯಮಂತ್ರಿಗೆ ಎದುರಾದ ಕಂಟಕವನ್ನು ನಿವಾರಿಸಲು ಸ್ಥಳೀಯ ಶಾಸಕರು, ಅವರನ್ನು ದೇವರಗುಡ್ಡದ ಮಾಲತೇಶ ದೇವರ ಸನ್ನಿಧಿಗೆ ಕರೆಸಿ ದೇವರಿಗೆ ವಿಶೇಷ ಪೂಜೆ ಮಾಡಿಸಿದ್ದಾರೆ' ಎಂದರು.

ವಿಶೇಷ ಪೂಜೆ ಬಗ್ಗೆ ಪ್ರಸ್ತಾಪಿಸದ ಮುಖ್ಯಮಂತ್ರಿ ಸಿದ್ದರಾಮಯ್ಯ,'ಊರಿನ ಜನರ ಪ್ರೀತಿ ಹಾಗೂ ಅಭಿಮಾನಕ್ಕೆ ನಾನು ಚಿರಋಣಿ. ಮಾಲತೇಶ ದೇವರು ನಿಮಗೆ, ನಾಡಿಗೆ ಹಾಗೂ ನನಗೆ ಒಳ್ಳೆಯದು ಮಾಡಲಿ' ಎಂದರು.

ಇಲ್ಲದ ರಸ್ತೆ; ಬಡಿಗೆ ಕಟ್ಟಿ ಯುವಕನ ಶವ ಸಾಗಿಸಿದರು

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಸಂಸೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಸ್‌. ಕೆ. ಮೇಗಲ್ ಗ್ರಾಮದ ಕೊಣೆಗೋಡು ಎಸ್‌ಸಿ ಕಾಲೊನಿಗೆ ಸಂಪರ್ಕ ರಸ್ತೆ ಇಲ್ಲದೆ ಗ್ರಾಮಸ್ಥರು ಪರದಾಡುವಂತಾಗಿದೆ.

ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದ ಗ್ರಾಮದ ಯುವಕ ಅವಿನಾಶ್ ಎಂಬುವರು ಶುಕ್ರವಾರ ಮೃತಪಟ್ಟರು. ಅಂತ್ಯಸಂಸ್ಕಾರಕ್ಕಾಗಿ ಅವರ ಮೃತದೇಹವನ್ನು ಕಾಲೊನಿಯ ಮನೆಗೆ ತರಲು ರಸ್ತೆ ಇಲ್ಲದ ಕಾರಣ ಸಂಬಂಧಿಕರು ಬಡಿಗೆಗೆ ಕಟ್ಟಿಕೊಂಡು ಹೊತ್ತು ತಂದರು.

ಅವಿನಾಶ್ ಅವರನ್ನು ಗುರುವಾರ ಬೆನ್ನಿನ ಮೇಲೆ ಹೊತ್ತುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಾಲೊನಿಗೆ ರಸ್ತೆ ಇಲ್ಲದ ಕಾರಣ, ಬಡಿಗೆಗೆ ಕಟ್ಟಿ ಮೃತದೇಹ ತರಬೇಕಾಯಿತು ಎಂದು ಗ್ರಾಮಸ್ಥರು ಹೇಳಿದರು.

'ನಮ್ಮೂರಿಗೆ ಕನಿಷ್ಠ ರಸ್ತೆ ಸೌಲಭ್ಯವೂ ಇಲ್ಲ ಎನ್ನುವುದು ಬೇಸರದ ವಿಷಯ. ಮಳೆಗಾಲದಲ್ಲಿ ಹಳ್ಳ ರಭಸವಾಗಿ ಹರಿಯುವುದರಿಂದ ಗ್ರಾಮದ ಸಂಪರ್ಕ ಕಡಿದು ಹೋಗುತ್ತದೆ. ರಸ್ತೆ, ಸೇತುವೆಗಾಗಿ ಹಲವು ವರ್ಷಗಳಿಂದ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸುತ್ತಲೇ ಬಂದಿದ್ದೇವೆ. ಆದರೆ, ನಮ್ಮ ಬಗ್ಗೆ ಯಾರಿಗೂ ಕನಿಕರ ಇಲ್ಲ' ಎಂದು ಗ್ರಾಮದ ಮಹಿಳೆ ಗಿರಿಜಾ ನೋವಿನಿಂದ ನುಡಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಂಸೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುಬ್ರಮಣಿ, 'ಈ ರಸ್ತೆ ಅಭಿವೃದ್ಧಿಯ ಅನುದಾನ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಸದಸ್ಯರು ಕ್ರಿಯಾ ಯೋಜನೆಯಲ್ಲಿ ಸೇರ್ಪಡೆ ಮಾಡಿದರೆ ಮುಂದಿನ ದಿನಗಳಲ್ಲಿ ಅಭಿವೃದ್ಧಿ ಸಾಧ್ಯವಾಗಲಿದೆ' ಎಂದರು.

ನೀಟ್, ಸಿಇಟಿ ಇಂದಿನಿಂದ ಪ್ರವೇಶ ಪ್ರಕ್ರಿಯೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೀಟ್ ಹಾಗೂ ಸಿಇಟಿ ಮೊದಲ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದ್ದು, ಆ. 31ರಿಂದಲೇ ಪ್ರವೇಶ ಪ್ರಕ್ರಿಯೆಗಳು ಆರಂಭವಾಗಲಿವೆ.

ವೈದ್ಯಕೀಯ, ದಂತವೈದ್ಯಕೀಯ, ಆಯುಷ್, ಎಂಜಿನಿಯರಿಂಗ್, ವಾಸ್ತು ಶಿಲ್ಪಶಾಸ್ತ್ರ, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಬಿ-ಫಾರ್ಮ, ಬಿಎಸ್‌ಸಿ (ನರ್ಸಿಂಗ್), ಯೋಗ ಮತ್ತು ನ್ಯಾಚುರೋಪತಿ ಮುಂತಾದ ಕೋರ್ಸ್‌ಗಳ ಅಭ್ಯರ್ಥಿಗಳು ಪೋಷಕರ ಜತೆ ಚರ್ಚಿಸಿ, ವಿವರಣೆಗಳನ್ನು ಅರ್ಥಮಾಡಿಕೊಂಡು ನಾಲ್ಕು ಚಾಯ್ಸ್‌ಗಳಲ್ಲಿ ಸೂಕ್ತವಾದ ಕಾಲೇಜು, ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆಯಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌. ಪ್ರಸನ್ನ ಹೇಳಿದ್ದಾರೆ.

ಪರಿಹಾರಕ್ಕಾಗಿ ತಪ್ಪದ ಪರದಾಟ

ಒಂದನೇ ಪುಟದಿಂದ...

'ಅನಿಯಂತ್ರಿತ ಠೇವಣಿ' (ಅನ್‌ರೆಗ್ಯುಲೇಟೆಡ್ ಡೆಪಾಸಿಟ್) ಯೋಜನೆಗಳ ಅಡಿ, ಅಧಿಕ ಬಡ್ಡಿ ಆಸೆಗಾಗಿ ಹಣ ಹೂಡಿದ್ದ ಮಹಿಳೆಯರು ಪರಿತಪಿಸುತ್ತಿದ್ದಾರೆ.

ರಚನೆಯಾಗದ ಸಕ್ಷಮ ಪ್ರಾಧಿಕಾರ: ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ 2004 (ಕೆ.ಪಿ.ಐ.ಡಿ ಅಧಿನಿಯಮ) ಮತ್ತು 2019ರ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ 2019ರ ಅಡಿಯಲ್ಲಿ ಸರ್ಕಾರ 'ಸಕ್ಷಮ ಪ್ರಾಧಿಕಾರ'ವನ್ನು ರಾಜ್ಯದಲ್ಲಿ ಇದುವರೆಗೆ ರಚಿಸಿಲ್ಲ. ವಿಶೇಷಾಧಿಕಾರಿಯನ್ನೂ ನೇಮಿಸಿಲ್ಲ.

'ಅಧಿಸೂಚನೆ ಹೊರಡಿಸಿಲ್ಲವಾದ್ದರಿಂದ ಸದ್ಯಕ್ಕೆ ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ' ಎಂದು ಮಂಡ್ಯ ಜಿಲ್ಲಾಡಳಿತ ತಿಳಿಸಿದೆ.

ಹಣ ವಸೂಲಿ: 'ಪರಿಹಾರ ಕೊಡಿಸುತ್ತೇವೆ ಎಂದು ನಂಬಿಸಿ, ಅರ್ಜಿ ಹಾಕಿಸಲು ತಲಾ ₹2000–₹3000 ವಸೂಲಿ ಮಾಡಿ ಮಧ್ಯವರ್ತಿಗಳು ಕರೆ ತಂದಿದ್ದರು. ಇಲ್ಲಿ ನೋಡಿದರೆ ಅರ್ಜಿಯನ್ನೇ ಸ್ವೀಕರಿಸುತ್ತಿಲ್ಲ' ಎಂದು ಜಿಲ್ಲಾಧಿಕಾರಿ ಕಚೇರಿ ಬಳಿ ಕುಳಿತಿದ್ದ ಮಹಿಳೆಯರು ಅಳಲು ತೋಡಿಕೊಂಡರು.

> ಅರ್ಜಿಗಳನ್ನು ಮಾನವೀಯ ದೃಷ್ಟಿಯಿಂದ ಸ್ವೀಕರಿಸಿದ್ದೇವೆ. ಸರ್ಕಾರ 'ಸಕ್ಷಮ ಪ್ರಾಧಿಕಾರ' ರಚಿಸಿ, ಅಧಿಸೂಚನೆ ಹೊರಡಿಸಿದ ನಂತರ ಅರ್ಜಿಗಳನ್ನು ರವಾನಿಸುತ್ತೇವೆ
>
> **ಕುಮಾರ,** ಮಂಡ್ಯ ಜಿಲ್ಲಾಧಿಕಾರಿ

2023ರ ನವೆಂಬರ್‌ನಿಂದ ಇಲ್ಲಿಯವರೆಗೆ ಮಂಡ್ಯ ಜಿಲ್ಲೆಯೊಂದರಲ್ಲೇ 37,400 ಅರ್ಜಿಗಳು ಸಲ್ಲಿಕೆಯಾಗಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲೂ ಸಾವಿರಾರು ಅರ್ಜಿಗಳು ಸಲ್ಲಿಕೆಯಾಗಿದ್ದು, ಅವು ಜಿಲ್ಲಾಧಿಕಾರಿ ಕಚೇರಿಗಳಲ್ಲೇ ದೂಳು ತಿನ್ನುತ್ತಿವೆ.

'ಹಳ್ಳಿಗಾಡಿನ ಮಹಿಳೆಯರಿಗೆ ಬಡ್ಡಿ ಆಸೆ ತೋರಿಸಿ, ಕೂಡಿಟ್ಟ ಹಣವನ್ನು ಕಸಿದುಕೊಂಡ ಖಾಸಗಿ ಹಣಕಾಸು ಸಂಸ್ಥೆಗಳ ವಿರುದ್ಧ ಬಡ್ಸ್ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಆ ಕಂಪನಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ಸಿಐಟಿಯು ಮಂಡ್ಯ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ ಆಗ್ರಹಿಸಿದ್ದಾರೆ.

> **245 ಎಫ್‌ಐಆರ್**
>
> 'ರಾಜ್ಯದ ವಿವಿಧ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ಬಡ್ಸ್ ಕಾಯ್ದೆಯಡಿ 245 ಎಫ್‌ಐಆರ್ ದಾಖಲಾಗಿದ್ದು, ಕೆಲವು ತನಿಖಾ ಹಂತದಲ್ಲಿ, ಕೆಲವು ದೋಷಾರೋಪಣಾ ಪಟ್ಟಿ ಸಲ್ಲಿಸುವ ಹಂತದಲ್ಲಿವೆ. ಇನ್ನೂ ಕೆಲವು ವಿಚಾರಣಾ ಹಂತದಲ್ಲಿವೆ' ಎಂದು ಗೃಹ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ವಿಜಯೇಂದ್ರ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಕಾರಿ 'ಎಕ್ಸ್' ಪೋಸ್ಟ್ ಹಂಚಿಕೊಂಡ ಆರೋಪದಡಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

'ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ವಿಜಯೇಂದ್ರ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಈ ಪ್ರಕರಣದಲ್ಲಿ ಒಂದೇ ಆರೋಪಕ್ಕೆ 2 ಎಫ್‌ಐಆರ್ ದಾಖಲಿಸಿರುವುದು ಕಾನೂನುಬಾಹಿರ. ಆದ್ದರಿಂದ, ಎಫ್‌ಐಆರ್ ರದ್ದುಪಡಿಸಬೇಕು' ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರಕರಣಕ್ಕೆ ತಡೆ ನೀಡಿ ವಿಚಾರಣೆಯನ್ನು ಸೆ.19ಕ್ಕೆ ಮುಂದೂಡಿತು.

ಮೀಸಲಾತಿಗೆ ಸಂಬಂಧಿಸಿದ ವಿಡಿಯೊವನ್ನು ಬಿಜೆಪಿ ರಾಜ್ಯ ಘಟಕದ ಎಕ್ಸ್ ಖಾತೆಯಲ್ಲಿ ಹಂಚಿಕೊಳ್ಳಲಾಗಿತ್ತು. ಸಮಾಜದಲ್ಲಿ ದ್ವೇಷ ಬಿತ್ತಲು ಯತ್ನಿಸಿದ್ದ ಆರೋಪದಡಿ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ, ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಮತ್ತು ಬಿ.ವೈ.ವಿಜಯೇಂದ್ರ ವಿರುದ್ಧ ಕೆಪಿಸಿಸಿ ಮಾಧ್ಯಮ, ಸಂವಹನ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಹಾಗೂ ಚುನಾವಣಾ ಆಯೋಗ ಪ್ರತ್ಯೇಕ ದೂರು ನೀಡಿದ್ದವು.



ಹಳೆ ಕಥೆಗೆ ಹೊಸ ದೃಶ್ಯ ಸ್ಪರ್ಶ

ನಾವು ನೋಡಿದ ಸಿನಿಮಾ

ಚಿತ್ರದ ಹೆಸರು: ಪೆಪೆ

- ನಿರ್ದೇಶನ: ಶ್ರೀಲೇಶ್ ಎಸ್. ನಾಯರ್
- ನಿರ್ಮಾಣ: ಉದಯ್‌ಶಂಕರ್ ಎಸ್
- ತಾರಾಗಣ: ವಿನಯ್ ರಾಜ್‌ಕುಮಾರ್, ಕಾಜಲ್ ಕುಂದರ್, ಮಯೂರ್ ಪಟೇಲ್ ಮತ್ತಿತರರು

1990ರ ದಶಕದಲ್ಲಿ ನಂಜನಗೂಡು ಸಮೀಪದ ಬದನವಾಳು ಗ್ರಾಮದಲ್ಲಿ ನಡೆದ ದಲಿತರ ಹತ್ಯಾಕಾಂಡವೇ 'ಪೆಪೆ' ಚಿತ್ರದ ಕಥೆಯ ಸಾರಾಂಶ. ಹಾಗಂತ ಹತ್ಯಾಕಾಂಡವನ್ನೇ ಯಥಾವತ್ತಾಗಿ ಸಿನಿಮಾ ಮಾಡಿಲ್ಲ. ಕೊಡಗಿನ ಕಾಲ್ಪನಿಕ ಬದನಾಳು ಗ್ರಾಮದಲ್ಲಿನ ನಾಲ್ಕು ಬೇರೆ, ಬೇರೆ ಜಾತಿಗಳ ನಡುವೆ ನೀರಿನ ತೊರೆಗಾಗಿ ನಡೆಯುವ ಸಂಘರ್ಷವೇ ಮುಖ್ಯ ಕಥಾವಸ್ತು. ಚಿತ್ರದ ನಾಯಕ 'ಪೆಪೆ' ಕೆಳಜಾತಿಯವರ ಪ್ರತಿನಿಧಿಯಾಗಿರುತ್ತಾನೆ. ಚಿತ್ರದ ಬಹುದೊಡ್ಡ ಕೊರತೆಯೇ ದುರ್ಬಲ ಕಥೆ.

ಜಾತಿ ಸಂಘರ್ಷ, ಮೂಢನಂಬಿಕೆ, ಪುರುಷ ಪ್ರಾಬಲ್ಯ, ಮಹಿಳಾ ದೌರ್ಜನ್ಯಗಳ ವಿರುದ್ಧ ಒಂದೇ ಕಥೆಯಲ್ಲಿ ಅರಿವು ಮೂಡಿಸುವ ನಿರ್ದೇಶಕರ ಯತ್ನ ಕಥೆಗೆ ಬಲವಂತವಾಗಿ ಒಂದಷ್ಟನ್ನು ತುರುಕಿದ ಭಾವನೆ ಮೂಡಿಸುತ್ತದೆ. ಕೆಳಜಾತಿಯವರ ಕೇರಿಗೆ ಬೆಂಕಿ ಇಟ್ಟಾಗ ರಸ್ತೆಯಲ್ಲಿ ಸುರಿದು ಬಿದ್ದ ಅಕ್ಕಿಯನ್ನು ಹೆಕ್ಕುವ ಅಜ್ಜಿ, ಹೆಣ್ಣಿನ ಮುಟ್ಟಿನ ಕುರಿತಾದ ದೃಶ್ಯಗಳಂತಹ ಕೆಲವಷ್ಟು ಕೃತಕವೆನಿಸುತ್ತವೆ. ಜೊತೆಗೆ ಈ ರೀತಿಯ ಸಾಕಷ್ಟು ಸಿನಿಮಾಗಳು ಈಗಾಗಲೇ ಬಂದಿರುವುದರಿಂದ ಹೊಸತೇನು ಕಾಣಿಸುವುದಿಲ್ಲ.

ಆದರೆ ನಿರ್ದೇಶಕ ಶ್ರೀಲೇಶ್ ದೃಶ್ಯಗಳನ್ನು ಕಟ್ಟಿಕೊಟ್ಟ ರೀತಿ ಅನನ್ಯವಾಗಿದೆ. ಮಲಯಾಳದ 'ಅಂಗಮಾಲಿ ಡೈರೀಸ್', 'ಕಮ್ಮಾಟಿಪಾಡಂ' ಮೊದಲಾದ ಚಿತ್ರಗಳ ರೀತಿಯಲ್ಲಿ ನಿರ್ದೇಶಕರು 'ಪೆಪೆ' ದೃಶ್ಯಗಳನ್ನು ಕಟ್ಟಿಕೊಟ್ಟಿದ್ದಾರೆ. ಛಾಯಾಚಿತ್ರಗ್ರಹಣ, ಸಂಕಲನ ಕೂಡ ಇದಕ್ಕೆ ಪೂರಕವಾಗಿದೆ.

ಕೊಡಗಿನ ಕಾಡು, ಸಂಸ್ಕೃತಿ, ಕಾಡು ಜನರ ಹಾಡಿ ಚಿತ್ರಣ ಸೊಗಸಾಗಿದೆ. ಫೈಟ್ ದೃಶ್ಯಗಳನ್ನು ಹೊರತುಪಡಿಸಿ ಉಳಿದ ಬಹುತೇಕ ಸನ್ನಿವೇಶಗಳು ನೈಜ ಸ್ಥಳಗಳಲ್ಲಿಯೇ ನಡೆಯುತ್ತವೆ. ಪಾತ್ರಗಳ ನಡುವಿನ ಸಂಬಂಧ, ಭಾವನೆಗಳನ್ನು ಬಹಳ ಸಹಜವಾಗಿಡಲು ನಿರ್ದೇಶಕರು ಯತ್ನಿಸಿದ್ದಾರೆ. ಬಹುತೇಕ ಎಲ್ಲ ಕಲಾವಿದರು ತಮ್ಮ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ನಿರ್ದೇಶಕರು ಬಹಳ ತಾಳ್ಮೆಯಿಂದ ಕಥೆಯನ್ನು ಹೇಳಿರುವುದು ಸಾಕಷ್ಟು ಕಡೆ ನೋಡುಗನ ತಾಳ್ಮೆಯನ್ನು ಪರೀಕ್ಷಿಸುತ್ತದೆ. ಕಥೆಯಲ್ಲಿ ಹೆಚ್ಚು ತಿರುವು ಇಲ್ಲದೇ ಇರುವುದರಿಂದ, ಬಹಳ ಕಡೆ ನಿರೀಕ್ಷಿಸಿದಂತೆಯೇ ಕಥೆ ನಡೆಯುವುದರಿಂದ ದ್ವಿತೀಯಾರ್ಧವನ್ನು ಸ್ವಲ್ಪ ವೇಗವಾಗಿಸಿ ಸಿನಿಮಾ ಅವಧಿಯನ್ನು ಕೊಂಚ ತಗ್ಗಿಸುವ ಅವಕಾಶ ನಿರ್ದೇಶಕರಿಗಿತ್ತು.

ಚಿತ್ರದಲ್ಲಿ ಶೀರ್ಷಿಕೆ ಗೀತೆ ಬಿಟ್ಟರೆ ಬೇರೆ ಹಾಡಿಲ್ಲ. ಪೂರ್ಣಚಂದ್ರ ತೇಜಸ್ವಿ ಅವರ ಹಿನ್ನೆಲೆ ಸಂಗೀತ ಆಪ್ತವಾಗಿದೆ. ಆ್ಯಕ್ಷನ್ ದೃಶ್ಯಗಳ ಸಂಯೋಜನೆ ಹೊಸತೆನಿಸುವಂತಿದೆ.

ವಿನಾಯಕ ಕೆ.ಎಸ್

ಪದಬಂಧ 5789


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶ್ವಾಸ ಇರುವವರೆಗೆ ಉಳಿದ ನಂಬಿಕೆ (3)
3.ತಿರುಳು ಅಥವಾ ಸತ್ವ (3)
6.ಅಧಿಕಾರ ನಡೆಸುವಿಕೆ (3)
7.ತೇರಿನ ಚಕ್ರ (3)
8.ಗುಡಿಸಲು ಇಲ್ಲಿದೆ (3)
9.ಇದು ಮಣ್ಣಿಗೆ ಸಂಬಂಧಿಸಿದ್ದು (3)
10.ಗಂಡಸು ಸೊನ್ನೆ ತೆಗೆದರೆ ಕಾಠಿಣ್ಯ (3)
12.ಸಂಗತಿ ಹೇಳಿದ ಜೊತೆಗಾತಿ (3)
16.ಸುರನ ಬಳಿಯಿರುವ ರಾಕ್ಷಸ (3)
17.ಹುದುಗಿಟ್ಟ ಧನ (3)
18.ಬರದಲ್ಲಿ ಅನಾಗರೀಕ (3)
19.ವಂಚನೆಯ ಮಾತು (3)
20.ಏಳು ದಿನಗಳ ಕಾಲ ನಡೆಯುವ ಒಂದು ಉತ್ಸವ (3)

ಮೇಲಿಂದ ಕೆಳಕ್ಕೆ

1.ಜಗತ್ತೇ ತನ್ನ ಸಂಸಾರವೆಂದು ಭಾವಿಸುವ ವ್ಯಕ್ತಿ (5)
2.ಕೊನೆಗೆ ಬೆಲೆಯಿಟ್ಟು ನೀಡಿದ ಸಲಿಗೆ (3)
3.ಕಟ್ಟಡ ಕಟ್ಟಲು ಬಳಸುವ ಏಣಿಯಂಥ ಸಾಧನ (3)
4.ರಕ್ಷಣೆ ಬಯಸಿ ಬಂದವನು (4)
5.ಪದಾರ್ಥಗಳನ್ನು ಮಾರುವ ಸ್ಥಳ (3)
9.ತೇರ್ಗಡೆಯನ್ನು ಹೀಗೆ ಹೇಳಿ (2)
10.ಗರತಿಯಲ್ಲಿರುವ ಅವಸ್ಥೆ (2)
11.ಯುದ್ಧದ ಕೇಸರಿಯಿದು (5)
13.ಗಾಳಿಯಲ್ಲಿ ಹಾರಿಸುವ ಆಟದ ಪಟ (4)
14.ನಿಯಮಿತವಾಗಿ ಕಾಣಿಸುವ ಹೆಂಗಸು (3)
15.ಮೂಗಿನಿಂದ ಸುರಿಯುವ ಶ್ಲೇಷ್ಮ (3)
16.ಅರಸುತ್ತಿರುವಾಗ ಕಾಣಿಸಿದ ರಾಜ (3)



5788ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶಾಕಾಹಾರ 2.ಪಾರುಪತ್ಯ
4.ಮಾನವೀಯ 6.ಸಂಪದ
8.ಕಸ 10.ನಿಗಮ
11.ರಲು 13.ಆಲೋಲ
14.ಸುಧಾರಕ 6.ಮಕಮಲ್ಲು
17.ಶಿರಸ್ತ್ರಾಣ

ಮೇಲಿಂದ ಕೆಳಕ್ಕೆ:
1.ಶಾಖಮಾಪಕ 2.ಪಾದ್ರಿ
3.ಪರೋಪಕಾರ 5.ಯವನಿಕೆ
7.ವಿಮರ್ಶಿಸು
9.ಸಮಾಲೋಚಕ
12.ಉಪಕರಣ 15.ಜೊಲ್ಲು

ಸುಡೊಕು 6174

1		3	5		6		4	
				4				
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6173 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಆಗಸ್ಟ್ 31, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣತ್ರಯೋದಶಿ ಗಂ. 27-41 ನಕ್ಷತ್ರ: ಪುಷ್ಯ ಗಂ. 19-40 ಯೋಗ: ವರಿಯಾನ್ ಗಂ. 17-38 ಕರಣ: ಗರ ಗಂ. 15-00, ಸಿಂಹ ಮಾಸದ 15 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 1.

ರಾಹುಕಾಲ: ಬೆಳಿಗ್ಗೆ 09-00 – 10-30

ಸೂರ್ಯೋದಯ: 06-23 **ಸೂರ್ಯಾಸ್ತ:** 06-39

ಮುಸ್ಲಿಂ ದಿನಾಂಕ: 26 ಸಫರ್

ಅದೃಷ್ಟ ಸಂಖ್ಯೆ: 12, 6

ಮೇಷ: ನಿರುದ್ಯೋಗಿಗಳು ಸಾಧಾರಣವಾದ ಉದ್ಯೋಗ ದೊರಕಿದರೂ ಯಾವುದೇ ಕಾರಣಕ್ಕೂ ತಿರಸ್ಕರಿಸಬೇಡಿ. ಸ್ವಂತ ಉದ್ಯೋಗದಲ್ಲಿ ಅಭಿವೃದ್ಧಿ ಹೊಂದುವಿರಿ. ಯೋಗಾಭ್ಯಾಸ ಮನೋಲ್ಲಾಸವನ್ನು ಹೆಚ್ಚಿಸುತ್ತದೆ.

ವೃಷಭ: ಕೃತಕ ಅಂಗಾಂಗಗಳ ಅಳವಡಿಕೆ ಮಾಡಿಸಿಕೊಂಡವರು ಆರೋಗ್ಯದಲ್ಲಿ ಉಂಟಾಗುವ ಯಾವುದೇ ಬದಲಾವಣೆಗಳನ್ನು ಸಸಾರ ಮಾಡದಿರಿ. ನೀವು ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ.

ಮಿಥುನ: ಸೇತುವೆ ನಿರ್ಮಾಣಕ್ಕೆ ಗುತ್ತಿಗೆ ಸಿಗಬಹುದು ಅಥವಾ ಕಾರ್ಮಿಕರಾಗುವ ಅವಕಾಶ ಸಿಗಬಹುದು. ನಿಮ್ಮ ಕೆಲಸಗಳ ಬಗ್ಗೆ ಅವಲೋಕನ ಮಾಡುವಂತಹ ಪದ್ಧತಿಯನ್ನು ರೂಢಿಸಿಕೊಳ್ಳಿರಿ. ಅತಿಥಿ ಸತ್ಕಾರ ಮಾಡುವಿರಿ.

ಕರ್ಕಾಟಕ: ನೀವು ಅಂತರ್ಮುಖಿಯಾಗಿದ್ದರೂ ಅತಿಥಿಗಳನ್ನು ಶಿಷ್ಟಾಚಾರಕ್ಕಾಗಿ ಸತ್ಕರಿಸಲೇಬೇಕಾಗುತ್ತದೆ. ವ್ಯವಸಾಯಗಾರರಿಗೆ ಹೆಚ್ಚಿನ ಬೆಳೆ ಕೈ ಸೇರುವ ನಿರೀಕ್ಷೆ ಇರುವುದು. ಮುಂದಿನ ಹಾದಿ ಏನೆಂಬುದು ಈ ದಿನ ಸ್ಪಷ್ಟವಾಗಿರಲಿ.

ಸಿಂಹ: ನಂಬಿ ಕೆಟ್ಟವರಿಲ್ಲ ಎಂಬ ಮಾತು ನಿಮ್ಮ ಪಾಲಿಗೆ ಅಕ್ಷರಶಃ ಸತ್ಯವಾಗುವಂತಹ ಘಟನಾವಳಿಗಳು ನಡೆಯುತ್ತವೆ. ಪರಿಸ್ಥಿತಿಯನ್ನು ಜಾಣತನದಿಂದ ಉಪಯೋಗಿಸಿಕೊಂಡಲ್ಲಿ, ಜೀವನದಲ್ಲಿ ಸ್ಥಿರತೆಯು ಪ್ರಾಪ್ತಿಯಾಗುವುದು.

ಕನ್ಯಾ: ಪಾರಂಪರಿಕ ಔಷಧಗಳ ಕಲೆಯನ್ನು ಕಲಿಯುವ ಸದವಕಾಶಗಳು ಸಿಗಬಹುದು. ವ್ಯವಹಾರದಲ್ಲಿ ಸಂಭವಿಸುವ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ಬರಲಿದೆ.

ತುಲಾ: ಮನೆಗೆ ವಿಶೇಷ ಕಾರಣದಿಂದಾಗಿ ಬರುತ್ತಿರುವ ಮಗಳಿಗೆ ಪ್ರಿಯವಾಗುವ ಖಾದ್ಯಗಳನ್ನು ತಯಾರು ಮಾಡುವಿರಿ. ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಿಂತಾನೆ ಬಗೆಹರಿದು ಮನಸ್ಸು ನಿರಾಳವಾಗಲಿದೆ.

ವೃಶ್ಚಿಕ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರ ಸಲಹೆ ಸರಿಯಾಗಿರುತ್ತದೆ. ಅವಿವಾಹಿತರಿಗೆ ಕುಟುಂಬದವರು ನೋಡುವ ಸಂಬಂಧಗಳು ಸರಿ ಹೋಗದಿರಬಹುದು.

ಧನು: ಉದ್ಯೋಗದಲ್ಲಿನ ಸಮಸ್ಯೆಯಿಂದಾಗಿ ಬದಲಾವಣೆಯ ಮನಸ್ಸು ಬರಲಿದೆ. ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ದಿನಗಳು ನೆಮ್ಮದಿದಾಯಕವಾಗಿ ಇರುವುದು.

ಮಕರ: ಅನಿರೀಕ್ಷಿತವಾಗಿ ಹಾಗೂ ಅನಿವಾರ್ಯವಾಗಿ ಸಂಘ-ಸಂಸ್ಥೆಗಳಲ್ಲಿ ಅಧಿಕಾರ ವಹಿಸಿಕೊಳ್ಳಬೇಕಾಗಬಹುದು. ಕಾರ್ಯರಂಗದಲ್ಲಿ ಅಪವಾದದ ಭೀತಿ ಕಳವಳ ಮೂಡಿಸಲಿದೆ. ವಿದೇಶ ಪ್ರವಾಸದ ಯೋಗವಿದೆ.

ಕುಂಭ: ಆರೋಗ್ಯದಲ್ಲಿ ವಾಯು ಸಂಬಂಧವಾಗಿ ತೊಂದರೆಗಳು ಕಾಣಿಸಿಕೊಳ್ಳಬಹುದು. ಗುತ್ತಿಗೆದಾರರಿಗೆ ಬಿಡುವಿಲ್ಲದಂತಾದೀತು. ವಿವಾಹ ಸಂಬಂಧದ ಮಾತುಕತೆಗಳು ಫಲಕಾರಿಯಾಗುವುದು.

ಮೀನ: ವೈಯಕ್ತಿಕ ಕಾರ್ಯಗಳನ್ನು ಸಾಧಿಸಿಕೊಳ್ಳುವ ಸಲುವಾಗಿ ವಾಮಮಾರ್ಗವನ್ನು ಹಿಡಿಯುವುದು ಸರಿಯಲ್ಲ. ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ, ಜೀವನೋಲ್ಲಾಸ ಹೆಚ್ಚಾಗಲಿದೆ.

ಪ್ರತಿಷ್ಠಿತ ಬಡಾವಣೆಯಲ್ಲಿ ಸುಮಾರು ₹6 ಕೋಟಿ ಮೌಲ್ಯದ ಮನೆ ಖರೀದಿಸಿದ ನಿವೃತ್ತ ಶಿಕ್ಷಕಿ

ಮರೀಗೌಡ ಪತ್ನಿಯಿಂದ ಬಂಗಲೆ ಖರೀದಿ

● ಆರ್. ಜಿತೇಂದ್ರ

ಮುಖ್ಯಾಂಶಗಳು
- ಮುಡಾ ಪ್ರಕರಣದ ಹೊತ್ತಲ್ಲೇ ಮನೆ ಖರೀದಿ
- ಮೂರೂ ಪಕ್ಷಗಳಲ್ಲಿ ಚರ್ಚೆಗೆ ಗ್ರಾಸ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಕೆ. ಮರೀಗೌಡರ ಪತ್ನಿ ಜಯಶ್ರೀ ಅವರು, ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ದಟ್ಟಗಳ್ಳಿಯಲ್ಲಿ ಸುಮಾರು ₹6 ಕೋಟಿ ಮೌಲ್ಯದ ಬಂಗಲೆ ಖರೀದಿಸಿದ್ದಾರೆ. ಮುಡಾ ನಿವೇಶನ ಹಂಚಿಕೆ ಪ್ರಕರಣ ಸದ್ದು ಮಾಡುತ್ತಿರುವ ಹೊತ್ತಿನಲ್ಲೇ ಈ ಖರೀದಿ ನಡೆದಿರುವುದು ಚರ್ಚೆಗೆ ಗ್ರಾಸವಾಗಿದೆ.

2024ರ ಜೂನ್ 8ರಂದು ಈ ಖರೀದಿ ನಡೆದಿದ್ದು, 'ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ನಿವೃತ್ತಿಯಾಗಿರುವ ಅವರು ಇಷ್ಟೊಂದು ದೊಡ್ಡ ಮೌಲ್ಯದ ಆಸ್ತಿಯನ್ನು ಖರೀದಿಸಲು ಹೇಗೆ ಸಾಧ್ಯ' ಎಂಬ ಚರ್ಚೆ ಬಿಜೆಪಿ–ಕಾಂಗ್ರೆಸ್ ವಲಯದಲ್ಲಿ ನಡೆದಿದೆ.


ಮರುವಿನ್ಯಾಸ ಕಾರ್ಯ ಚುರುಕು: ದಟ್ಟಗಳ್ಳಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೌಕರರ/ ಅಧಿಕಾರಿಗಳ ಸಾಂಸ್ಕೃತಿಕ ಹಾಗೂ ಕ್ಷೇಮಾಭಿವೃದ್ಧಿ ಸಂಘವು ನಿರ್ಮಿಸಿರುವ ಬಡಾವಣೆಯ ನಿವೇಶನ ಸಂಖ್ಯೆ 149ರಲ್ಲಿ ಈ ಮನೆ ಇದೆ. ಸದ್ಯ ಬಂಗಲೆಯ ಮರುವಿನ್ಯಾಸದ ಕೆಲಸ ಭರದಿಂದ ಸಾಗಿದೆ.

ಜಯಶ್ರೀ ಅವರು ₹2 ಕೋಟಿ ಮೌಲ್ಯಕ್ಕೆ ಬಂಗಲೆಯನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಕೊಂಡಿದ್ದು, ₹16 ಲಕ್ಷದಷ್ಟು ಶುಲ್ಕವನ್ನೂ ಸರ್ಕಾರಕ್ಕೆ ಪಾವತಿಸಿದ್ದಾರೆ.

3,900 ಚದರ ಅಡಿ ವಿಸ್ತೀರ್ಣದ ಪೂರ್ವ ದಿಕ್ಕಿನ ನಿವೇಶನದಲ್ಲಿ, ನೆಲ ಮಹಡಿ ಹಾಗೂ ಎರಡು ಅಂತಸ್ತು ಸೇರಿಸಿ ಒಟ್ಟು 659 ಚದರ ಮೀಟರ್ ವಿಸ್ತೀರ್ಣದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ.

'ಸದ್ಯ ಅದರ ಮಾರುಕಟ್ಟೆ ಮೌಲ್ಯ ₹5.5 ಕೋಟಿಯಿಂದ ₹6 ಕೋಟಿಯಷ್ಟಿದೆ. ನವೀಕರಣ ವೆಚ್ಚವನ್ನೂ ಸೇರಿಸಿದರೆ ಒಟ್ಟಾರೆ ಮೌಲ್ಯ ಇನ್ನೂ ಹೆಚ್ಚಾಗಬಹುದು' ಎಂದು ರಿಯಲ್ ಎಸ್ಟೇಟ್ ಉದ್ಯಮಿಗಳು ಅಂದಾಜಿಸುತ್ತಾರೆ.

ಮರೀಗೌಡರ ಹತ್ತಿರದ ಸಂಬಂಧಿ ಎಸ್. ಶಿವಣ್ಣ ಅವರಿಗೆ ರಿಯಲ್ ಎಸ್ಟೇಟ್ ಉದ್ಯಮಿ ಎನ್. ಮಂಜುನಾಥ್ ಅವರು ಇದೇ ವರ್ಷ ಮೇ ತಿಂಗಳಲ್ಲಿ, ವಿಜಯನಗರ 4ನೇ ಹಂತದಲ್ಲಿ ಸೆಟ್ಲ್‌ಮೆಂಟ್ ಡೀಡ್ ಅಡಿ 40X60 ಚ.ಅಡಿ ವಿಸ್ತೀರ್ಣದ ನಿವೇಶನ ನೋಂದಣಿ ಮಾಡಿಕೊಟ್ಟಿದ್ದು ದೊಡ್ಡ ಸುದ್ದಿಯಾಗಿತ್ತು. ಅದರ ಬೆನ್ನಲ್ಲೇ ಈ ಆಸ್ತಿ ನೋಂದಣಿ ವಿವರವೂ ಹೊರಬಿದ್ದಿದೆ.


ಮೈಸೂರಿನ ದಟ್ಟಗಳ್ಳಿಯಲ್ಲಿ ಜಯಶ್ರೀ ಅವರು ಖರೀದಿಸಿರುವ ಬಂಗಲೆ

'ಉಳಿಕೆ ಹಣ, ಕೃಷಿ ಆದಾಯದಿಂದ ಖರೀದಿ'

'ಪತ್ನಿ ಜಯಶ್ರೀ ಅವರು 38 ವರ್ಷಗಳ ಕೆಲಸದ ಅವಧಿಯಲ್ಲಿ ಉಳಿಸಿದ ಹಣ, ₹55 ಲಕ್ಷ ಗೃಹ ಸಾಲ ಹಾಗೂ ಕೃಷಿಯಿಂದ ಬಂದ ಆದಾಯದಿಂದಲೇ ಬಂಗಲೆ ಖರೀದಿಸಿದ್ದೇವೆ. ಇದಕ್ಕೂ ಮುಡಾಕ್ಕೂ ಸಂಬಂಧ ಇಲ್ಲ' ಎಂದು ಕೆ. ಮರೀಗೌಡ ಸ್ಪಷ್ಟನೆ ನೀಡಿದರು.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು 'ನಾನು ಹಾಗೂ ನನ್ನ ಮಡದಿ ನಿರಂತರವಾಗಿ ಆದಾಯ ತೆರಿಗೆ ಪಾವತಿಸುತ್ತಿದ್ದೇವೆ. ನನ್ನ ಬಳಿ 10-15 ಎಕರೆ ಹಾಗೂ ಪತ್ನಿ ಬಳಿ 20-25 ಎಕರೆಯಷ್ಟು ಕೃಷಿ ಜಮೀನಿದೆ. ಇಬ್ಬರೂ ಪ್ರಗತಿಪರ ಕೃಷಿಕರಾಗಿದ್ದೇವೆ. ಅದರಿಂದ ಬಂದ ಆದಾಯದಿಂದ ಖರೀದಿಸಿದ್ದೇವೆ' ಎಂದು ಹೇಳಿದರು.

'ಮುಡಾದಲ್ಲಿ ಯಾವುದೇ ಅಕ್ರಮ ಆಗಿದ್ದರೆ ತನಿಖೆಗೆ ಸಿದ್ಧನಿದ್ದೇನೆ. ಆದರೆ, ಅದನ್ನೇ ಮುಂದಿಟ್ಟುಕೊಂಡು ಕೆಲವರು ವೈಯಕ್ತಿಕವಾಗಿ ನನ್ನ ತೇಜೋವಧೆಗೆ ಮುಂದಾಗಿದ್ದು, ಅಂತಹವರ ವಿರುದ್ಧ ಕಾನೂನು ಕ್ರಮವನ್ನೂ ಕೈಗೊಳ್ಳುತ್ತೇನೆ' ಎಂದರು.

ದಿನೇಶ್‌ಕುಮಾರ್‌ಗೆ ಕುಲಸಚಿವ ಹುದ್ದೆ: ಬಿಜೆಪಿ ಆಕ್ಷೇಪ

ಮೈಸೂರು: ಮುಡಾ ಆಯುಕ್ತರಾಗಿದ್ದ ಜಿ.ಟಿ. ದಿನೇಶ್ ಕುಮಾರ್ ಅವರನ್ನು ಹಾವೇರಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿದ್ದು, ಅದಕ್ಕೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ. ಅಧಿಕಾರಿಗಳ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲು ಮುಂದಾಗಿದೆ.

ಮತ್ತೊಂದೆಡೆ, ಮುಡಾದ ಹಿಂದಿನ ಆಯುಕ್ತರಾದ ಡಿ.ಬಿ.ನಟೇಶ್ ಹಾಗೂ ದಿನೇಶ್ ಕುಮಾರ್ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ವಕೀಲ ಅರುಣ್‌ಕುಮಾರ್ ಎಂಬುವರು ಇಲ್ಲಿನ ಲಕ್ಷ್ಮಿಪುರಂ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಿಸಿದ್ದಾರೆ.

'ಇಬ್ಬರೂ ಆಯುಕ್ತರು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987, ಭ್ರಷ್ಟಾಚಾರ ತಡೆ ಕಾಯ್ದೆ– 1988 ನಿಬಂಧನೆಗಳಿಗೆ ವಿರುದ್ಧವಾಗಿ ಕೆಲಸ ಮಾಡಿ ಸರ್ಕಾರಕ್ಕೆ ₹5 ಸಾವಿರ ಕೋಟಿ ನಷ್ಟ ಉಂಟು ಮಾಡಿದ್ದು, ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬಳಿಕ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರನ್ನು ಭೇಟಿ ಮಾಡಿ, 'ಪೊಲೀಸರು ಎಫ್‌ಐಆರ್ ದಾಖಲಿಸದೇ ಬೆಂಗಳೂರಿಗೆ ದೂರಿನ ಪ್ರತಿಯನ್ನು ಕಳುಹಿಸುವುದಾಗಿ ತಿಳಿಸಿದ್ದಾರೆ. ಇಲ್ಲಿಯೇ ಎಫ್‌ಐಆರ್ ದಾಖಲಿಸಬೇಕು' ಎಂದು ಮನವಿ ಮಾಡಿದರು.

ದಿನೇಶ್‌ಕುಮಾರ್ ವರ್ಗಾವಣೆ ಸಂಬಂಧ ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಶಾಸಕ ಟಿ.ಎಸ್. ಶ್ರೀವತ್ಸ, 'ಭ್ರಷ್ಟ ಅಧಿಕಾರಿಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಧೃತರಾಷ್ಟ್ರ ಪ್ರೇಮ ಏಕೆ? ಭ್ರಷ್ಟಾಚಾರ ಮಾಡಿದ್ದ ಅಧಿಕಾರಿಗೆ ಪ್ರಮೋಷನ್ ಕೊಟ್ಟು ವರ್ಗಾಯಿಸಲಾಗಿದೆ. ತಮಗೆ ಕಮಿಷನ್ ಬಂದರೆ ಸಾಕು ಎಂಬ ಮನಸ್ಥಿತಿ ಅವರದ್ದು. ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಹಿಂದಿನ ಇಬ್ಬರೂ ಆಯುಕ್ತರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಲೋಕಾಯುಕ್ತ ಅಧಿಕಾರಿಗಳಿಗೆ ಸದ್ಯದಲ್ಲೇ ದೂರು ಸಲ್ಲಿಸುವೆ' ಎಂದರು.

ಸ್ನೇಹಮಯಿ ಕೃಷ್ಣ ವಿರುದ್ಧ ಲಕ್ಷ್ಮಣ್ ದೂರು

ಮೈಸೂರು: 'ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ಗಡಿಪಾರು ಮಾಡಿ ಗೂಂಡಾ ಕಾಯ್ದೆ ಅಡಿ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಅವರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಗೆ ಶುಕ್ರವಾರ ದೂರು ಸಲ್ಲಿಸಿದರು.

'ರೌಡಿಗಳ ಪಟ್ಟಿಯಲ್ಲಿ ಕೃಷ್ಣ ಹೆಸರಿದ್ದು, ಅವರ ವಿರುದ್ಧ ನಗರ ವ್ಯಾಪ್ತಿಯಲ್ಲಿ 17 ಪ್ರಕರಣಗಳಿವೆ. ಭೂವಿವಾದಗಳ ಸೃಷ್ಟಿ, ಆಸ್ತಿದಾರರಿಗೆ ಬೆದರಿಕೆ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆರ್‌ಟಿಐ ಅಡಿ ದಾಖಲೆಗಳನ್ನು ಪಡೆದು, ನಕಲಿ ಸೀಲ್ ಮೂಲಕ ದಾಖಲೆಗಳನ್ನು ತಿರುಚಿ ದುರುಪಯೋಗಪಡಿಸಿಕೊಂಡಿದ್ದಾರೆ. ಆತನ ಸಹಚರರು ನಮ್ಮ ವಿರುದ್ಧವೇ ಸುಳ್ಳು ದೂರು ದಾಖಲಿಸುತ್ತಿದ್ದಾರೆ. ಅಂಥಹವರಿಂದ ಜೀವ ಬೆದರಿಕೆ ಇದೆ' ಎಂದರು.

ವಿಜಯೇಂದ್ರ ಗಾಡಿ ಬಹಳ ದಿನ ಓಡದು: ಎಂ.ಬಿ.ಪಾಟೀಲ

ಬೆಳಗಾವಿ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಗಾಡಿ ಬಹಳ ದಿನ ಓಡದು. ಯತ್ನಾಳ, ರಮೇಶ ಜಾರಕಿಹೊಳಿ, ಆರ್.ಅಶೋಕ, ಬೊಮ್ಮಾಯಿ ಸೇರಿ ಯಾರೂ ಅವರ ನಾಯಕತ್ವ ಒಪ್ಪಿಲ್ಲ. ತಮ್ಮ ಸ್ಥಾನವೇ ಅಲುಗಾಡುತ್ತಿರುವಾಗ ಸಿದ್ದರಾಮಯ್ಯ ವಿರುದ್ಧ ಆರೋಪಿಸುತ್ತಾರೆ' ಎಂದು ಸಚಿವ ಎಂ.ಬಿ.ಪಾಟೀಲ ವ್ಯಂಗ್ಯವಾಡಿದರು.

'ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ತಪ್ಪು ಏನೂ ಇಲ್ಲ ಎಂಬುದು ನಮಗೆ ಖಾತ್ರಿಯಾಗಿದೆ. ಆಗ ಬಿಜೆಪಿಯರು ಪೇಚಾಟಕ್ಕೆ ಸಿಲುಕುತ್ತಾರೆ. ಸಿದ್ದರಾಮಯ್ಯ ಮತ್ತಷ್ಟು ಪ್ರಬಲ ನಾಯಕರಾಗಿ ಹೊರಹೊಮ್ಮುತ್ತಾರೆ' ಎಂದು ಅವರು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ದಲಿತ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಇನ್ನೊಬ್ಬ ದಲಿತ ನಾಯಕನ್ನೇ ಎತ್ತಿ ಕಟ್ಟಲಾಗಿದೆ. ಹೀಗೆ ಒಂದು ಸಮಾಜವನ್ನು ತುಳಿಯಲು ಅದೇ ಸಮಾಜದ ನಾಯಕರನ್ನು ಎತ್ತಿಕಟ್ಟುವುದು ಬಿಜೆಪಿ, ಆರ್‌ಎಸ್‌ಎಸ್ ಉದ್ದೇಶ. ಲಿಂಗಾಯತ ನಾಯಕರನ್ನೇ ಎತ್ತಿಕಟ್ಟಿ ಯಡಿಯೂರಪ್ಪ ಅವರನ್ನು ಬಲಿ ಕೊಟ್ಟಿದ್ದು ಇದೇ ತಂತ್ರದಿಂದ' ಎಂದರು.



ಅವಮಾನಿಸಿಲ್ಲ: 'ಛಲವಾದಿ ನಾರಾಯಣಸ್ವಾಮಿ ಅವರಿಗೆ ನಾನು ಅವಮಾನ ಮಾಡಿಲ್ಲ. ಅವರು ಮೈಸೂರು ಬಳಿ ಸಾಫ್ಟ್‌ವೇರ್ ತಂತ್ರಜ್ಞಾನ ಅಭಿವೃದ್ಧಿಪಡಿಸಲು 8,029 ಚದರ್ ಮೀಟರ್ ಭೂಮಿ ಪಡೆದಿದ್ದಾರೆ. ಅಲ್ಲಿ ಶೆಡ್ ಮಾತ್ರ ಕಟ್ಟಿದ್ದಾರೆ. ಆ ದೃಷ್ಟಿಯಲ್ಲಿ ಅವರನ್ನು 'ಶೆಡ್ ಗಿರಾಕಿ' ಎಂದು ಕರೆದಿದ್ದೇನೆ ಅಷ್ಟೇ' ಎಂದು ಸ್ಪಷ್ಟಪಡಿಸಿದರು.

'ಶಾಮನೂರು ಶಿವಶಂಕರಪ್ಪ ಅವರ ಜೊತೆಗೆ ಸಂಬಂಧ ಬೆಳೆಸಿದ ಬಳಿಕ ಲಿಂಗಾಯತ ಧರ್ಮದ ಹೋರಾಟದಿಂದ ಹಿಂದೆ ಸರಿದಿದ್ದೇನೆ ಎಂಬುದು ಸುಳ್ಳು. ಅವರ ತತ್ವ ಅವರಿಗೆ, ನಮ್ಮ ತತ್ವ ನಮಗೆ. ಮುಂದೊಂದು ದಿನ ವೀರಶೈವ ಮಹಾಸಭೆಯವರೇ ಲಿಂಗಾಯತ ಧರ್ಮಕ್ಕೆ ಮುದ್ರೆ ಒತ್ತುವರು' ಎಂದೂ ಅವರು ಹೇಳಿದರು.

ಸುದ್ದಿ 2 ನಿಮಿಷ

'ನುಡಿದಂತೆ ನಡೆದ ಸರ್ಕಾರ; ಬಿಜೆಪಿಯವರಿಗೆ ಹೊಟ್ಟೆಕಿಚ್ಚು'

ಮಂಡ್ಯ: 'ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೊಟ್ಟ ಮಾತಿನಂತೆ ನಡೆಯುತ್ತಿರುವುದರಿಂದ ಬಿಜೆಪಿಯವರಿಗೆ ಹೊಟ್ಟೆಕಿಚ್ಚು. ಬಿಜೆಪಿ ಅಧಿಕಾರಕ್ಕೆ ಬಂದರೆ ಗ್ಯಾರಂಟಿ ಯೋಜನೆ ನಿಲ್ಲಿಸುತ್ತಾರೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪ್ರತಿಪಾದಿಸಿದರು.

ನಗರದಲ್ಲಿ ಶುಕ್ರವಾರ 'ಜಿಲ್ಲಾ ಮಟ್ಟದ ವಿಜ್ಞಾನ ತರಂಗ ಸ್ಪರ್ಧೆ' ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ' ಎಂದರು.

'ಮುಡಾ ನಿವೇಶನ ಪ್ರಕರಣದಲ್ಲಿ ರಾಜ್ಯಪಾಲರನ್ನು ಬಿಜೆಪಿ ದುರುಪಯೋಗಪಡಿಸಿಕೊಂಡಿದೆ. 12 ವರ್ಷಗಳ ಹಿಂದಿನ, ತುಕ್ಕು ಹಿಡಿದ ಪ್ರಕರಣಕ್ಕೆ ಜೀವ ಕೊಡುವುದರಲ್ಲಿ ಅರ್ಥವಿಲ್ಲ. ಸಿದ್ದರಾಮಯ್ಯ ಜೊತೆ ಶಾಸಕರು ಮತ್ತು ರಾಜ್ಯದ ಜನತೆ ಇದ್ದಾರೆ' ಎಂದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕುರಿತ ಪ್ರಶ್ನೆಗೆ, 'ಕುಮಾರಸ್ವಾಮಿ ಉತ್ತರ ಕೊಡೋಕೆ ನಾನು ಇಲ್ಲಿಗೆ ಬಂದಿಲ್ಲ' ಎಂದು ಗರಂ ಆದರು.

ವಾರಕ್ಕೆ 6 ಮೊಟ್ಟೆ: 'ಹಿಂದಿನ ಸರ್ಕಾರ ಶಾಲಾ ಕೊಠಡಿಗಳ ದುರಸ್ತಿಗೆ ನಿರ್ಲಕ್ಷ್ಯ ತೋರಿತ್ತು. ನಮ್ಮ ಸರ್ಕಾರ ಕಾಳಜಿ ವಹಿಸಿದೆ. 12 ಸಾವಿರ ಶಿಕ್ಷಕರನ್ನೂ ನೇಮಿಸಿದೆ. ಮುಂದಿನ ತಿಂಗಳಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ವಾರಕ್ಕೆ ತಲಾ 6 ಮೊಟ್ಟೆ ನೀಡಲಾಗುವುದು' ಎಂದರು.



ನಕಲಿ ನಿರ್ಣಯದ ಆಧಾರದಲ್ಲಿ ನಿವೇಶನ ಹಂಚಿಕೆ: ರವಿಕುಮಾರ್

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ 50:50 ಅನುಪಾತದಲ್ಲಿ ಬದಲಿ ನಿವೇಶನಗಳನ್ನು ನೀಡುವ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಡಳಿತ ಮಂಡಳಿ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ' ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಆರೋಪಿಸಿದರು.

'ಮುಡಾ 2020 ನವೆಂಬರ್ 20ರಂದು ನಡೆಸಿದ ಸಭೆಯಲ್ಲಿ 14 ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ನಿರ್ಣಯ ಅಂಗೀಕರಿಸಲಾಗಿದೆ ಎಂದು ಮುಖ್ಯಮಂತ್ರಿ ಮತ್ತು ಇತರ ಸಚಿವರು ಹೇಳುತ್ತಲೇ ಬಂದಿದ್ದಾರೆ. ನಮಗೆ ಸಿಕ್ಕಿರುವ ದಾಖಲೆಗಳ ಪ್ರಕಾರ ಸಭೆಯ ನಡಾವಳಿಯಲ್ಲಿ ಆ ವಿಷಯವೇ ಪ್ರಸ್ತಾಪ ಆಗಿರಲಿಲ್ಲ ಮತ್ತು ನಿರ್ಣಯವನ್ನೂ ತೆಗೆದುಕೊಂಡಿರಲಿಲ್ಲ ಎಂದು ಆರೋಪಿಸಿದ ಅವರು, ಆಡಳಿತ ಮಂಡಳಿ ಸಭೆಯ ನಡಾವಳಿಯ ಆಡಿಯೊ, ಆರ್‌ಟಿಐ ಮೂಲಕ ಪಡೆದ ದಾಖಲೆಗಳನ್ನು ಬಿಡುಗಡೆ ಮಾಡಿದರು.

ಕಾಂಗ್ರೆಸ್ ಕಿತ್ತಾಟ; ಜೆಡಿಎಸ್‌ಗೆ ಅದೃಷ್ಟ

ಬಾಗಲಕೋಟೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮಾನಿಗಳ ಬಳಗ ಹಾಗೂ ಕಾಂಗ್ರೆಸ್ ಶಾಸಕ ಭೀಮಸೇನ ಚಿಮ್ಮನಕಟ್ಟಿ ನಡುವಿನ ಕಿತ್ತಾಟದ ಪರಿಣಾಮ ಜೆಡಿಎಸ್ ಸದಸ್ಯರೊಬ್ಬರು ಶುಕ್ರವಾರ ಪುರಸಭೆ ಅಧ್ಯಕ್ಷೆಯಾಗಿ ಆಯ್ಕೆಯಾದರು.

ಪುರಸಭೆಯಲ್ಲಿ 23 ಸದಸ್ಯರಿದ್ದಾರೆ. 15 ಮಂದಿ ಕಾಂಗ್ರೆಸ್, ಕಾಂಗ್ರೆಸ್ ಬೆಂಬಲಿತ ಸದಸ್ಯರು ಒಬ್ಬರು, ಐವರು ಜೆಡಿಎಸ್, ಇಬ್ಬರು ಬಿಜೆಪಿ ಸದಸ್ಯರಿದ್ದಾರೆ. ಕಾಂಗ್ರೆಸ್ ಭರ್ಜರಿ ಬಹುಮತ ಹೊಂದಿದ್ದರೂ, ಕಿತ್ತಾಟದಿಂದ ಅಧಿಕಾರದಿಂದ ವಂಚಿತವಾಗಿದೆ. ಈ ಹಿಂದೆ ಬಾದಾಮಿ ಶಾಸಕರೂ ಆಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮಾನ ಬಳಗದ 10 ಮಂದಿ ಪರವಾಗಿ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಜ್ಯೋತಿ ಆಲೂರ, ಶಾಸಕ ಭೀಮಸೇನ ಚಿಮ್ಮನಕಟ್ಟಿ ಬಣದಲ್ಲಿ ಆರು ಮಂದಿ ಪರವಾಗಿ ವಂದನಾ ಭಟ್ಟಡ ನಾಮಪತ್ರ ಸಲ್ಲಿಸಿದ್ದರು. ಜೆಡಿಎಸ್‌ನಿಂದ ಜ್ಯೋತಿ ಗೋವಿನಕೊಪ್ಪ ನಾಮಪತ್ರ ಸಲ್ಲಿಸಿದ್ದರು.

ನಾಮಪತ್ರ ಪರಿಶೀಲಿಸಿದ ತಹಶೀಲ್ದಾರ್, ಜ್ಯೋತಿ ಆಲೂರ, ವಂದನಾ ಭಟ್ಟಡ ನಾಮಪತ್ರ ತಿರಸ್ಕರಿಸಿದ್ದರಿಂದ, ಜ್ಯೋತಿ ಗೋವಿನಕೊಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಸ್‌ಸಿಗೆ ಉಪಾಧ್ಯಕ್ಷ ಹುದ್ದೆ ಮೀಸಲಾಗಿದ್ದು, ಎಸ್‌ಸಿ ಕ್ಷೇತ್ರದಿಂದ ಗೆದ್ದಿದ್ದ ಇಬ್ಬರೂ ಕಾಂಗ್ರೆಸ್‌ನಲ್ಲಿದ್ದರು. ಅವರೂ ನಾಮಪತ್ರ ಸಲ್ಲಿಸಲಿಲ್ಲ.

'ರಾಜ್ಯದಲ್ಲಿ ಶೀಘ್ರ ಬಿಜೆಪಿ ಸರ್ಕಾರ'

ಹೊಸಕೋಟೆ: ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಕೆಲವೇ ದಿನಗಳಲ್ಲಿ ಪತನವಾಗಲಿದ್ದು, ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ವಿಧಾನ ಪರಿಷತ್ ಸದಸ್ಯ ಎಂ.ಟಿ.ಬಿ ನಾಗರಾಜ್ ಹೇಳಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ಬಿಜೆಪಿ ಸದಸ್ಯತ್ವ ಅಭಿಯಾನ ಕಾರ್ಯಾಗಾರದಲ್ಲಿ ಮಾತನಾಡಿದರು.

ಇಂಧನ ಸಚಿವರ ಸಭೆಯಲ್ಲೇ ಪದೇಪದೇ ಕಣ್ಣಾಮುಚ್ಚಾಲೆ ● ಸಚಿವರಿಗೆ ಕಿರಿಕಿರಿ, ಕಣ್ಣೀರಿಟ್ಟ ಅಧಿಕಾರಿ

ಕೈಕೊಟ್ಟ ವಿದ್ಯುತ್: ಜಾರ್ಜ್ ಗರಂ

ಪ್ರಜಾವಾಣಿ ವಾರ್ತೆ

ಕೋಲಾರ: ವಿದ್ಯುತ್ ಸಮಸ್ಯೆ ಕುರಿತು ಇಂಧನ ಸಚಿವ ಕೆ.ಜೆ.ಜಾರ್ಜ್ ಶುಕ್ರವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜೊತೆ ಸಭೆ ನಡೆಸುವಾಗಲೇ ಪದೇಪದೇ ವಿದ್ಯುತ್ ಕೈಕೊಟ್ಟಿತು.

ಪದೇಪದೇ ವಿದ್ಯುತ್ ಕೈಕೊಟ್ಟ ಕಾರಣ ಕಿರಿಕಿರಿ ಅನುಭವಿಸಿದ ಅವರು ಕೆಲ ನಿಮಿಷ ಕತ್ತಲಲ್ಲಿಯೇ ಕುಳಿತರು. ಇದರಿಂದ ಮುಜುಗರಕ್ಕೆ ಒಳಗಾದ ಅವರು, 'ಏಕೆ ಪವರ್ ಕಟ್ ಮಾಡುತ್ತೀರಿ' ಎಂದು ಸಿಬ್ಬಂದಿಯನ್ನು ಸಿಟ್ಟಿನಿಂದ ಪ್ರಶ್ನಿಸಿದರು.

ಬೆಂಗಳೂರಿಗೆ ತೆರಳುವ ಮುನ್ನ ಸಚಿವರು ವಿದ್ಯುತ್ ಅಡಚಣೆಗಾಗಿ ಬೆಸ್ಕಾಂ ಕಾರ್ಯಪಾಲಕ ಎಂಜಿನಿಯರ್ ಶುಭಾ ಅವರನ್ನು ತರಾಟೆ ತೆಗೆದುಕೊಂಡರು. ಮುಖ್ಯಮಂತ್ರಿ ಬಂದಾಗ ಈ ರೀತಿ ಆಗಬಾರದು ಎಂದು ಎಚ್ಚರಿಸಿದರು. ಆಗ ಅಧಿಕಾರಿ ಕಣ್ಣೀರಿಟ್ಟರು. ಸ್ಥಳದಲ್ಲಿ ಇದ್ದ ಇತರ ಅಧಿಕಾರಿಗಳು ಅವರನ್ನು ಸಮಾಧಾನಪಡಿಸಿದರು.



ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜೊತೆ ಕೋಲಾರದಲ್ಲಿ ಶುಕ್ರವಾರ ಸಭೆ ನಡೆಸುವಾಗ ವಿದ್ಯುತ್ ಕೈಕೊಟ್ಟಿತು

ಇನ್ನು ನಾಲ್ಕು ತಿಂಗಳಲ್ಲಿ ಕೇಂದ್ರ ಸರ್ಕಾರ ಪತನವಾಗಿ ಮೋದಿ ಅಧಿಕಾರ ಕಳೆದುಕೊಳ್ಳಲಿದ್ದಾರೆ. ಮುಂದಿನ 15 ವರ್ಷ ರಾಹುಲ್ ಗಾಂಧಿ ಅವರಿಗೆ ಒಳ್ಳೆಯ ಕಾಲ ಬರಲಿದೆ

ಕೆ.ಜೆ.ಜಾರ್ಜ್, ಇಂಧನ ಸಚಿವ

'ವಿದ್ಯುತ್ ಸಮಸ್ಯೆ ಕುರಿತು ಸಭೆ ನಡೆಸುತ್ತಿದ್ದಾಗಲೇ ವಿದ್ಯುತ್ ಅಡಚಣೆ ಎಂದು ನೀವು ವರದಿ ಮಾಡುತ್ತೀರಾ. ನಾವು ಅಡ್ಜಸ್ಟ್ ಮಾಡಿಕೊಳ್ಳುತ್ತೇವೆ. ನೀವೂ ಅಡ್ಜಸ್ಟ್ ಮಾಡಿಕೊಳ್ಳಿ' ಎಂದು ಸಭೆಯಲ್ಲಿದ್ದ ಮಾಧ್ಯಮದವರಿಗೆ ಹೇಳಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, 'ಇದು ಬ್ರೇಕ್‌ಡೌನ್ ಆಗಿರುವ ಸಮಸ್ಯೆ ಅಲ್ಲ. ಜಿಲ್ಲಾ ಪಂಚಾಯಿತಿಯಲ್ಲಿರುವ ಜನರೇಟರ್ ಕೈಕೊಟ್ಟದ್ದರಿಂದ ವಿದ್ಯುತ್ ಸ್ಥಗಿತಗೊಂಡಿದೆ' ಎಂದು ಸ್ಪಷ್ಟಪಡಿಸಿದರು.

'ಇಂಧನ ಸಚಿವರು ಬಂದಿದ್ದಾರೆಂದು ಮುನ್ನೆಚ್ಚರಿಕೆ ಕ್ರಮವಾಗಿ ಜನರೇಟರ್ ಮೂಲಕ ವಿದ್ಯುತ್ ಪೂರೈಕೆ ಮಾಡಿದ್ದಾರೆ. ಜನರೇಟರ್ ಮೇಲೆ ಒತ್ತಡ ಹೆಚ್ಚಾಗಿದ್ದರಿಂದ ಅದು ಟ್ರಿಪ್ ಆಗಿ ಪೂರೈಕೆ ಸ್ಥಗಿತಗೊಂಡಿದೆ. ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಲಭ್ಯವಿದ್ದು, ಪೂರೈಕೆಯಲ್ಲೂ ಯಾವುದೇ ಕೊರತೆ ಇಲ್ಲ' ಎಂದರು.

'ವಿದ್ಯುತ್ ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ರಾಜ್ಯದಲ್ಲಿ ಕುಸುಮ್ ಬಿ ಮತ್ತು ಕುಸುಮ್ ಸಿ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡಲಾಗುತ್ತಿದೆ' ಎಂದು ತಿಳಿಸಿದರು.

ಬಿಜೆಪಿಯವರು ಆರ್‌ಎಸ್‌ಎಸ್‌ಗೆ ಜಾಗ ಕೊಟ್ಟಿಲ್ಲವೇ: ಜಾರ್ಜ್ ಪ್ರಶ್ನೆ

ಕೋಲಾರ: 'ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಆರ್‌ಎಸ್‌ಎಸ್ ಹಾಗೂ ಇತರರಿಗೆ ಕೆಐಎಡಿಬಿಯಿಂದ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಯಾವ ದರದಲ್ಲಿ ಜಾಗ ಕೊಟ್ಟರು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಲ್ಲಿಕಾರ್ಜುನ ಖರ್ಗೆ ಉತ್ತಮ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಹೋಗಿ ಬುದ್ಧ ವಿಹಾರ ನೋಡಿಕೊಂಡು ಬನ್ನಿ. ಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪನೆಗಾಗಿ ಟ್ರಸ್ಟ್‌ಗೆ ಐದು ಎಕರೆ ಜಾಗ ನೀಡಲಾಗಿದೆ. ಧಾರ್ಮಿಕ ಕೇಂದ್ರದ ಟ್ರಸ್ಟ್‌ನಲ್ಲಿ ಕೌಶಲ ತರಬೇತಿ ನೀಡಬಾರದೇ? ನಿರುದ್ಯೋಗ ಸಮಸ್ಯೆ ನಿವಾರಣೆ ಸಮಸ್ಯೆಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಜಾಗ ಪಡೆದುಕೊಳ್ಳಲಾಗಿದೆ. ಅದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.

'ಪಿಎಸ್ಐ ಪರೀಕ್ಷೆ ಮುಂದೂಡಿಕೆ ಪರಿಶೀಲನೆ'

ಬೆಂಗಳೂರು: ಪಿಎಸ್ಐ ನೇಮಕಾತಿ ಪರೀಕ್ಷೆಯ ದಿನದಂದೇ (ಸೆ.22) ಯುಪಿಎಸ್‌ಸಿ ಪರೀಕ್ಷೆಯೂ ನಡೆಯುತ್ತಿದೆ. ಒಂದು ವೇಳೆ ಪರೀಕ್ಷೆ ಮುಂದೂಡಿಕೆಗೆ ಹೆಚ್ಚಿನ ಮನವಿಗಳು ಬಂದರೆ ಮುಂದೂಡುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಈ ಬಗ್ಗೆ ಅಧಿಕಾರಿಗಳ ಜತೆ ಚರ್ಚಿಸುವುದಾಗಿ ತಿಳಿಸಿದರು.

'ಈ ಹಿಂದೆ ಗೃಹ ಸಚಿವನಾಗಿದ್ದಾಗ ಯಾವುದೇ ಅಡೆತಡೆಗಳಿಲ್ಲದೇ ಸಾವಿರಾರು ಹುದ್ದೆಗಳ ನೇಮಕಾತಿ ಸುಲಭವಾಗಿ ನಡೆದಿತ್ತು. ಹಿಂದಿನ ಸರ್ಕಾರದ ಅವಧಿಯಲ್ಲಿ ಪಿಎಸ್ಐ ಪರೀಕ್ಷಾ ಹಗರಣ ನಡೆದ ಕಾರಣ ನೇಮಕಾತಿ ತಡವಾಗಿದೆ. ಆದಷ್ಟು ಬೇಗನೇ ಫಲಿತಾಂಶ ಪ್ರಕಟಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ಕಾಡಾನೆ ದಾಳಿ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಕೊಡಗು ಜಿಲ್ಲೆ): ಇಲ್ಲಿಗೆ ಸಮೀಪದ ಚೆನ್ನಯ್ಯನಕೋಟೆ ಗ್ರಾಮದಲ್ಲಿ ಶುಕ್ರವಾರ ಕಾಡಾನೆ ದಾಳಿಗೆ ಸಿಲುಕಿ ತೀವ್ರವಾಗಿ ಗಾಯಗೊಂಡ ಕಾತಾಯಿ (72) ಸ್ಥಳದಲ್ಲೇ ಮೃತಪಟ್ಟರು.

ಪುತ್ರ ಹಾಗೂ ಗ್ರಾಮ ಪಂಚಾಯಿತಿ ಸದಸ್ಯ ನಾಗರಾಜು ಅವರ ಮನೆಯಿಂದ ಮತ್ತೊಬ್ಬ ಪುತ್ರನ ಮನೆಗೆ ಬೆಳಿಗ್ಗೆ ತೆರಳುತ್ತಿದ್ದಾಗ ಆನೆ ದಾಳಿ ಮಾಡಿತ್ತು. ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಸ್ಥಳಕ್ಕೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

ರಾಜ್ಯೋತ್ಸವ ಪ್ರಶಸ್ತಿ: ನಾಮನಿರ್ದೇಶನಕ್ಕೆ ಅವಕಾಶ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2024ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಸಾಧಕರನ್ನು ನಾಮನಿರ್ದೇಶನ ಮಾಡಲು ಸೆಪ್ಟೆಂಬರ್ 1ರಿಂದ ಸೆ.30ರವರೆಗೆ ಅವಕಾಶ ಕಲ್ಪಿಸಿದೆ.

ಕಲೆ, ಸಾಹಿತ್ಯ, ಜಾನಪದ, ಕೃಷಿ-ಪರಿಸರ, ವಿಜ್ಞಾನ-ತಂತ್ರಜ್ಞಾನ, ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳ ಸಾಧಕರ ಹೆಸರನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ನಾಮನಿರ್ದೇಶನ ಮಾಡಬಹುದು ಎಂದು ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ. ಪ್ರಶಸ್ತಿಗೆ 60 ವರ್ಷ ಮೇಲ್ಪಟ್ಟವರನ್ನು ಶಿಫಾರಸು ಮಾಡಬಹುದು. ಕ್ರೀಡಾ ಕ್ಷೇತ್ರದಲ್ಲಿ ಮಾತ್ರ ವಯಸ್ಸಿನ ವಿನಾಯಿತಿ ನೀಡಲಾಗಿದೆ. ಸೇವಾ ಸಿಂಧು ಪೋರ್ಟಲ್ ವಿಳಾಸ: www.sevasindhu.karnataka.gov.in

ಸೆ.2ರಿಂದ ಪೋಡಿ ದುರಸ್ತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಸೆ.2ರಿಂದ ಪೋಡಿ ದುರಸ್ತಿ ಅಭಿಯಾನ ಆರಂಭಿಸಲಾಗುತ್ತದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಕಾಸಸೌಧದಲ್ಲಿ ಶುಕ್ರವಾರ ಅಧಿಕಾರಿಗಳ ಜತೆ ನಡೆಸಿದ ವಿಡಿಯೊ ಸಂವಾದದಲ್ಲಿ ಮಾತನಾಡಿದ ಅವರು, ದರಕಾಸ್ತಿನಿಂದ ಖಾಲಿ ಉಳಿದಿರುವ ಜಮೀನುಗಳ 1-5 ನಮೂನೆ ಪೋಡಿ ದುರಸ್ತಿ ಕಾರ್ಯ ಪೂರ್ಣಗೊಳಿಸಬೇಕು. ರಾಜ್ಯದಲ್ಲಿ ಸುಮಾರು 10 ಲಕ್ಷ ರೈತರಿಗೆ ದಶಕಗಳ ಹಿಂದೆ ಮಂಜೂರಾಗಿದ್ದ ಸರ್ಕಾರಿ ಜಮೀನು ಸಹ, ಪೋಡಿ ದುರಸ್ತಿ ಆಗದೆ ಬಾಕಿ ಉಳಿದಿದೆ.

ತೊಂದರೆ ಅನುಭವಿಸುತ್ತಿರುವ ರೈತರಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಪೋಡಿ ದುರಸ್ತಿ ಮಾಡಲು ಅವಶ್ಯವಿರುವ 1-5 ನಮೂನೆಗಳನ್ನು ತಯಾರಿಸಲು ಕಡತಗಳನ್ನು ಬಳಸಲಾಗುತ್ತಿತ್ತು. ಆದರೆ, ಸಮರ್ಪಕವಾಗಿ ಆಗಿಲ್ಲ. ಕೆಲವು ಕಡತಗಳೇ ಕಾಣೆಯಾಗಿವೆ. ಇದೀಗ ಡಿಜಿಟಲ್ ಆ್ಯಪ್ ಮೂಲಕ ವೇಗವಾಗಿ ಕಡತಗಳನ್ನು ತಯಾರಿಸಲಾಗುತ್ತದೆ ಎಂದರು. ಒಬ್ಬ ರೈತನಿಗೆ ತಯಾರಿ ಮಾಡಿದ 1-5 (ನಮೂನೆ) ಕಡತ, ಆ ಸರ್ವೆ ನಂಬರಿನ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ. ರೈತರ ಅರ್ಜಿಗೆ ಕಾಯದೆ ಇಲಾಖೆ ಸ್ವಯಂ ಕಡತಗಳನ್ನು ತಯಾರಿಸಲಿದೆ ಎಂದರು.

ಷೇರುಪೇಟೆ ವಹಿವಾಟು 231

ಹಿಂದಿನ ಅಂತ್ಯ 82,134 | ಇಂದಿನ ಅಂತ್ಯ 82,365

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,151
ಇಂದಿನ ಅಂತ್ಯ	25,235
▲	83
ದಿನದ ಗರಿಷ್ಠ	25,268

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹233
ಆರ್‌ಎಸ್‌ಎಸ್-5	₹227
ಗುಡ್ ಲಾಟ್	₹211

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹510
12 ಕ್ಕೆ	₹68
ಮೈಸೂರು	
100ಕ್ಕೆ	₹512

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹222-511
ದ್ವಿತಳಿ (ಬಿ.ವಿ)	₹325-702

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1570 (1550)
ಸೋಯಾ (ರಿಫೈನ್ಡ್)	₹985 (980)
ಸೂರ್ಯಕಾಂತಿ (ರಿಫೈನ್ಡ್)	₹1000 (990)
ಪಾಮೋಲಿನ್	₹975 (965)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40000
ಹಳತು	40000-47500
ಚಿತ್ರದುರ್ಗ	
ಅಪಿ	46600-47000
ಬೆಟ್ಟೆ	33100-33500
ಕೆಂಪುಗೋಟು	27100-27500
ರಾಶಿ	46100-46500
ಕುಮಟ	
ಚಿಪ್ಪು	23019-26899
ಕೋಕ	8599-23099
ಫ್ಯಾಕ್ಟರಿ	8019-39399
ಹಳೆಚಾಲಿ	36899-39399
ಹೊಸಚಾಲಿ	32089-35299
ಶಿವಮೊಗ್ಗ	
ಬೆಟ್ಟೆ	38009-53300
ಗೊರಬಲು	16109-31899
ರಾಶಿ	27011-48198
ಸರಕು	54096-78996
ಸಿದ್ದಾಪುರ	
ಬಿಳಿಗೋಟು	24700-28399
ಚಾಲಿ	31599-35000
ಕೋಕ	20300-23069
ಕೆಂಪುಗೋಟು	21889-23099
ರಾಶಿ	41109-45899
ತಟ್ಟಿಬೆಟ್ಟೆ	26929-31899
ಶಿರಸಿ	
ಬೆಟ್ಟೆ	26699-42899
ಬಿಳಿಗೋಟು	20009-30019
ಚಾಲಿ	32892-36316
ಕೆಂಪುಗೋಟು	12905-22100
ರಾಶಿ	40009-46699
ಯಲ್ಲಾಪುರ	
ಅಪಿ	55899-58899
ಬಿಳಿಗೋಟು	16899-29599
ಚಾಲಿ	29600-35899
ಕೋಕ	4112-15900
ಕೆಂಪುಗೋಟು	16899-24399
ರಾಶಿ	40004-53739
ತಟ್ಟಿಬೆಟ್ಟೆ	25010-39899

ಕೃಷಿ, ಸೇವಾ ವಲಯದ ಚಟುವಟಿಕೆ ಮಂದ; ಬೆಳವಣಿಗೆ ಇಳಿಕೆ: ಕೇಂದ್ರ

ಜಿಡಿಪಿ ಪ್ರಗತಿ: 15 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ/ಎಎಫ್‌ಪಿ): ದೇಶದ ಜಿಡಿಪಿ ಬೆಳವಣಿಗೆ 2024–25ರ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 6.7ರಷ್ಟು ಪ್ರಗತಿ ದಾಖಲಿಸಿದೆ. ಇದು 15 ತಿಂಗಳ ಕನಿಷ್ಠ ಮಟ್ಟವಾಗಿದೆ.

2023-24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಒಟ್ಟು ದೇಶೀ ಉತ್ಪಾದನೆ (ಜಿಡಿಪಿ) ಶೇ 8.2ರಷ್ಟು ದಾಖಲಾಗಿತ್ತು. ಕೃಷಿ ಮತ್ತು ಸೇವಾ ವಲಯವು ನಿರೀಕ್ಷಿತ ಪ್ರಮಾಣದಲ್ಲಿ ಬೆಳವಣಿಗೆ ಕಾಣದಿದ್ದರಿಂದ ಪ್ರಗತಿ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರದ ಅಂಕಿ–ಅಂಶಗಳು ತಿಳಿಸಿವೆ.

ಚೀನಾವು ಜೂನ್ ತ್ರೈಮಾಸಿಕದಲ್ಲಿ ಶೇ 4.7ರಷ್ಟು ಪ್ರಗತಿ ದಾಖಲಿಸಿದೆ; ಭಾರತವು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಉಳಿದಿದೆ. 2023ರ ಮಾರ್ಚ್ ತ್ರೈಮಾಸಿಕದಲ್ಲಿ ಪ್ರಗತಿ ಶೇ 6.2ರಷ್ಟಿತ್ತು.

ದೇಶದ ಜಿಡಿಪಿ ಬೆಳವಣಿಗೆಯು ಇಳಿಕೆಯಾಗಿದ್ದರೂ, ಈ ಅವಧಿಯಲ್ಲಿ ಒಟ್ಟು ಮೌಲ್ಯ ವರ್ಧನೆಯ (ಜಿವಿಎ) ಬೆಳವಣಿಗೆ ಶೇ 6.8ಕ್ಕೆ ಏರಿಕೆಯಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 6.3ರಷ್ಟಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ದತ್ತಾಂಶದ ಪ್ರಕಾರ, ಕೃಷಿ ವಲಯದ ಬೆಳವಣಿಗೆ ಜಿವಿಎ ಶೇ 3.7ರಿಂದ ಶೇ 2ಕ್ಕೆ ಇಳಿದಿದೆ. ಆದರೆ, ತಯಾರಿಕಾ ವಲಯದಲ್ಲಿ ಶೇ 7 ಮತ್ತು ನಿರ್ಮಾಣ ವಲಯ ಶೇ 10.5ಕ್ಕೆ ಏರಿಕೆಯಾಗಿದೆ.

ಸರ್ಕಾರದ ಬಂಡವಾಳ ವೆಚ್ಚದಲ್ಲಿನ ಇಳಿಕೆ, ಬಿಸಿಗಾಳಿ, ಗ್ರಾಹಕರ ವೆಚ್ಚದಲ್ಲಿನ ಕಡಿಮೆಯಿಂದ ದೇಶವು ಪ್ರಗತಿ ಇಳಿಕೆ ದಾಖಲಿಸಿದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ಹಿಗ್ಗಿದ ವಿತ್ತೀಯ ಕೊರತೆ ಅಂತರ

2024–25ರ ಹಣಕಾಸು ವರ್ಷದ ಏಪ್ರಿಲ್-ಜುಲೈ ಅವಧಿಯಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 17.2ರಷ್ಟು ಆಗಿದೆ ಎಂದು ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರು (ಸಿಜಿಎ) ಶುಕ್ರವಾರ ಬಿಡುಗಡೆಗೊಳಿಸಿರುವ ವರದಿ ತಿಳಿಸಿದೆ.

ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯು ಏಪ್ರಿಲ್-ಜುಲೈ ಅವಧಿಯಲ್ಲಿ ಮೌಲ್ಯದ ಲೆಕ್ಕದಲ್ಲಿ ₹2.76 ಲಕ್ಷ ಕೋಟಿಯಷ್ಟಿದೆ. 2023–24ನೇ ಸಾಲಿನ ಬಜೆಟ್ ಅಂದಾಜಿನ ಶೇ 33.9ರಷ್ಟು ಆಗಿದೆ ಎಂದು ತಿಳಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು ಶೇ 5.6ರಷ್ಟು ಇತ್ತು. ಇತ್ತೀಚೆಗೆ ಮಂಡನೆಯಾದ ಬಜೆಟ್‌ನಲ್ಲಿ 2024–25ನೇ ಆರ್ಥಿಕ ಸಾಲಿಗೆ ಜಿಡಿಪಿಯ ಶೇ 4.9ರಷ್ಟಕ್ಕೆ ತಗ್ಗಿಸುವ ಗುರಿ ನಿಗದಿಪಡಿಸಲಾಗಿದೆ. ಮೌಲ್ಯದ ಲೆಕ್ಕದಲ್ಲಿ ಇದು ₹16.13 ಲಕ್ಷ ಕೋಟಿ ಆಗಿದೆ.

ಏಪ್ರಿಲ್‌ನಿಂದ ಜುಲೈವರೆಗೆ ₹7.15 ಲಕ್ಷ ಕೋಟಿ ನಿವ್ವಳ ತೆರಿಗೆ ವರಮಾನ ಸಂಗ್ರಹವಾಗಿದೆ. ಇದು ಪ್ರಸಕ್ತ ಆರ್ಥಿಕ ವರ್ಷದ ಬಜೆಟ್ ಅಂದಾಜಿನ ಶೇ 27ರಷ್ಟಿದೆ.

ಜುಲೈ ಅಂತ್ಯಕ್ಕೆ ಕೇಂದ್ರ ಸರ್ಕಾರದ ಒಟ್ಟು ವೆಚ್ಚವು ₹13 ಲಕ್ಷ ಕೋಟಿ ಆಗಿದೆ. ಇದು ಬಜೆಟ್ ಅಂದಾಜಿನ ಶೇ 27ರಷ್ಟಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಸರ್ಕಾರದ ವೆಚ್ಚವು ಶೇ 30ರಷ್ಟನ್ನು ದಾಟಿತ್ತು ಎಂದು ವರದಿ ತಿಳಿಸಿದೆ.

ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಉತ್ಪಾದನೆ ಯಲ್ಲಿನ ಇಳಿಕೆಯಿಂದ ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ಜುಲೈನಲ್ಲಿ ಇಳಿಕೆ ಕಂಡಿದ್ದು, ಶೇ 6.1ರಷ್ಟಾಗಿದೆ ಎಂದು ಸರ್ಕಾರದ ಅಂಕಿ–ಅಂಶಗಳು ತಿಳಿಸಿವೆ.

ಆದರೂ, ಬೆಳವಣಿಗೆ ದರವು ಜೂನ್‌ನಲ್ಲಿದ್ದ ಶೇ 5.1ಕ್ಕಿಂತ ಹೆಚ್ಚಿದೆ. 2023ರ ಜುಲೈನಲ್ಲಿ ಶೇ 8.5ರಷ್ಟು ಬೆಳವಣಿಗೆ ದಾಖಲಾಗಿತ್ತು. ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಈ ಎಂಟು ವಲಯಗಳಾಗಿವೆ.

ಏಪ್ರಿಲ್–ಜುಲೈ ಅವಧಿಯಲ್ಲಿ ಈ ವಲಯಗಳ ಉತ್ಪಾದನೆ ಶೇ 6.1ರಷ್ಟು ಆಗಿದ್ದರೆ, ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 6.6 ದಾಖಲಾಗಿತ್ತು. ಈ ವಲಯಗಳು ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ 40ರಷ್ಟು ಕೊಡುಗೆ ನೀಡುತ್ತವೆ. ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಉತ್ಪಾದನೆಯು ಕ್ರಮವಾಗಿ (–) ಶೇ 2.9 ಮತ್ತು (–) ಶೇ 1.3ರಷ್ಟು ಕಡಿಮೆಯಾಗಿದೆ.

ವಿದೇಶಿ ವಿನಿಮಯ ಸಂಗ್ರಹ ದಾಖಲೆ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಆಗಸ್ಟ್ 23ಕ್ಕೆ ಕೊನೆಗೊಂಡ ವಾರದಲ್ಲಿ ₹58,881 ಕೋಟಿ ಹೆಚ್ಚಳವಾಗಿದೆ.

ಒಟ್ಟು ಮೀಸಲು ಸಂಗ್ರಹವು ದಾಖಲೆಯ ₹57.15 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಗ್ರಹವು ₹50,159 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹50 ಲಕ್ಷ ಕೋಟಿ ಆಗಿದೆ. ಚಿನ್ನದ ಮೀಸಲು ಸಂಗ್ರಹದ ಮೌಲ್ಯವು ₹7,486 ಕೋಟಿಗೆ ಏರಿಕೆಯಾಗಿದೆ. ಅಂತರ ರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹251 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹39,234 ಕೋಟಿಗೆ ಮುಟ್ಟಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ಏರ್ ಇಂಡಿಯಾದೊಂದಿಗೆ ವಿಸ್ತಾರಾ ಏರ್‌ಲೈನ್ಸ್ ವಿಲೀನ

ನವದೆಹಲಿ (ಪಿಟಿಐ): ವಿಸ್ತಾರಾ ಏರ್‌ಲೈನ್ಸ್ ವಿಮಾನಯಾನ ಸಂಸ್ಥೆಯು ಏರ್ ಇಂಡಿಯಾದೊಂದಿಗೆ ನವೆಂಬರ್ 12ರಂದು ವಿಲೀನಗೊಳ್ಳಲಿದೆ. ವಿಸ್ತಾರಾ ಎನ್ನುವ ಬ್ರಾಂಡ್‌ನಡಿ ನವೆಂಬರ್ 11ರಂದು ಕೊನೆಯ ಬಾರಿಗೆ ವಿಮಾನ ಕಾರ್ಯಾಚರಣೆ ನಡೆಸಲಿದೆ.

ವಿಸ್ತಾರಾ ಏರ್‌ಲೈನ್ಸ್ ಸಂಸ್ಥೆಯು ಟಾಟಾ ಸಮೂಹ ಹಾಗೂ ಸಿಂಗಪುರ ಏರ್‌ಲೈನ್ಸ್‌ನ ಜಂಟಿ ಮಾಲೀಕತ್ವದಲ್ಲಿದೆ. ಏರ್ ಇಂಡಿಯಾದೊಂದಿಗೆ ವಿಲೀನಗೊಳ್ಳಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಏರ್ ಇಂಡಿಯಾದಲ್ಲಿ ಸಿಂಗಪುರ ಏರ್‌ಲೈನ್ಸ್ ₹2,058 ಕೋಟಿ ವಿದೇಶಿ ನೇರ ಹೂಡಿಕೆ ಮಾಡಲು ಕೇಂದ್ರವು ಅನುಮತಿಸಿದೆ.

'ವಿಸ್ತಾರಾ ಏರ್ ಲೈನ್ಸ್‌ನಲ್ಲಿ ನವೆಂಬರ್ 12 ಅಥವಾ ಅದರ ಬಳಿಕದ ದಿನಾಂಕಗಳಿಗೆ ಬುಕಿಂಗ್ ಸ್ವೀಕರಿಸಲಾಗುವುದಿಲ್ಲ. ಆ ಬಳಿಕ ಏರ್ ಇಂಡಿಯಾವು ಈ ವಿಮಾನಗಳ ನಿರ್ವಹಣೆ ಮಾಡಲಿದ್ದು, ವಿಸ್ತಾರಾ ಕಾರ್ಯಾಚರಿಸುತ್ತಿದ್ದ ವಿಮಾನ ಮಾರ್ಗಗಳ ಬುಕಿಂಗ್ ಏರ್ ಇಂಡಿಯಾ ವೆಬ್‌ಸೈಟ್‌ಗೆ ವರ್ಗಾವಣೆ ಯಾಗಲಿದೆ. ನವೆಂಬರ್ 11ರವರೆಗೆ ಎಂದಿನಂತೆ ವಿಸ್ತಾರಾದ ಕಾರ್ಯಾಚರಣೆ ಇರಲಿದೆ' ಎಂದು ವಿಮಾನಯಾನ ಸಂಸ್ಥೆ ಹೇಳಿದೆ.

ವಿಸ್ತಾರಾ–ಏರ್ ಇಂಡಿಯಾ ವಿಲೀನ 2022ರ ನವೆಂಬರ್‌ನಲ್ಲಿ ಘೋಷಿಸಲಾಗಿತ್ತು. ವಿಲೀನದ ಬಳಿಕ ಸಿಂಗಪುರ ಏರ್‌ಲೈನ್ಸ್ ಸಂಸ್ಥೆಯು ಏರ್ ಇಂಡಿಯಾದಲ್ಲಿ ಶೇ 25.1ರಷ್ಟು ಪಾಲು ಹೊಂದಿರಲಿದೆ. ಸದ್ಯ ಏರ್ ಇಂಡಿಯಾ ಸಂಸ್ಥೆಯು ಟಾಟಾ ಸಮೂಹದ ಒಡೆತನದಲ್ಲಿದೆ.



ಉದ್ದು, ಸೋಯಾಬಿನ್ ಖರೀದಿಗೆ ಕೇಂದ್ರ ಅನುಮತಿ

ನವದೆಹಲಿ: ಬೆಂಬಲ ಬೆಲೆ ಯೋಜನೆಯಡಿ ಉದ್ದು ಹಾಗೂ ಸೋಯಾಬಿನ್ ಖರೀದಿಗೆ ಕೇಂದ್ರ ಕೃಷಿ ಸಚಿವಾಲಯ ಅನುಮತಿ ನೀಡಿದೆ.

ನಾಲ್ಕೈದು ದಿನಗಳ ಹಿಂದೆ ಹೆಸರು ಮತ್ತು ಸೂರ್ಯಕಾಂತಿ ಬೆಳೆಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಕೇಂದ್ರ ಅನುಮತಿ ನೀಡಿತ್ತು. ರಾಜ್ಯದಲ್ಲಿ 2024-25 ರ ಮುಂಗಾರು ಹಂಗಾಮಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ 19,760 ಟನ್ ಉದ್ದು ಹಾಗೂ 1,03,315 ಟನ್ ಸೋಯಾಬಿನ್ ಖರೀದಿಗೆ ಒಪ್ಪಿಗೆ ನೀಡಿದೆ.

ಉದ್ದಿನ ಕಾಳು ₹7,400 ಮತ್ತು ಸೋಯಾಬಿನ್‌ಗೆ ₹4,892 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಕಳೆದ ವರ್ಷ ₹6,950 ಇದ್ದ ಉದ್ದಿನ ಬೆಂಬಲ ಬೆಲೆ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ₹450 ಹೆಚ್ಚಳ ಕಂಡಿದೆ. ₹4,600 ದರವಿದ್ದ ಸೋಯಾಬಿನ್ ಬೆಂಬಲ ಬೆಲೆ ಈಗ ₹292 ಹೆಚ್ಚಳವಾಗಿದೆ.

ತಕ್ಷಣ ಖರೀದಿ ಕೇಂದ್ರ ತೆರೆಯಲು ಒತ್ತಾಯ: ರಾಜ್ಯ ಸರ್ಕಾರ ತಕ್ಷಣವೇ ರಾಜ್ಯದಾದ್ಯಂತ ಬೆಂಬಲ ಬೆಲೆ ಖರೀದಿ ಕೇಂದ್ರಗಳನ್ನು ಆರಂಭಿಸಿ ಹೆಸರು, ಸೂರ್ಯಕಾಂತಿ ಜತೆಗೆ ಉದ್ದು ಮತ್ತು ಸೋಯಾಬಿನ್ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹12000-12000
ತಿಪಟೂರು	₹11200-11200
ತುರುವೇಕೆರೆ	₹11000-11300

ವಿನಿಮಯ ದರ

$ ಡಾಲರ್	83.85
£ ಪೌಂಡ್	110.56
€ ಯುರೊ	92.94
¥ ಯೆನ್ (100ಕ್ಕೆ)	58

'₹2.59 ಲಕ್ಷ ಕೋಟಿ ಹೂಡಿಕೆ ಆಕರ್ಷಿಸಿದ ಫಿನ್‌ಟೆಕ್ ವಲಯ'



ನರೇಂದ್ರ ಮೋದಿ

ಮುಂಬೈ (ಪಿಟಿಐ): ಫಿನ್‌ಟೆಕ್ ವಲಯವು ಕಳೆದ 10 ವರ್ಷಗಳಲ್ಲಿ ₹2.59 ಲಕ್ಷ ಕೋಟಿಗೂ ಹೆಚ್ಚು ಹೂಡಿಕೆಯನ್ನು ಆಕರ್ಷಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಫಿನ್‌ಟೆಕ್ ವಲಯದ ಬೆಳವಣಿಗೆಗೆ ಉತ್ತೇಜನ ನೀಡಲು, ಏಂಜೆಲ್ ತೆರಿಗೆ ರದ್ದು ಮಾಡುವುದು ಸೇರಿದಂತೆ ವಿವಿಧ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆ ಎಂದು ಶುಕ್ರವಾರ ನಡೆದ ಜಾಗತಿಕ ಫಿನ್‌ಟೆಕ್ ಫೆಸ್ಟ್ ಕಾರ್ಯಕ್ರಮದಲ್ಲಿ ಹೇಳಿದರು.

ಸೈಬರ್ ವಂಚನೆ ತಡೆಗಟ್ಟಲು ಮತ್ತು ಜನರಲ್ಲಿ ಡಿಜಿಟಲ್ ಸಾಕ್ಷರತೆ ಹೆಚ್ಚಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ನಿಯಂತ್ರಕರಿಗೆ ಸೂಚಿಸಿದರು. ಭಾರತೀಯರು ಜಗತ್ತಿನಲ್ಲೇ ಅತಿ ತ್ವರಿತವಾಗಿ ಫಿನ್‌ಟೆಕ್ ಅನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಹಣಕಾಸು ಸೇವೆಗಳಿಂದಾಗಿ ಹಳ್ಳಿಗಳು ಮತ್ತು ನಗರಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತಿದೆ ಎಂದರು.


ವಿಶ್ವದ ಅತಿ ದೊಡ್ಡ ಕಿರುಸಾಲ ಯೋಜನೆಯಾದ ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ₹27 ಲಕ್ಷ ಕೋಟಿಗೂ ಹೆಚ್ಚು ಸಾಲವನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಟೊಯೊಟ ಯೂನಿಯನ್ ಬ್ಯಾಂಕ್ ಒಪ್ಪಂದ

ನವದೆಹಲಿ (ಪಿಟಿಐ): ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿ ಟೊಯೊಟ ಕಿರ್ಲೋಸ್ಕರ್ ಮೋಟರ್, ತನ್ನ ವಾಹನಗಳನ್ನು ಖರೀದಿಸುವ ಗ್ರಾಹಕರಿಗೆ ಸಾಲ ಸೌಲಭ್ಯ ಒದಗಿಸಲು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಒಪ್ಪಂದ ಪತ್ರಕ್ಕೆ ಸಹಿ ಹಾಕಿದೆ.

ಈ ಪಾಲುದಾರಿಕೆಯಡಿ, ಗ್ರಾಹಕರು ತಮ್ಮ ಖಾಸಗಿ ಬಳಕೆಗಾಗಿ ಕಂಪನಿಯ ಯಾವುದೇ ವಾಹನ ಖರೀದಿಸಿದರೂ ಶೇ 90ರಷ್ಟು ಸಾಲ ಸೌಲಭ್ಯ ಪಡೆಯಬಹುದಾಗಿದೆ. ಬಡ್ಡಿ ದರ ಶೇ 8.8ರಿಂದ ಆರಂಭವಾಗಲಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ.

ಟ್ರಂಪ್ ಸೋಲಿಸಲು ಜನ ನಿರ್ಧರಿಸಿದ್ದಾರೆ: ಕಮಲಾ



ವಾಷಿಂಗ್ಟನ್(ಪಿಟಿಐ): ತಮ್ಮ ಪ್ರತಿಸ್ಪರ್ಧಿ ಡೊನಾಲ್ಡ್ ಟ್ರಂಪ್ ದೇಶವನ್ನು ವಿಭಜಿಸುವ ಕಾರ್ಯಸೂಚಿ ಮುಂದಿಟ್ಟುಕೊಂಡು ಮತ ಕೇಳುತ್ತಿದ್ದಾರೆ. ಇದು ಅಮೆರಿಕ ಪ್ರಜೆಗಳ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ನಡೆ. ಹಾಗಾಗಿ, ಈ ಬಾರಿಯ ಚುನಾವಣೆಯಲ್ಲಿ ಜನರು ಟ್ರಂಪ್ ಅವರನ್ನು ಪರಾಭವಗೊಳಿಸಲು ನಿರ್ಧರಿಸಿದ್ದಾರೆ ಎಂದು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್ ಹೇಳಿದ್ದಾರೆ.

ಅಮೆರಿಕದ ಹಾಲಿ ಉಪಾಧ್ಯಕ್ಷೆಯೂ ಆಗಿರುವ 59 ವರ್ಷದ ಕಮಲಾ ಹ್ಯಾರಿಸ್, ಸಿಎನ್‌ಎನ್ ಸುದ್ದಿವಾಹಿನಿಗೆ ನೀಡಿರುವ ಮೊದಲ ಸಂದರ್ಶನದಲ್ಲಿ, ನವೆಂಬರ್ 5ರಂದು ನಡೆಯಲಿರುವ ಅಧ್ಯಕ್ಷೀಯ ಚುನಾವಣೆ ಕುರಿತು ಮಾತನಾಡಿದ್ದಾರೆ.

'ಟ್ರಂಪ್ ಅವರ ಕಾರ್ಯಸೂಚಿಯನ್ನು ಧಿಕ್ಕರಿಸಿ, ಹೊಸ ಆರಂಭಕ್ಕೆ ಅಮೆರಿಕ ಜನರು ಸಿದ್ಧರಾಗಿದ್ದಾರೆ' ಎಂದು ಹೇಳಿದ್ದಾರೆ.

'ನಿಮ್ಮ ಜನಾಂಗೀಯ ಅಸ್ಮಿತೆ ಕುರಿತು ಟ್ರಂಪ್ ಹೇಳಿಕೆಗೆ ಏನು ಹೇಳುತ್ತೀರಿ' ಎಂಬ ಪ್ರಶ್ನೆಗೆ, 'ಇದು ಅವರ ಚುನಾವಣಾ ಕಾರ್ಯತಂತ್ರ ಭಾಗ' ಎಂದು ಪ್ರತಿಕ್ರಿಯಿಸಿದ ಅವರು, 'ಮುಂದಿನ ಪ್ರಶ್ನೆ ಕೇಳಿ, ದಯವಿಟ್ಟು' ಎಂದಿದ್ದಾರೆ.

'ಮಧ್ಯಮ ವರ್ಗಕ್ಕೆ ಯಾವ ರೀತಿ ನೆರವು ನೀಡಲು ಸಾಧ್ಯ? ಅವರನ್ನು ಸಬಲರನ್ನಾಗಿ ಮಾಡುವುದು ಹೇಗೆ? ಎಂಬುದಕ್ಕೇ ನನ್ನ ಆದ್ಯತೆ. ಅಮೆರಿಕ ಜನರ ಆಶೋತ್ತರಗಳು, ಗುರಿಗಳು ಹಾಗೂ ಅವರ ಮಹತ್ವಾಕಾಂಕ್ಷೆಗಳನ್ನು ಗಮನಿಸಿದಾಗ, ಜನರು ಹೊಸ ಆರಂಭಕ್ಕೆ ನಿಶ್ಚಯಿಸಿದ್ದಾರೆ ಎಂಬುದು ಗೊತ್ತಾಗುತ್ತದೆ' ಎಂದಿದ್ದಾರೆ.



ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಕೃತ್ಯ ಖಂಡಿಸಿ ತರಬೇತಿ ವೈದ್ಯರು ಶುಕ್ರವಾರ ಕೋಲ್ಕತ್ತದಲ್ಲಿ ಪ್ರತಿಭಟಿಸಿ, ಫಲಕ ಪ್ರದರ್ಶಿಸಿದರು —ಎಎಫ್‌ಪಿ ಚಿತ್ರ

'ರಾತ್ರಿ ಪಾಳಿಯಲ್ಲಿ ಭದ್ರತೆ ಇಲ್ಲ, ಅಸುರಕ್ಷಿತರು'

ಶೇ 35ರಷ್ಟು ವೈದ್ಯರ ಅಭಿಮತ: ಐಎಂಎ ಸಮೀಕ್ಷೆ

ನವದೆಹಲಿ (ಪಿಟಿಐ): 'ರಾತ್ರಿ ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸುವ ಮೂರನೇ ಒಂದರಷ್ಟು ವೈದ್ಯರಿಗೆ, ಮುಖ್ಯವಾಗಿ ವೈದ್ಯೆಯರಿಗೆ ತಮಗೆ 'ಸುರಕ್ಷತೆ ಇಲ್ಲ' ಅಥವಾ ನಾವು 'ಹೆಚ್ಚು ಅಸುರಕ್ಷಿತರು' ಎಂಬ ಆತಂಕ ಕಾಡುತ್ತಿದೆ.

ರಾತ್ರಿ ಪಾಳಿಯಲ್ಲಿ ಆತ್ಮರಕ್ಷಣೆಗೆ ಸ್ವತಃ ಆಯುಧ ಒಯ್ಯುವುದು ಉತ್ತಮ ಎಂದು ಕೆಲವರು ಭಾವಿಸಿದ್ದಾರೆ. ಸಮೀಕ್ಷೆಗೆ ಪ್ರತಿಕ್ರಿಯಿಸಿದ 3,885 ವೈದ್ಯೆಯರಲ್ಲಿ ಶೇ 35ರಷ್ಟು ಮಂದಿ 'ನಾವು ಅಸುರಕ್ಷಿತರು' ಎಂದಿದ್ದಾರೆ.

ಕೋಲ್ಕತ್ತದಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಕೃತ್ಯದ ಬಳಿಕ ಭಾರತೀಯ ವೈದ್ಯಕೀಯ ಸಂಘ (ಐಎಂಎ) ನಡೆಸಿದ ಆನ್‌ಲೈನ್ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದೆ.

ಶೇ 45ರಷ್ಟು ವೈದ್ಯರ ಪ್ರಕಾರ, ರಾತ್ರಿ ಪಾಳಿಯಲ್ಲಿ ವೈದ್ಯರಿಗೆ ವಿರಾಮ ಕೊಠಡಿಯೇ ಇಲ್ಲ. 22 ರಾಜ್ಯಗಳ ವೈದ್ಯರು ಸಮೀಕ್ಷೆಗೆ ಸ್ಪಂದಿಸಿದ್ದಾರೆ. ಇವರಲ್ಲಿ ಶೇ 85ರಷ್ಟು ಮಂದಿ 35 ವರ್ಷಕ್ಕಿಂತ ಕೆಳಗಿನವರು. ಶೇ 61ರಷ್ಟು ಮಂದಿ ಸ್ನಾತಕೋತ್ತರ ಪದವೀಧರರು.

ಸಮೀಕ್ಷೆಯ ಅಂಶಗಳನ್ನು ಐಎಂಎ ಕೇರಳ ಘಟಕದ ಡಾ.ರಾಜೀವ್ ಜಯದೇವನ್ ತಂಡ ಕ್ರೋಢೀಕರಿಸಿದೆ. ಐಎಂಎ ಕೇರಳದ ವೈದ್ಯಕೀಯ ನಿಯತಕಾಲಿಕದ ಅಕ್ಟೋಬರ್ ತಿಂಗಳ ಸಂಚಿಕೆಯಲ್ಲಿ ವರದಿ ಪ್ರಕಟವಾಗಿದೆ.

ಸಮೀಕ್ಷೆ ಪ್ರಕಾರ, ಶೇ 24.1ರಷ್ಟು ವೈದ್ಯರಿಗೆ ನಾವು 'ಸುರಕ್ಷಿತರಲ್ಲ' ಎಂಬ ಭಾವನೆ ಇದ್ದರೆ, ಶೇ 11.4 ರಷ್ಟು ಮಂದಿಗೆ 'ಹೆಚ್ಚು ಅಸುರಕ್ಷಿತರು' ಎಂಬ ಆತಂಕ ಕಾಡುತ್ತಿದೆ. ಈ ಅಭಿಪ್ರಾಯ ವ್ಯಕ್ತಪಡಿಸಿದವರಲ್ಲಿ ಹೆಚ್ಚಿನವರು ವೈದ್ಯೆಯರು. 20-30 ವರ್ಷ ವಯಸ್ಸಿನವರಲ್ಲಿ ಇಂಟರ್ನಿಗಳು, ಸ್ನಾತಕೋತ್ತರ ವೈದ್ಯೆಯರಿದ್ದು, ಇವರಿಗೆ ಅಭದ್ರತೆ ಹೆಚ್ಚು ಕಾಡುತ್ತಿದೆ.

ವೈದ್ಯರಿಗೆ ಪ್ರತ್ಯೇಕ ಕೊಠಡಿ ಇಲ್ಲ. ಇದ್ದರೂ ದಟ್ಟಣೆ ಇರುತ್ತದೆ. ಖಾಸಗಿತನ ಇಲ್ಲ. ಭದ್ರತೆ ಇಲ್ಲ. ಅನಿವಾರ್ಯವಗಿ ವೈದ್ಯರು ವಿರಾಮಕ್ಕಾಗಿ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕಿದೆ. ಮೂರನೇ ಒಂದರಷ್ಟು ವೈದ್ಯರ ಕೊಠಡಿಗಳಿಗೆ ಶೌಚಾಲಯ ಸೌಲಭ್ಯವಿಲ್ಲ. ಶೇ 53ರಷ್ಟು ವೈದ್ಯರ ಪ್ರಕಾರ, ವಿರಾಮ ಕೊಠಡಿಗಳು ವಾರ್ಡ್‌ಗಳಿಂದ ಸಾಕಷ್ಟು ದೂರದಲ್ಲಿದೆ.

ರಾತ್ರಿ ಪಾಳಿ ವೈದ್ಯರ ಸುರಕ್ಷತೆಗಾಗಿ ತರಬೇತಿ ಪಡೆದ ಭದ್ರತಾ ಸಿಬ್ಬಂದಿ ನಿಯೋಜಿಸಬೇಕು. ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಬೇಕು. ಬೆಳಕಿನ ವ್ಯವಸ್ಥೆ ಇರಬೇಕು. ಕೇಂದ್ರೀಯ ರಕ್ಷಣಾ ಕಾಯ್ದೆ (ಸಿಪಿಎ) ಜಾರಿಗೊಳಿಸಬೇಕು. ಅಲಾರಾಂ ವ್ಯವಸ್ಥೆ ಅಳವಡಿಬೇಕು. ವಿರಾಮ ಕೊಠಡಿಗೆ ಬೀಗದ ವ್ಯವಸ್ಥೆ ಮಾಡಿ, ವೈದ್ಯರಿಗೆ ಕೀ ಕೊಡಬೇಕು ಎಂಬ ಸಲಹೆಗಳು ಕೇಳಿಬಂದಿವೆ.

ಸರ್ಕಾರಿ, ಖಾಸಗಿ ಆಸ್ಪತ್ರೆಗಳ ವೈದ್ಯರಿಗೆ ಆನ್‌ಲೈನ್ ಮೂಲಕ ಗೂಗಲ್ ಫಾರಂ ಕಳುಹಿಸಿದ್ದು, 24 ಗಂಟೆಗಳಲ್ಲಿ 3,885 ಮಂದಿ ಸ್ಪಂದಿಸಿದರು ಎಂದು ಡಾ.ಜಯದೇವನ್ ತಿಳಿಸಿದರು.

ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜನೆ, ರೋಗಿಗಳ ಚಿಕಿತ್ಸಾ ಸ್ಥಳದಲ್ಲಿ ಗುಂಪು ನಿರ್ವಹಣೆಗೆ ಅಗತ್ಯ ಎಂದು ಅಭಿಪ್ರಾಯ ಪಟ್ಟಿದ್ದಾರೆ. ನಾನು ಮಡಚಬಹುದಾದ ಸಣ್ಣ ಚಾಕು ಮತ್ತು ಪೆಪ್ಪರ್ ಸ್ಪ್ರೇ ಅನ್ನು ಎಂದಿಗೂ ಆತ್ಮರಕ್ಷಣೆಗಾಗಿ ಇಟ್ಟುಕೊಂಡಿರುತ್ತೇನೆ ಎಂದು ವೈದ್ಯೆಯೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಕರ್ತವ್ಯದ ಸ್ಥಳದಲ್ಲಿ ವೈದ್ಯರಿಗೆ ರಕ್ಷಣೆ ಒದಗಿಸಲು ಹಾಗೂ ಕೆಲಸ ಮಾಡಲು ಸುರಕ್ಷಿತವಾದ ವಾತಾವರಣ ಕಲ್ಪಿಸಲು ಕೇಂದ್ರೀಯ ರಕ್ಷಣಾ ಕಾಯ್ದೆಯ ಅವಶ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಶ್ರದ್ಧಾಂಜಲಿ



ಶ್ರೀಮತಿ ಎಂ.ವಿ ಇಂದಿರ (ಶ್ರೀಮತಿ)

ನನ್ನ ಧರ್ಮಪತ್ನಿ ಶ್ರೀಮತಿ ಎಂ.ವಿ ಇಂದಿರ(ಶ್ರೀಮತಿ)ರವರು ದಿನಾಂಕ: 22.08.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ, ತತ್ಸಂಬಂದವಾದ ಇವರ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ: 01.09.2024 ಭಾನುವಾರದಂದು 11:00 ಗಂಟೆಗೆ ಸ್ವಗ್ರಾಮ ಕನಗಾನಕೊಪ್ಪ, ಚಿಕ್ಕಬಳ್ಳಾಪುರ ಜಿಲ್ಲೆ, ಇಲ್ಲಿ ಏರ್ಪಡಿಸಲಾಗಿದೆ. ತಾವೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಅಪೇಕ್ಷಿಸುವ.

ಶ್ರೀ ಕೆ.ಜಿ. ಕೃಷ್ಣಪ್ಪ. ಮತ್ತು ಕುಟುಂಬದವರು, ಬೆಂಗಳೂರು
ದಿ. ಶ್ರೀ ಗುಂಡಪ್ಪ ತಿಮ್ಮಕ್ಕ ಕನಗಾನಕೊಪ್ಪ ಅವರ ಕುಟುಂಬದವರು ಹಾಗೂ
ದಿ. ಶ್ರೀ ಟಿ.ವಿ. ವೆಂಕಟಸ್ವಾಮಿ ಲಕ್ಷ್ಮೀದೇವಿ, ಮಧುಗಿರಿ ಅವರ ಕುಟುಂಬದವರು.

ಚಿರಸ್ಮರಣೆ



(31.08.1976)
ಶ್ರೀ ಎಚ್.ಕೆ. ಮುನಿವೆಂಕಟಸ್ವಾಮಪ್ಪ

ನೀವು ನಮ್ಮನಗಲಿ 48 ವರ್ಷಗಳು ಕಳೆದರೂ ಸದಾ ತಮ್ಮನ್ನು ಸ್ಮರಿಸುವ ಶ್ರೀಮತಿ/ಶ್ರೀ ಕೆ.ಎಂ.ಶ್ರೀನಿವಾಸಮೂರ್ತಿ ಮತ್ತು ಹೆಚ್.ಕೆ.ಎಂ.ಕುಟುಂಬ ವರ್ಗದವರು ಹಾಗೂ ಬಂಧು–ಮಿತ್ರರು

ಮಲಯಾಳ ಚಿತ್ರೋದ್ಯಮದಲ್ಲಿ ಲೈಂಗಿಕ ಕಿರುಕುಳ ಪ್ರಕರಣ; ವರದಿ ಕೋರಿದ ರಾಷ್ಟ್ರೀಯ ಮಹಿಳಾ ಆಯೋಗ

ನಟ ಜಯಸೂರ್ಯ ವಿರುದ್ಧ 2ನೇ ಪ್ರಕರಣ

ಪಿಟಿಐ, ಪ್ರಜಾವಾಣಿ ವಾರ್ತೆ


ಜಯಸೂರ್ಯ


ರಂಜಿತ್

ತಿರುವನಂತಪುರ: ಮಲಯಾಳ ನಟ ಜಯಸೂರ್ಯ ವಿರುದ್ಧ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಮತ್ತೊಂದು ಪ್ರಕರಣ ದಾಖಲಾಗಿದೆ. ಬೆಂಗಳೂರಿನ ಹೋಟೆಲ್‌ವೊಂದರಲ್ಲಿ ಯುವಕನಿಗೆ ಲೈಂಗಿಕ ದೌರ್ಜನ್ಯವೆಸಗಿದ ಆರೋಪದ ಅಡಿಯಲ್ಲಿ ನಿರ್ದೇಶಕ ಹಾಗೂ ನಿರ್ಮಾಪಕ ರಂಜಿತ್ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗುವ ನಿರೀಕ್ಷೆಯಿದೆ.

ಈ ಬೆಳವಣಿಗೆಯ ಮಧ್ಯೆಯೇ, ಮಲಯಾಳ ಚಿತ್ರರಂಗದಲ್ಲಿ ಲೈಂಗಿಕ ದೌರ್ಜನ್ಯ ಕುರಿತಂತೆ ನ್ಯಾಯಮೂರ್ತಿ ಹೇಮಾ ಸಮಿತಿ ವರದಿಯನ್ನು ಸಲ್ಲಿಸುವಂತೆ ರಾಷ್ಟ್ರೀಯ ಮಹಿಳಾ ಆಯೋಗವು ಕೇರಳ ಸರ್ಕಾರಕ್ಕೆ ಸೂಚನೆ ನೀಡಿದೆ.

ಎರಡನೇ ಎಫ್‌ಐಆರ್: ಜಯಸೂರ್ಯ ಅವರು ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ನಟಿಯೊಬ್ಬರು ಆ.28ರಂದು ದೂರು ನೀಡಿದ ಬೆನ್ನಲ್ಲೇ, ಕೇರಳ ಪೊಲೀಸರು ಮತ್ತೊಂದು ಪ್ರಕರಣ ದಾಖಲಿಸಿದ್ದಾರೆ. ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಜಯಸೂರ್ಯ ವಿರುದ್ಧ ಗುರುವಾರ ಕರಮಾನಾ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಗುರುವಾರ ಪೊಲೀಸರು ತಿಳಿಸಿದ್ದಾರೆ.

2012–2013ರಲ್ಲಿ ತೊಡುಪುಳದ ಸಮೀಪ ಸಿನಿಮಾ ಶೂಟಿಂಗ್ ನಡೆಯುತ್ತಿದ್ದ ವೇಳೆ ನಟ ಜಯಸೂರ್ಯ ಅವರು ಲೈಂಗಿಕ ಕಿರುಕುಳ ನೀಡಿದ್ದರು ಎಂದು ಮಹಿಳೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಈ ಹಿಂದೆ ದಾಖಲಾದ ಪ್ರಕರಣದಂತೆ ಅದೇ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ ಎಂದು ತಿರುವನಂತಪುರದ ಕಂಟೋನ್ಮೆಂಟ್ ಠಾಣೆ ಪೊಲೀಸರು ಖಚಿತಪಡಿಸಿದ್ದಾರೆ.

ರಂಜಿತ್ ವಿರುದ್ಧವೂ ದೂರು: ನಟನೆಗೆ ಅವಕಾಶ ಕೋರಿ 2012ರಲ್ಲಿ ಬೆಂಗಳೂರಿನ ಹೋಟೆಲ್‌ವೊಂದರಲ್ಲಿ ಭೇಟಿಯಾದ ವೇಳೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಕೋಯಿಕ್ಕೋಡ್‌ನ 33 ವರ್ಷದ ವ್ಯಕ್ತಿಯೊಬ್ಬರು ನಿರ್ಮಾಪಕ ರಂಜಿತ್ ವಿರುದ್ಧ ದೂರು ನೀಡಿದ್ದಾರೆ. ಪೊಲೀಸರು ವ್ಯಕ್ತಿಯ ಹೇಳಿಕೆ ದಾಖಲಿಸಿಕೊಂಡಿದ್ದು, ತನಿಖೆಯನ್ನು ಬೆಂಗಳೂರು ಪೊಲೀಸರಿಗೆ ವರ್ಗಾಯಿಸುವ ನಿರೀಕ್ಷೆಯಿದೆ.

ಮತ್ತೊಂದೆಡೆ, ನಟ ಮುಕೇಶ್ ಸೇರಿದಂತೆ ಏಳು ಮಂದಿಯ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದ ನಟಿಯರು ಶುಕ್ರವಾರ ಕೊಚ್ಚಿಯ ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆ ದಾಖಲಿಸಿದ್ದಾರೆ.




ಕೊಚ್ಚಿಯಲ್ಲಿ ನಟರಾದ ಮುಕೇಶ್ ಹಾಗೂ ಸಿದ್ದೀಕ್ ವಿರುದ್ಧ ಪ್ರತಿಭಟಿಸಿದ ಕಾಂಗ್ರೆಸ್ ಕಾರ್ಯಕರ್ತೆಯರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಬಳಸಿದರು ಪಿಟಿಐ ಚಿತ್ರ

ಚುನಾವಣಾ ವೆಚ್ಚ: ಮುಕೇಶ್‌ಗೆ ಹೆಚ್ಚು ಹಣ

ನವದೆಹಲಿ: ಈಚೆಗೆ ನಡೆದ ಲೋಕಸಭಾ ಚುನಾವಣೆಯ ವೆಚ್ಚಕ್ಕಾಗಿ ಸಿಪಿಎಂ, ಅತಿಹೆಚ್ಚು ಹಣವನ್ನು ಮುಕೇಶ್ ಅವರಿಗೆ ನೀಡಿದೆ. ಕೊಲ್ಲಂ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಅವರಿಗೆ ₹ 79 ಲಕ್ಷ ನೀಡಲಾಗಿದೆ ಎಂದು ಪಕ್ಷವು ಸಲ್ಲಿಸಿರುವ 'ಚುನಾವಣಾ ವೆಚ್ಚದ ವರದಿ' ತಿಳಿಸಿದೆ. ಲೋಕಸಭಾ ಚುನಾವಣಾ ಖರ್ಚಿಗೆ ಪಕ್ಷದಿಂದ ಹೆಚ್ಚಿನ ಹಣ ಲಭಿಸಿದರೂ, ಅವರಿಗೆ ಆರ್‌ಎಸ್‌ಪಿಯ ಎನ್.ಕೆ.ಪ್ರೇಮಚಂದ್ರನ್ ಅವರನ್ನು ಮಣಿಸಲು ಅಗಿರಲಿಲ್ಲ. ಕೇರಳದಿಂದ (ಆಲತ್ತೂರ್ ಕ್ಷೇತ್ರ) ಗೆದ್ದಿರುವ ಸಿಪಿಎಂನ ಏಕೈಕ ಸಂಸದ ಕೆ.ರಾಧಾಕೃಷ್ಣನ್ ಅವರಿಗೆ ಪಕ್ಷವು ₹ 37.40 ಲಕ್ಷ ನೀಡಿದೆ.

ಎಡಪಕ್ಷದಿಂದ ಗೆದ್ದಿರುವ ಇತರ ಮೂವರು ಸಂಸದರಿಗೂ ಚುನಾವಣಾ ವೆಚ್ಚಕ್ಕೆ, ಮುಕೇಶ್ ಅವರಿಗಿಂತ ಕಡಿಮೆ ಹಣ ನೀಡಲಾಗಿದೆ. ಆರ್.ಸಚ್ಚಿದಾನಂದನ್ (ತಮಿಳುನಾಡಿನ ದಿಂಡಿಗಲ್ ಕ್ಷೇತ್ರ) ಅವರಿಗೆ ₹ 70.63 ಲಕ್ಷ, ಎಸ್.ವೆಂಕಟೇಶನ್ (ತಮಿಳುನಾಡಿನ ಮದುರೈ) ಅವರಿಗೆ ₹ 36.99 ಲಕ್ಷ ಹಾಗೂ ಅಮ್ರಾ ರಾಮ್ (ರಾಜಸ್ಥಾನದ ಸೀಕರ್) ಅವರಿಗೆ ₹ 10 ಲಕ್ಷ ನೀಡಿದೆ.

ಮುಂದುವರಿದ ಪ್ರತಿಭಟನೆ


ಮುಕೇಶ್

ಮುಕೇಶ್ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ, ಶುಕ್ರವಾರ ಕೇರಳ ದಾದ್ಯಂತ ಪ್ರತಿಭಟನೆ ಮುಂದುವರಿದವು. ರಾಜೀನಾಮೆ ನೀಡದಿದ್ದರೆ, ಸಿಪಿಎಂ ರಾಜ್ಯ ಮುಖ್ಯ ಕಚೇರಿಯಾದ ಎಕೆಜಿ ಭವನದ ಮುಂದೆ ಧರಣಿ ನಡೆಸಲಾಗುವುದು ಎಂದು ಮಹಿಳಾ ಹೋರಾಟಗಾರರು ಎಚ್ಚರಿಕೆ ನೀಡಿದ್ದಾರೆ.

ಮುಜುಗರ: ಲೈಂಗಿಕ ದೌರ್ಜನ್ಯದ ಆರೋಪಿ ನಟ ಎಂ.ಮುಕೇಶ್ ಅವರು ಶಾಸಕರಾಗಿ ಮುಂದುವರಿಯುತ್ತಿರುವ ಕುರಿತಂತೆ ಸಿಪಿಎಂ ಪಕ್ಷದ ಒಳಗೆ ಭಿನ್ನಾಭಿಪ್ರಾಯ ಮೂಡಿದೆ. ಪಕ್ಷದ ನಾಯಕಿ ಬೃಂದಾ ಕಾರಟ್, ಮುಕೇಶ್ ವಿರುದ್ಧ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದು, ಕೆಲವು ಮುಖಂಡರು ಬಹಿರಂಗವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ.

ಎನ್‌ಐಟಿ: ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ತಿರುಚಿರಾಪಳ್ಳಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಎನ್‌ಐಟಿ) ಹಾಸ್ಟೆಲ್‌ನಲ್ಲಿ ಎಲೆಕ್ಟ್ರಿಷಿಯನ್‌ವೊಬ್ಬ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಹಾಸ್ಟೆಲ್‌ನ ವಾರ್ಡನ್ ಈ ಘಟನೆಗೆ ಸಂತ್ರಸ್ತೆಯನ್ನೇ ದೂರಿದ್ದಾರೆ ಎಂದು ಆರೋಪಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ.

ಆರೋಪಿ ಎಲೆಕ್ಟ್ರಿಷಿಯನ್, ಕೆಟ್ಟುಹೋಗಿದ್ದ ವೈ–ಫೈ ಸಂಪರ್ಕವನ್ನು ಸರಿಪಡಿಸಲು ಗುರುವಾರ ಬೆಳಿಗ್ಗೆ ವಿದ್ಯಾರ್ಥಿನಿಯ ಕೊಠಡಿಗೆ ಬಂದಿದ್ದಾನೆ. ವಿದ್ಯಾರ್ಥಿನಿಯ ಎದುರು ಬಟ್ಟೆ ಬಿಚ್ಚಿ ಹಸ್ತಮೈಥುನ ಮಾಡಿಕೊಂಡು ಅಸಭ್ಯವಾಗಿ ವರ್ತಿಸಿದ್ದಾನೆ ಎಂದು ಆರೋಪಿಸಲಾಗಿದೆ. ಸಂತ್ರಸ್ತೆಯು ಕೊಠಡಿಯಿಂದ ಹೊರಬಂದು ಇತರರಿಗೆ ವಿಷಯ ತಿಳಿಸಿದ್ದಾರೆ. ವಿದ್ಯಾರ್ಥಿನಿಯ ದೂರನ್ನು ಆಧರಿಸಿ ತಿರುಚಿರಾಪಳ್ಳಿ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಾರ್ಡನ್ ವಿರುದ್ಧ ಪ್ರತಿಭಟನೆ: 'ವಿದ್ಯಾರ್ಥಿನಿ ಧರಿಸಿದ್ದ ಬಟ್ಟೆಯ ಬಗ್ಗೆ ಟೀಕಿಸಿರುವ ವಾರ್ಡನ್, ಘಟನೆಗೆ ಆಕೆಯನ್ನೇ ದೂರಿದ್ದಾರೆ' ಎಂದು ವಿದ್ಯಾರ್ಥಿಯೊಬ್ಬ ತಿಳಿಸಿದ್ದಾರೆ. ಮಾತ್ರವಲ್ಲ, ಈ ಘಟನೆಯನ್ನು 'ದೊಡ್ಡ ವಿವಾದ'ವಾಗಿ ಮಾಡಬೇಡ ಎಂದೂ ಆಕೆಗೆ ಹೇಳಿದ್ದಾಗಿ ಆರೋಪಿಸಲಾಗಿದೆ.

ವಾರ್ಡನ್ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದ ವಿದ್ಯಾರ್ಥಿಗಳು ಗುರುವಾರ ರಾತ್ರಿಯಿಡೀ ಪ್ರತಿಭಟನೆ ನಡೆಸಿದರು. ಎನ್‌ಐಟಿ ನಿರ್ದೇಶಕರ ನಿವಾಸದ ಬಳಿಯೂ ಧರಣಿ ಕುಳಿತರು. ವಾರ್ಡನ್ ಕ್ಷಮೆಯಾಚಿಸಬೇಕು ಮತ್ತು ಹಾಸ್ಟೆಲ್ ಆವರಣದಲ್ಲಿ ಭದ್ರತಾ ವ್ಯವಸ್ಥೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಶುಕ್ರವಾರ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿದ ತಿರುಚಿರಾಪಳ್ಳಿ ಎಸ್‌ಪಿ ವಿ.ವರುಣ್‌ಕುಮಾರ್ ಅವರು ವಿದ್ಯಾರ್ಥಿಗಳ ಬೇಡಿಕೆಗಳನ್ನು ಎನ್‌ಐಟಿ ಆಡಳಿತ ಮಂಡಳಿಯ ಗಮನಕ್ಕೆ ತಂದು ಅವುಗಳನ್ನು ಈಡೇರಿಸುವ ಭರವಸೆ ನೀಡಿದರು. ಆ ಬಳಿಕ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟರು.

ಬಾಲಕಿಯರ ಹಾಸ್ಟೆಲ್‌ಗೆ ಭದ್ರತೆ ಒದಗಿಸುವ ಏಜೆನ್ಸಿಯ ಕಡೆಯಿಂದ ಲೋಪ ಆಗಿರುವುದು ಗಮನಕ್ಕೆ ಬಂದಿದೆ ಎಂದು ವರುಣ್‌ಕುಮಾರ್ ತಿಳಿಸಿದರು. 'ಹಾಸ್ಟೆಲ್‌ನ ಸಿ.ಸಿ.ಟಿ.ವಿ ಕ್ಯಾಮೆರಾ ಕಾರ್ಯನಿರ್ವಹಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ದೂರಿದ್ದಾರೆ. ಕೂಡಲೇ ಸರಿಪಡಿಸುವಂತೆ ಸಂಬಂಧಪಟ್ಟವರಿಗೆ ತಿಳಿಸಿದ್ದೇವೆ' ಎಂದರು.

ಕವಿತಾಗೆ ಜಾಮೀನು ಕುರಿತ ಹೇಳಿಕೆ: ತೆಲಂಗಾಣ ಸಿ.ಎಂ ಕ್ಷಮೆ

ಪ್ರಜಾವಾಣಿ ವಾರ್ತೆ


ರೇವಂತ ರೆಡ್ಡಿ

ಹೈದರಾಬಾದ್: ಬಿಆರ್‌ಎಸ್ ಪಕ್ಷದ ನಾಯಕಿ ಕೆ. ಕವಿತಾ ಅವರಿಗೆ ಜಾಮೀನು ಸಿಕ್ಕ ಬಳಿಕ ನೀಡಿದ್ದ ಹೇಳಿಕೆಗಾಗಿ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

'ಸುಪ್ರೀಂ ಕೋರ್ಟ್ ಕುರಿತು ತಮಗೆ ಹೆಚ್ಚಿನ ಗೌರವವಿದೆ' ಎಂದಿದ್ದಾರೆ.

'ನನ್ನ ಹೇಳಿಕೆಯು ಮಾಧ್ಯಮಗಳಲ್ಲಿ ತಪ್ಪಾಗಿ ಬಿಂಬಿತವಾಗಿದೆ. ನ್ಯಾಯಾಂಗ ಕುರಿತು ನನಗೆ ಹೆಚ್ಚಿನ ಗೌರವ ಮತ್ತು ನಂಬಿಕೆ ಇದೆ. ಕೋರ್ಟ್‌ನ ಬದ್ಧತೆ ಹಾಗೂ ಸ್ವಾತಂತ್ರ್ಯವನ್ನು ಪ್ರಶ್ನಿಸಿದ್ದೇನೆ ಎಂಬಂತೆ ನನ್ನ ಹೇಳಿಕೆ ತಪ್ಪುಕಲ್ಪನೆಗೆ ಆಸ್ಪದವಾಗಿದೆ. ಇದಕ್ಕಾಗಿ ನಾನು ಬೇಷರತ್ತಾಗಿ ಕ್ಷಮೆಯಾಚಿಸುತ್ತೇನೆ' ಎಂದು 'ಎಕ್ಸ್'ನಲ್ಲಿ ಅವರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಕವಿತಾ ಅವರಿಗೆ ತ್ವರಿತಗತಿಯಲ್ಲಿ ಜಾಮೀನು ಸಿಕ್ಕಿದೆ ಎಂದು ಅವರು, ಅಸಮಾಧಾನದಿಂದ ಕೆಲ ಮಾತು ಆಡಿದ್ದರು. ಇದಕ್ಕೆ ಸುಪ್ರೀಂ ಕೋರ್ಟ್‌ನ ಮೂವರು ಸದಸ್ಯರ ಪೀಠವು ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

ಅಸ್ಸಾಂ ವಿಧಾನಸಭೆ: ನಮಾಜ್ ವಿರಾಮ ರದ್ದು

87 ವರ್ಷದ ಹಳೆ ನಿರ್ಧಾರಕ್ಕೆ ತಿಲಾಂಜಲಿ; ಮುಸ್ಲಿಂ ವಿರೋಧಿ ನಡೆ – ವಿರೋಧ ಪಕ್ಷಗಳ ಟೀಕೆ

ಗುವಾಹಟಿ (ಪಿಟಿಐ): 'ಅಸ್ಸಾಂ ವಿಧಾನಸಭೆಯ ಅಧಿವೇಶನದ ಅವಧಿಯಲ್ಲಿ ಶುಕ್ರವಾರದ ದಿನ ಮುಸ್ಲಿಂ ಶಾಸಕರಿಗೆ 'ನಮಾಜ್' ಸಲ್ಲಿಸಲು ನೀಡಲಾಗುತ್ತಿದ್ದ ಎರಡು ಗಂಟೆಗಳ ವಿರಾಮದ ಅವಧಿಯನ್ನು ರದ್ದುಗೊಳಿಸಲಾಗಿದೆ' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ತಿಳಿಸಿದ್ದಾರೆ.

'ಮುಂದಿನ ಅಧಿವೇಶನದಿಂದಲೇ ಈ ನಿಯಮ ಅನ್ವಯವಾಗಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಎರಡು ಗಂಟೆ ಕಾಲ ನೀಡುತ್ತಿದ್ದ 'ಜುಮ್ಮಾ' ವಿರಾಮವನ್ನು ರದ್ದುಗೊಳಿಸಿ, ಅಧಿವೇಶನದಲ್ಲಿ ಹೆಚ್ಚಿನ ಉತ್ತಮ ವಿಷಯಗಳ ಚರ್ಚೆಗೆ ಆದ್ಯತೆ ನೀಡುವ ಮೂಲಕ ವಸಹಾತುಶಾಹಿ ಕಾಲದಲ್ಲಿ ಜಾರಿಯಲ್ಲಿದ್ದ ನಿರ್ಧಾರವನ್ನು ಕೊನೆಗೊಳಿಸಲಾಗಿದೆ. 1937ರಲ್ಲಿ ಮುಸ್ಲಿಂ ಲೀಗ್‌ನ ಸೈಯದ್ ಸಾದುಲ್ಲಾ ಅವಧಿಯಲ್ಲಿ ಈ ಪದ್ಧತಿಯನ್ನು ಜಾರಿಗೆ ತರಲಾಗಿತ್ತು' ಎಂದು ಶರ್ಮಾ ಅವರು 'ಎಕ್ಸ್' ಮೂಲಕ ತಿಳಿಸಿದ್ದಾರೆ.

'ಗೌರವಾನ್ವಿತ ಸ್ಪೀಕರ್ ಬಿಸ್ವಜಿತ್ ದೈಮಾರಿ ಹಾಗೂ ಶಾಸಕರು ಸೇರಿ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದ್ದಾರೆ' ಎಂದು ಮುಖ್ಯಮಂತ್ರಿ ಶರ್ಮಾ ಹೇಳಿದ್ದಾರೆ.


ಹಿಮಂತ ಬಿಸ್ವ ಶರ್ಮಾ

ಹಿಂದಿನ ಬೇಸಿಗೆ ಅಧಿವೇಶನದಲ್ಲಿ ಶುಕ್ರವಾರ ಎರಡು ತಾಸುಗಳ ಕಾಲ ವಿರಾಮ ನೀಡಲಾಗಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ವಿರಾಮದ ನಿರ್ಧಾರ ಕೈಬಿಡಲು ವಿಧಾನಸಭೆಯ ನೀತಿ ಸಮಿತಿಯು ಅವಿರೋಧವಾಗಿ ಒಪ್ಪಿಕೊಂಡಿದೆ' ಎಂದು ಈಗಾಗಲೇ ಅಧಿಕೃತ ನಿರ್ಧಾರದ ಪ್ರಕಟಣೆಯನ್ನು ಎಲ್ಲರಿಗೂ ಕಳುಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

1937ರಲ್ಲಿ ಅಸ್ಸಾಂ ವಿಧಾನಸಭೆಯಲ್ಲಿ ಈ ಪದ್ಧತಿ ಜಾರಿಗೆ ಬಂದಿತ್ತು. ಶುಕ್ರವಾರ 11 ಗಂಟೆಗೆ ಅಧಿವೇಶನ ಸ್ಥಗಿತಗೊಳಿಸಿ, ಮುಸ್ಲಿಂ ಶಾಸಕರಿಗೆ ನಮಾಜ್ ಮಾಡಲು ಅವಕಾಶ ನೀಡಲಾಗುತ್ತಿತ್ತು. ಮಧ್ಯಾಹ್ನ ಊಟದ ನಂತರ ಮತ್ತೆ ಅಧಿವೇಶನ ನಡೆಯುತ್ತಿತ್ತು.

ಮುಸ್ಲಿಂ ವಿರೋಧಿ ನಡೆ: ರಾಜಕೀಯ ಲಾಭಕ್ಕಾಗಿ ಬಿಜೆಪಿ ನೇತೃತ್ವದ ಸರ್ಕಾರವು ಈ ನಿರ್ಧಾರ ತೆಗೆದುಕೊಂಡಿದೆ ಎಂದು ಪ್ರಮುಖ ಪ್ರತಿಪಕ್ಷ ಎಐಯುಡಿಎಫ್ ಆರೋಪಿಸಿದೆ.

ಸಲಹೆಗಾರ ಬಂಧನ

ಪ್ರಜಾವಾಣಿ ವಾರ್ತೆ

ಮುಂಬೈ: ಛತ್ರಪತಿ ಶಿವಾಜಿ ಮಹಾರಾಜ್ ಕಂಚಿನ ಪ್ರತಿಮೆ ಕುಸಿದ ಘಟನೆಗೆ ಸಂಬಂಧಿಸಿದಂತೆ ನಿರ್ಮಾಣ ಸಲಹೆಗಾರ ಚೇತನ್ ಪಾಟೀಲ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಶಿಲ್ಪಿ ಜಯದೀಪ್ ಅಪ್ಟೆ ತಲೆಮರೆಸಿ ಕೊಂಡಿದ್ದಾರೆ.

ಮಾಲ್ವಾನ್‌ನ ರಾಜ್‌ಕೋಟ್ ಕೋಟೆಯಲ್ಲಿ ಅನಾವರಣಗೊಳಿಸಿದ್ದ ಪ್ರತಿಮೆ ಕುಸಿದ ಪ್ರಕರಣ ದಾಖಲಾಗಿತ್ತು.


ಪಾಟೀಲ ಅವರನ್ನು ಕೊಲ್ಹಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇಬ್ಬರು ಶಂಕಿತರ ಪತ್ತೆಗೆ ವಿಶೇಷ ತಂಡ ಶೋಧ ನಡೆಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫಾರೂಕ್, ಮೆಹಬೂಬಾ, ಆಜಾದ್ ಸ್ಪರ್ಧೆ ಇಲ್ಲ

ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆ; ಮೂವರು ಮಾಜಿ ಸಿ.ಎಂ.ಗಳಿಂದ ಅಚ್ಚರಿ ನಿರ್ಧಾರ

ಪ್ರಜಾವಾಣಿ ವಾರ್ತೆ


ಫಾರೂಕ್ ಅಬ್ದುಲ್ಲಾ


ಗುಲಾಮ್ ನಬಿ ಆಜಾದ್


ಮೆಹಬೂಬಾ ಮುಫ್ತಿ

ಶ್ರೀನಗರ: ಕೇಂದ್ರಾಡಳಿತ ಪ್ರದೇಶ ಜಮ್ಮು–ಕಾಶ್ಮೀರ ವಿಧಾನಸಭೆಗೆ ನಡೆಯಲಿರುವ ಚುನಾವಣೆಗಳಲ್ಲಿ ಮೂವರು ಮಾಜಿ ಮುಖ್ಯಮಂತ್ರಿಗಳು ಸ್ಪರ್ಧಿಸದಿರಲು ತೀರ್ಮಾನಿಸಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ, ಪಿಡಿಪಿಯ ಮೆಹಬೂಬಾ ಮುಫ್ತಿ ಹಾಗೂ ಡೆಮಾಕ್ರಟಿಕ್ ಪ್ರೋಗ್ರೆಸ್ಸಿವ್ ಆಜಾದ್ ಅಲಯನ್ಸ್‌ನ (ಡಿಪಿಎಪಿ) ಗುಲಾಮ್ ನಬಿ ಆಜಾದ್ ಅವರು, 19080 ರಿಂದ 2018ರ ನಡುವೆ, ಈ ಹಿಂದಿನ ಜಮ್ಮು–ಕಾಶ್ಮೀರ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆದರೆ, ಈ ಮೂವರು ಹಿರಿಯ ರಾಜಕಾರಣಿಗಳು ಈ ಬಾರಿಯ ಚುನಾವಣೆಯಿಂದ ದೂರ ಉಳಿಯಲು ನಿರ್ಧರಿಸಿರುವುದು ಅಚ್ಚರಿಗೆ ಕಾರಣವಾಗಿದೆ.

ಈ ದಿಢೀರ್ ರಾಜಕೀಯ ಬೆಳವಣಿಗೆಯಿಂದಾಗಿ, ನ್ಯಾಷನಲ್ ಕಾನ್ಫರೆನ್ಸ್ ಮುಖಂಡ ಹಾಗೂ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಏಕೈಕ ಸ್ಪರ್ಧಿ ಎನಿಸಿದ್ದಾರೆ.

ವಯಸ್ಸು, ವಯೋಸಹಜ ಆರೋಗ್ಯ ಸಮಸ್ಯೆಗಳು ಹಾಗೂ ಪಕ್ಷದ ಚುಕ್ಕಾಣಿಯನ್ನು ಯುವಕರಿಗೆ ನೀಡಬೇಕು ಎಂಬ ಕಾರಣಗಳಿಂದಾಗಿ, ಫಾರೂಕ್ ಸ್ಪರ್ಧೆ ಮಾಡದಿರಲು ನಿರ್ಧರಿಸಬಹುದು ಎನ್ನಲಾಗುತ್ತಿದೆ.

370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ತೆಗೆದು ಹಾಕಿದ ನಂತರ, ಮುಖ್ಯಮಂತ್ರಿ ಸ್ಥಾನಕ್ಕೆ ಯಾವುದೇ ಅಧಿಕಾರ ಇರುವುದಿಲ್ಲ ಎಂದಿದ್ದ ಮೆಹಬೂಬಾ ಮುಫ್ತಿ, ವಿಧಾನಸಭೆ ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳುತ್ತಾ ಬಂದಿದ್ದಾರೆ.

'ಒಂದು ವೇಳೆ ನಾನು ಗೆದ್ದು, ಮುಖ್ಯಮಂತ್ರಿಯಾದರೂ, ಜಮ್ಮು–ಕಾಶ್ಮೀರಕ್ಕೆ ಸಂಬಂಧಿಸಿ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳನ್ನು ಈಡೇರಿಸಲು ಆಗುವುದಿಲ್ಲ' ಎಂದೂ ಅವರು ಹೇಳಿದ್ದು ಗಮನಾರ್ಹ.

ಕಾಂಗ್ರೆಸ್‌ನಿಂದ ಹೊರಬಂದು, 2022ರಲ್ಲಿ ಡಿಪಿಎಪಿ ಪಕ್ಷ ಸ್ಥಾಪಿಸಿರುವ ಆಜಾದ್ ಅವರು ಕೂಡ ಈ ಬಾರಿ ಕಣಕ್ಕಿಳಿಯದಿರಲು ನಿರ್ಧರಿಸಿದ್ದಾರೆ. ಹೊಸದಾಗಿ ಕಟ್ಟಿರುವ ರಾಜಕೀಯ ಪಕ್ಷವನ್ನು ನೆಲೆಯೂರುವಂತೆ ಮಾಡುವುದು ಕಷ್ಟದ ಕೆಲಸ ಎಂಬುದನ್ನು ಅವರೂ ಒಪ್ಪಿಕೊಂಡಿದ್ದಾರೆ.

ಒಮರ್, ಮುಫ್ತಿ ಜಟಾಪಟಿ ಜೋರು

ಶ್ರೀನಗರ: ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿರುವಂತೆಯೇ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ನಾಯಕ ಒಮರ್ ಅಬ್ದುಲ್ಲಾ ಹಾಗೂ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ನಡುವಿನ ವಾಗ್ಯುದ್ಧವೂ ಜೋರಾಗುತ್ತಿದೆ.

ಜಮ್ಮು–ಕಾಶ್ಮೀರದ ಪ್ರಸಕ್ತ ಪರಿಸ್ಥಿತಿಗೆ ಪಿಡಿಪಿ ವಿರುದ್ಧ ಎನ್‌ಸಿ ದೂರುತ್ತಿದ್ದರೆ, ಎನ್‌ಸಿ ಕಾರಣ ಎಂದು ಪಿಡಿಪಿ ವಾಗ್ದಾಳಿ ನಡೆಸುತ್ತಿದೆ.

ಅಬ್ದುಲ್ಲಾಗಳು ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ ಎಂದು ಟೀಕಿಸಿದ್ದ ಮೆಹಬೂಬಾ ಮುಫ್ತಿ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿರುವ ಒಮರ್, 'ನಮ್ಮ ವಿರುದ್ಧ ಕುಟುಂಬ ರಾಜಕಾರಣದ ಆರೋಪ ಮಾಡುತ್ತಿರುವವರು ತಮ್ಮ ಸಂಬಂಧಿಕರನ್ನೇ ಚುನಾವಣಾ ಕಣಕ್ಕಿಳಿಸಿದ್ದಾರೆ' ಎಂದು ಹರಿಹಾಯ್ದಿದ್ದಾರೆ.

'ಅವರು ನಿಜವಾಗಿಯೂ ಕುಟುಂಬ ರಾಜಕಾರಣದ ವಿರುದ್ಧ ಇದ್ದಲ್ಲಿ, ತಮ್ಮ ಕುಟುಂಬದವರ ಬದಲಾಗಿ ಬೇರೆಯವರಿಗೆ ಅವಕಾಶ ನೀಡಬೇಕಿತ್ತು' ಎಂದು ಮೆಹಬೂಬಾ ವಿರುದ್ಧ ಪರೋಕ್ಷ ಟೀಕೆ ಮಾಡಿದ್ದಾರೆ.

ಮೆಹಬೂಬಾ ಅವರ ಪುತ್ರಿ ಇಲ್ತಿಜಾ ಅವರು ಪಿಡಿಪಿ ಅಭ್ಯರ್ಥಿಯಾಗಿದ್ದಾರೆ.

ತಮ್ಮ ವಿರುದ್ಧದ ಟೀಕೆಗಳಿಗೆ ಪ್ರತಿಕ್ರಿಯಿಸಿರುವ ಮೆಹಬೂಬಾ, 'ಪ್ರತಿ ಬಾರಿಯೂ ಚುನಾವಣೆಗಳ ಸಮಯದಲ್ಲಿ ಎನ್‌ಸಿ ತನ್ನ ನಿಲುವುಗಳನ್ನು ಬದಲಿಸುತ್ತಾ ಬಂದಿದೆ. ತಮ್ಮ ರಾಜಕೀಯ ಅನುಕೂಲಕ್ಕೆ ತಕ್ಕಂತೆ ಕೆಲವೊಮ್ಮೆ ಚುನಾವಣೆಗಳನ್ನು 'ಹರಾಮ್' ಎಂದರೆ, ಕೆಲವು ಬಾರಿ 'ಹಲಾಲ್' ಎಂಬುದಾಗಿ ಕರೆಯಲಾಗುತ್ತಿತ್ತು' ಎಂದು ಒಮರ್ ಅವರಿಗೆ ತಿರುಗೇಟು ನೀಡಿದ್ದಾರೆ.

ಶಿರಬಾಗಿ ಕ್ಷಮೆ ಕೋರುವೆ: ಮೋದಿ

ಒಂದನೇ ಪುಟದಿಂದ...

ಇದೇ ಸಂದರ್ಭದಲ್ಲಿ ಅವರು, ಹಿಂದುತ್ವದ ನಾಯಕರಾಗಿದ್ದ ವೀರ ಸಾವರ್ಕರ್ ಮೇಲೆ ನಿರಂತರವಾಗಿ ವಾಗ್ದಾಳಿ ನಡೆಸುವ ಕಾಂಗ್ರೆಸ್ ಪಕ್ಷದವರು ಅದಕ್ಕಾಗಿ, ಕ್ಷಮೆಯನ್ನೇ ಕೋರುವುದಿಲ್ಲ ಎಂದು ಹರಿಹಾಯ್ದರು.

ಮಾಲ್ವಾನ್‌ನ ರಾಜ್‌ಕೋಟ್ ಕೋಟೆಯಲ್ಲಿ ನಿರ್ಮಿಸಲಾಗಿದ್ದ ಛತ್ರಪತಿ ಶಿವಾಜಿ ಅವರ ಪ್ರತಿಮೆ ಕುಸಿದ ಹಿನ್ನೆಲೆಯಲ್ಲಿ ವಿರೋಧಪಕ್ಷಗಳು ತೀವ್ರ ಟೀಕಾಪ್ರಹಾರ ನಡೆಸಿರುವಂತೆಯೇ, ಪ್ರಧಾನಿ ಕ್ಷಮೆಯ ಮಾತು ಆಡಿದ್ದಾರೆ.

'ನಮ್ಮ ಚಿಂತನೆ ಭಿನ್ನವಾಗಿವೆ. ಆದರೆ, ಅವು ನಾವು ಪೂಜಿಸುವವರಿಗಿಂತ ದೊಡ್ಡದಲ್ಲ. ಕೆಲವರು ನಿರಂತರವಾಗಿ ವೀರ ಸಾವರ್ಕರ್ ಅವರನ್ನು ನಿಂದಿಸುತ್ತಾರೆ. ಆದರೆ, ಅಪಮಾನಿಸಿದ್ದಕ್ಕೆ ಕ್ಷಮೆ ಕೋರಲೂ ಸಿದ್ಧರಿಲ್ಲ' ಎಂದರು. 'ಇಲ್ಲಿಗೆ ಬಂದ ಕೂಡಲೇ ನಾನು ಮಾಡಿದ ಮೊದಲ ಕೆಲಸ ಪ್ರತಿಮೆ ಕುಸಿತ ಘಟನೆಯಿಂದ ನೊಂದವರ ಕ್ಷಮೆಯನ್ನು ಕೇಳಿದ್ದಾಗಿದೆ' ಎಂದರು.

ಪ್ರತಿಮೆ ಕುಸಿತ ಪ್ರಕರಣದ ತನಿಖೆಗೆ ನೌಕಾಪಡೆ ಪ್ರತಿನಿಧಿಗಳು, ತಂತ್ರಜ್ಞರಿರುವ ಸಮಿತಿಯನ್ನು ಸರ್ಕಾರ ರಚಿಸಿದೆ.

'₹ 76 ಸಾವಿರ ಕೋಟಿ ವೆಚ್ಚದಲ್ಲಿ ಆಧುನಿಕ ಬಂದರು ನಿರ್ಮಾಣ'

ಪಾಲ್ಘರ್ (ಪಿಟಿಐ): ವಧಾವನ್ ಬಂದರು ನಿರ್ಮಾಣ ಯೋಜನೆಯನ್ನು ₹ 76 ಸಾವಿರ ಕೋಟಿ ವೆಚ್ಚದಲ್ಲಿ ಜಾರಿಗೊಳಿಸುತ್ತಿದ್ದು, ಇದು ದೇಶದಲ್ಲೇ ಸರಕು ಸಾಗಣೆಯ ಅತಿ ದೊಡ್ಡ ಬಂದರು ಆಗಿರಲಿದೆ ಎಂದು ಪ್ರಧಾನಿ ಹೇಳಿದರು.

ಶಂಕುಸ್ಥಾಪನೆ ಜೊತೆಗೆ 1,560 ಕೋಟಿ ವೆಚ್ಚದ ವಿವಿಧ 219 ಮೀನುಗಾರಿಕೆ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆಯನ್ನು ಅವರು ನೆರವೇರಿಸಿದರು. 'ಶತಮಾನಗಳಿಂದಲೂ ಮಹಾರಾಷ್ಟ್ರ ಅಂತರರಾಷ್ಟ್ರೀಯ ವಹಿವಾಟಿಗೆ ಸಂಪರ್ಕವಾಗಿದೆ' ಎಂದರು.

'ಅಭಿವೃದ್ಧಿ ದೃಷ್ಟಿಯಿಂದ ಈ ದಿನ ಐತಿಹಾಸಿಕವಾದುದು. ನವಭಾರತಕ್ಕೆ ತನ್ನ ಸಾಮರ್ಥ್ಯದ ಅರಿವಿದೆ. ಅದು, ಗುಲಾಮಗಿರಿಯ ಸಂಕೋಲೆಯಿಂದ ಹೊರಬಂದಿದೆ. ಉದ್ದೇಶಿತ ವಧಾವನ್ ಬಂದರಿನಲ್ಲಿ ಅತಿ ದೊಡ್ಡ ಹಡಗುಗಳ ನಿಲುಗಡೆಗೆ ಅವಕಾಶವಿದೆ. ಇದು, ವಿಶ್ವದರ್ಜೆ ಗುಣಮಟ್ಟದ ಸಮುದ್ರಮಾರ್ಗದ ಹೆಬ್ಬಾಗಿಲು ಆಗಲಿದೆ' ಎಂದು ಹೇಳಿದರು.

'ಉದ್ದೇಶಿತ ಬಂದರು, ಅಂತರರಾಷ್ಟ್ರೀಯ ಸಮುದ್ರ ಮಾರ್ಗಗಳಿಗೆ ಸಂಪರ್ಕ ಒದಗಿಸಲಿದ್ದು, ಪ್ರಯಾಣದ ಅಂತರವನ್ನು ತಗ್ಗಿಸಲಿದೆ. ಅತ್ಯಾಧುನಿಕ ತಂತ್ರಜ್ಞಾನ, ಮೂಲಸೌಲಭ್ಯ ಹೊಂದಿರಲಿದೆ' ಎಂದು ಹೇಳಿದರು.

ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್‌ನ ಜಿಯೊ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ, ಗ್ಲೋಬಲ್ ಫಿನ್‌ಟೆಕ್ ಫೆಸ್ಟ್ ಉದ್ಘಾಟನೆಗೆ ಪ್ರಧಾನಿ ಆಗಮಿಸುತ್ತಿದ್ದ ಹಿನ್ನೆಲೆಯಲ್ಲಿ, ಪ್ರತಿಮೆ ಕುಸಿತ ಪ್ರಕರಣ ಖಂಡಿಸಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆಗೆ ಮುಂದಾಗಿದ್ದರು. ಆದರೆ, ಪೊಲೀಸರು ಮುಂಬೈ ನಗರದ ಕಾಂಗ್ರೆಸ್ ಘಟಕದ ಅಧ್ಯಕ್ಷ, ಸಂಸದ ಪ್ರೊ. ವರ್ಷಾ ಗಾಯಕವಾಡ್, ಮಹಾರಾಷ್ಟ್ರ ಘಟಕದ ಕಾರ್ಯಾಧ್ಯಕ್ಷ ನಸೀಂ ಖಾನ್ ಸೇರಿದಂತೆ ಹಲವರನ್ನು ವಶಕ್ಕೆ ಪಡೆದರು.

ಘೋಷ್ ವಿರುದ್ಧ ಮುಂದುವರಿದ ವಿಚಾರಣೆ

ಕೋಲ್ಕತ್ತ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಅವರನ್ನು 14ನೇ ದಿನವಾದ ಶುಕ್ರವಾರವೂ ಸಿಬಿಐ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಘೋಷ್ ಅವರನ್ನು ಒಟ್ಟು 140 ತಾಸಿಗೂ ಹೆಚ್ಚು ಕಾಲ ವಿಚಾರಣೆಗೆ ಗುರಿಪಡಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆಸ್ಪತ್ರೆಯಲ್ಲಿನ ಹಣಕಾಸು ದುರುಪಯೋಗದ ಪ್ರಕರಣದಲ್ಲೂ ಸಿಬಿಐ ವಿಚಾರಣೆ ನಡೆಸುತ್ತಿದೆ. ಸಿಬಿಐನ ವಿವಿಧ ತಂಡಗಳು ತನಿಖೆಯ ಭಾಗವಾಗಿ ಆರ್.ಜಿ.ಕರ್ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿ ಶೋಧಿಸಿದ್ದು, ಕೆಲವರ ವಿಚಾರಣೆಯನ್ನೂ ಮಾಡಿದೆ.

ಆಸ್ಪತ್ರೆಯ ಮೂಲ ಸೌಕರ್ಯ, ಮೃತದೇಹಗಳ ಸಂರಕ್ಷಣೆ, ಮರಣೋತ್ತರ ಪರೀಕ್ಷೆ ಕುರಿತ ಶಿಷ್ಟಾಚಾರಗಳ ಕುರಿತು ಸಿಬಿಐ ತಂಡ ಆಸ್ಪತ್ರೆಯ ಅಧಿಕಾರಿಗಳು ಮತ್ತು ವೈದ್ಯರನ್ನು ತಂಡ ಮಾಹಿತಿ ಪಡೆಯಿತು.

ಅಲ್ಲದೆ ವಿಧಿವಿಜ್ಞಾನ ವಿಭಾಗದ ಮುಖ್ಯಸ್ಥರು ಮತ್ತು ಉಪ ಪ್ರಾಚಾರ್ಯರಾದ ಡಾ. ಸಪ್ತರ್ಷಿ ಚಟರ್ಜಿ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಯನ್ನು ಸಿಬಿಐ ತಂಡ ವಿಚಾರಣೆಗೆ ಒಳಪಡಿಸಿತು.

ಆಸ್ಪತ್ರೆಯ ದಾಸ್ತಾನುಗಳ ಕಟ್ಟಡ, ಎದೆರೋಗಗಳ ವಿಭಾಗ, ತುರ್ತು ಚಿಕಿತ್ಸಾ ವಿಭಾಗದಲ್ಲೂ ತಪಾಸಣೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟೈಟ್ಲರ್ ವಿರುದ್ಧ ಆರೋಪ ನಿಗದಿಗೆ ಆದೇಶ

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆ ಸಂದರ್ಭದಲ್ಲಿ ಉತ್ತರ ದೆಹಲಿಯ ಪುಲ್ ಬಂಗಶ್ ಪ್ರದೇಶದಲ್ಲಿ ನಡೆದ ಮೂವರ ಹತ್ಯೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ಕೊಲೆ ಹಾಗೂ ಇತರ ಅಪರಾಧಗಳ ಆರೋಪ ನಿಗದಿಪಡಿಸಲು ದೆಹಲಿಯ ನ್ಯಾಯಾಲಯ ಶುಕ್ರವಾರ ಆದೇಶಿಸಿದೆ.

'ಆರೋಪಿಯನ್ನು ವಿಚಾರಣೆಗೆ ಒಳಪಡಿಸಲು ಸಾಕಷ್ಟು ಸಾಕ್ಷ್ಯಗಳಿವೆ' ಎಂದು ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ರಾಕೇಶ್ ಸಿಯಾಲ್ ಹೇಳಿದರು.

'ಟೈಟ್ಲರ್ ಅವರು 1984ರ ನವೆಂಬರ್ 1ರಂದು ಬಿಳಿ ಬಣ್ಣದ ಅಂಬಾಸಿಡರ್ ಕಾರಿನಲ್ಲಿ ಪುಲ್ ಬಂಗಶ್ ಗುರುದ್ವಾರದ ಬಳಿ ಬಂದಿದ್ದರು. ಕಾರಿನಿಂದ ಇಳಿದ ಅವರು 'ಸಿಖ್ಖರನ್ನು ಕೊಲ್ಲಿರಿ, ಅವರು ನಮ್ಮ ತಾಯಿಯನ್ನು ಕೊಂದಿದ್ದಾರೆ' ಎಂದು ಹೇಳುವ ಮೂಲಕ ಅಲ್ಲಿದ್ದ ಗುಂಪನ್ನು ಪ್ರಚೋದಿಸಿದ್ದಾರೆ. ಬಳಿಕ ಅಲ್ಲಿ ನಡೆದ ಗಲಭೆಯಲ್ಲಿ ಮೂವರು ಕೊಲ್ಲಲ್ಪಟ್ಟರು' ಎಂದು ಸಾಕ್ಷಿಯೊಬ್ಬರ ಹೇಳಿಕೆಯನ್ನು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಕಾನೂನುಬಾಹಿರವಾಗಿ ಗುಂಪು ಸೇರಿದ್ದು, ಗಲಭೆಗೆ ಪ್ರಚೋದನೆ, ಎರಡು ಗುಂಪುಗಳ ನಡುವೆ ದ್ವೇಷ ಹುಟ್ಟುಹಾಕಿದ್ದು ಮತ್ತು ಅಕ್ರಮ ಪ್ರವೇಶ ಸೇರಿದಂತೆ ವಿವಿಧ ಅಪರಾಧಗಳಲ್ಲಿ ಆರೋಪ ನಿಗದಿಪಡಿಸುವಂತೆ ನ್ಯಾಯಾಲಯ ಆದೇಶಿಸಿತು.


ರಾಂಚಿಯಲ್ಲಿ ಶುಕ್ರವಾರ ಬಿಜೆಪಿ ಸೇರಿದ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್‌ಗೆ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಶುಭ ಕೋರಿದರು

ಜ್ಯೇಷ್ಠೇಶ್ವರ ದೇಗುಲಕ್ಕೆ ದೇವೇಗೌಡರ ಭೇಟಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಎರಡು ದಿನಗಳಿಂದ ಕಾಶ್ಮೀರ ಪ್ರವಾಸದಲ್ಲಿರುವ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು, ಶುಕ್ರವಾರ ಇಲ್ಲಿನ ಶಂಕರಾಚಾರ್ಯ ಬೆಟ್ಟದಲ್ಲಿರುವ ಜ್ಯೇಷ್ಠೇಶ್ವರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ಮಳೆಯ ನಡುವೆಯೇ ಸಿಆರ್‌ಪಿಎಫ್ ಹಾಗೂ ಕಾಶ್ಮೀರ ಪೊಲೀಸರ ನೆರವಿನಿಂದ ಮೆಟ್ಟಿಲು ಹತ್ತಿ ಶಿವನ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ಬಹಳ ಹೊತ್ತು ದೇವಾಲಯದಲ್ಲಿಯೇ ಇದ್ದ ಮಾಜಿ ಪ್ರಧಾನಿ, 'ನನ್ನನ್ನು ಇಲ್ಲಿಗೆ ಶಿವನೇ ಕರೆಸಿಕೊಂಡಿದ್ದಾನೆ. ಈ ಕ್ಷಣ ನನ್ನ ಬದುಕಿನ ಅನನ್ಯ ಕ್ಷಣವಾಗಿದ್ದು, ಶಿವ ದರ್ಶನದಿಂದ ಧನ್ಯನಾದೆ' ಎಂದರು.

'ಇಲ್ಲಿಗೆ ಭೇಟಿ ನೀಡಿ, ಶಿವನ ದರ್ಶನ ಪಡೆಯಬೇಕು ಎಂಬುದು ಜೀವಮಾನದ ಆಸೆಯಾಗಿತ್ತು. ಅದು ಇಂದು ನೆರವೇರಿದೆ' ಎಂದು ಅವರು ಹೇಳಿದರು.


ಶ್ರೀನಗರದ ಶಂಕರಾಚಾರ್ಯ ಬೆಟ್ಟದಲ್ಲಿರುವ ಜ್ಯೇಷ್ಠೇಶ್ವರ ದೇವಾಲಯಕ್ಕೆ ಶುಕ್ರವಾರ ಭೇಟಿ ನೀಡಿ ದರ್ಶನ ಪಡೆದ ಎಚ್.ಡಿ.ದೇವೇಗೌಡ

ಈ ವೇಳೆ ಮಾಜಿ ಪ್ರಧಾನಿಯವರಿಗೆ ಬಿಗಿ ಭದ್ರತೆ ಒದಗಿಸಲಾಗಿತ್ತು.

ಉರಿಯ ಜಲವಿದ್ಯುತ್ ಸ್ಥಾವರಕ್ಕೆ ಗುರುವಾರ ಭೇಟಿ ನೀಡಿದ್ದ ದೇವೇಗೌಡರು, ಇಲ್ಲಿನ ದಾಲ್ ಸರೋವರಕ್ಕೂ ಭೇಟಿ ನೀಡುವ ಕಾರ್ಯಕ್ರಮವಿತ್ತು. ಆದರೆ ಮಳೆಯ ಕಾರಣ ಅಲ್ಲಿಗೆ ಭೇಟಿ ನೀಡಲು ಆಗಲಿಲ್ಲ. ಮಾರ್ಚ್‌ನಲ್ಲಿ ಪುನಃ ಇಲ್ಲಿಗೆ ಭೇಟಿ ನೀಡುವುದಾಗಿ ಅವರು ತಿಳಿಸಿದರು.

ಕೇಂದ್ರ ಜಲ ಆಯೋಗ ಮಾಹಿತಿ

ದೇಶದ ಜಲಾಶಯಗಳಲ್ಲಿ ನೀರು ಸಂಗ್ರಹ ಹೆಚ್ಚಳ

ನವದೆಹಲಿ(ಪಿಟಿಐ): ಕಳೆದ ಕೆಲ ದಿನಗಳಿಂದ ಕೆಲವೆಡೆ ವ್ಯಾಪಕ ಮಳೆ ಬೀಳುತ್ತಿರುವ ಕಾರಣ, ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿನ ಜಲಾಶಯಗಳಲ್ಲಿ ನೀರಿನ ಮಟ್ಟದಲ್ಲಿ ಗಣನೀಯ ಹೆಚ್ಚಳವಾಗಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ, ಜಲಾಶಯಗಳ ನೀರಿನ ಮಟ್ಟದಲ್ಲಿ ಶೇ 126ರಷ್ಟು ಹೆಚ್ಚಳ ದಾಖಲಾಗಿದೆ. ಇದು, ಕಳೆದ 10 ವರ್ಷಗಳ ಸರಾಸರಿಗಿಂತ ಶೇ 119ರಷ್ಟು ಹೆಚ್ಚಳ ಎಂದು ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಹೇಳಿದೆ.

ಆಗಸ್ಟ್ 29ರಂದು ಸಂಗ್ರಹಿಸಿದ ಮಾಹಿತಿಯಂತೆ, ದೇಶದ ಜಲಾಶಯಗಳಲ್ಲಿ 144.333 ಶತಕೋಟಿ ಘನ ಮೀಟರ್(ಬಿಸಿಎಂ) ಇದೆ. ಇದು, ಜಲಾಶಯಗಳ ಒಟ್ಟು ಸಂಗ್ರಹ ಸಾಮರ್ಥ್ಯದ ಶೇ 80ರಷ್ಟಾಗಲಿದೆ ಎಂದು ಆಯೋಗ ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ.


ತುಂಗಭದ್ರಾ ಅಣೆಕಟ್ಟೆ

ದಕ್ಷಿಣ ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡುಗಳಲ್ಲಿನ ಜಲಾಶಯಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಹೆಚ್ಚಳವಾಗಿದೆ. ಈ ರಾಜ್ಯಗಳಲ್ಲಿರುವ ಒಟ್ಟು 43 ಜಲಾಶಯಗಳಲ್ಲಿ 44.771 ಶತಕೋಟಿ ಘನ ಮೀಟರ್‌ನಷ್ಟು ನೀರು ಸಂಗ್ರಹವಾಗಿದೆ. ಇದು ಇವುಗಳ ಒಟ್ಟು ಸಂಗ್ರಹ ಸಾಮರ್ಥ್ಯದ ಶೇ 82ರಷ್ಟಾಗುವುದು ಎಂದು ಆಯೋಗ ಹೇಳಿದೆ.

ಪೂರ್ವ, ಪಶ್ಚಿಮ ಹಾಗೂ ಕೇಂದ್ರ ಭಾಗದ ರಾಜ್ಯಗಳಲ್ಲಿರುವ ಜಲಾಶಯಗಳಲ್ಲಿ ನೀರು ಸಂಗ್ರಹದಲ್ಲಿ ಹೆಚ್ಚಳ ಕಂಡುಬಂದಿದೆ.

ಉತ್ತರದ ರಾಜ್ಯಗಳಾದ ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ರಾಜಸ್ಥಾನದ ಜಲಾಶಯಗಳಲ್ಲಿ ನೀರು ಸಂಗ್ರಹ ಕುಸಿದಿದೆ. ಆಯೋಗ ಮೇಲ್ವಿಚಾರಣೆ ನಡೆಸುವ ಈ ರಾಜ್ಯಗಳ 11 ಜಲಾಶಯಗಳಲ್ಲಿ ಸದ್ಯ 11.866 ಶತಕೋಟಿ ಘನ ಮೀಟರ್‌ನಷ್ಟು ನೀರು ಸಂಗ್ರಹ ಇದೆ. ಇದು, ಎಲ್ಲ ಜಲಾಶಯಗಳ ಒಟ್ಟು ಸಂಗ್ರಹ ಸಾಮರ್ಥ್ಯದ ಶೇ 60ರಷ್ಟಾಗುತ್ತದೆ.

ಪ್ರಮುಖ ಅಂಶಗಳು

- ದೇಶದ ಜಲಾಶಯಗಳಲ್ಲಿನ ನೀರು ಸಂಗ್ರಹ ಒಟ್ಟಾರೆ ಆಶಾದಾಯಕವಾಗಿದೆ
- ಕಳೆದ ವರ್ಷದ ನೀರಿನ ಮಟ್ಟ ಹಾಗೂ ವಾಡಿಕೆ ಮಟ್ಟಕ್ಕಿಂತಲೂ ಹೆಚ್ಚು ನೀರು ಸಂಗ್ರಹ ಇದೆ
- ಗಂಗಾ, ಮಹಾನದಿ, ನರ್ಮದಾ ಮತ್ತು ಗೋದಾವರಿ ನದಿಪಾತ್ರಗಳಲ್ಲಿನ ಜಲಾಶಯಗಳಲ್ಲಿ ವಾಡಿಕೆ ಮಟ್ಟಕ್ಕಿಂತ ಹೆಚ್ಚು ನೀರು ಸಂಗ್ರಹ ಕಂಡುಬಂದಿದೆ
- ಸಿಂಧು, ಪೆನ್ನಾರ್ ಮತ್ತು ಕನ್ಯಾಕುಮಾರಿ ನದಿಗಳ ನಡುವಿನ ಪ್ರದೇಶದಲ್ಲಿನ, ಪೂರ್ವ ದಿಕ್ಕಿಗೆ ಹರಿಯುವ ನದಿಪಾತ್ರಗಳಲ್ಲಿ ಕೊರತೆ ಕಂಡುಬಂದಿದೆ

ಪ್ಯಾರಿಸ್ ಪ್ಯಾರಾಲಿಂಪಿಕ್ಸ್ • ಮನೀಷ್ ನರ್ವಾಲ್‌ಗೆ ಬೆಳ್ಳಿ ಬೆಡಗು • ಮೋನಾ, ಪ್ರೀತಿಗೆ ಕಂಚು

ಸತತ ಎರಡನೇ ಚಿನ್ನ ಗೆದ್ದ ಅವನಿ

ಶತೋಹು (ಪಿಟಿಐ): ನಿಖರ ಗುರಿಯಿಟ್ಟ ಅವನಿ ಲೇಖರಾ ಸತತ ಎರಡನೇ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಸಾಧನೆ ಮಾಡಿದರು.

ಶುಕ್ರವಾರ ನಡೆದ ಮಹಿಳೆಯರ 10 ಮೀ ಏರ್ ರೈಫಲ್ (ಎಸ್ ಎಚ್ 1) ಶೂಟಿಂಗ್ ಸ್ಪರ್ಧೆಯಲ್ಲಿ ಅವರು ಚಿನ್ನದ ಪದಕ ಗೆದ್ದರು. ಸತತ ಎರಡು ಒಲಿಂಪಿಕ್ ಕೂಟಗಳಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಇದೇ ಸ್ಪರ್ಧೆಯಲ್ಲಿ ಭಾರತದ ಮತ್ತೊಬ್ಬ ಶೂಟರ್ ಮೋನಾ ಅಗರವಾಲ್ ಅವರು ಕಂಚಿನ ಪದಕ ಗೆದ್ದರು.

ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲಿ ನಡೆದಿದ್ದ ಪ್ಯಾರಾಲಿಂಪಿಕ್ಸ್‌ನಲ್ಲಿಯೂ ಅವನಿ ಸ್ವರ್ಣ ಸಾಧನೆ ಮಾಡಿದ್ದರು. 22 ವರ್ಷದ ಅವನಿ ಅವರು 249.7 ಅಂಕಗಳನ್ನು ಗಳಿಸಿ ಪ್ರಥಮ ಸ್ಥಾನ ಪಡೆದರು. ಇದರೊಂದಿಗೆ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ (249.6) ಮಾಡಿದ್ದ ದಾಖಲೆಯನ್ನು ಮೀರಿ ನಿಂತರು.

37 ವರ್ಷದ ಮೋನಾ ಅವರು 228.7 ಅಂಕ ಗಳಿಸಿ ಮೂರನೇ ಸ್ಥಾನ ಪಡೆದರು. ಮೋನಾ ಅವರು ಶೂಟಿಂಗ್ ಕ್ರೀಡೆಯನ್ನು ಆಯ್ಕೆ ಮಾಡಿಕೊಳ್ಳುವ ಮುನ್ನ ಶಾಟ್ ಪಟ್, ಪವರ್‌ಲಿಫ್ಟಿಂಗ್ ಮತ್ತು ವೀಲ್‌ಚೇರ್ ವಾಲಿಬಾಲ್‌ನಲ್ಲಿ ಆಡಿದವರು.

ಪ್ಯಾರಾಲಿಂಪಿಕ್ಸ್ ಇತಿಹಾಸದಲ್ಲಿ ಇದೇ ಮೊದಲ ಬಾರಿ ಭಾರತದ ಇಬ್ಬರು ಶೂಟರ್‌ಗಳು ಒಂದೇ ವಿಭಾಗದಲ್ಲಿ ಪದಕ ಜಯಿಸಿದ ಸಾಧನೆ ಮಾಡಿದರು. ಫೈನಲ್‌ನಲ್ಲಿ ಎಂಟು ಸ್ಪರ್ಧಿಗಳು ಇದ್ದರು.

ಅವನಿ ಕಠಿಣ ಹಾದಿ: ಜೈಪುರದ ಅವನಿ ಅವರಿಗೆ ಈ ಬಾರಿಯ ಪ್ಯಾರಾಲಿಂಪಿಕ್ಸ್ ಸ್ಪರ್ಧೆಯ ಹಾದಿ ಸುಗಮವಾಗಿರಲಿಲ್ಲ. ಅನಾರೋಗ್ಯದಿಂದ ಬಳಲಿದ್ದರು. ಕೆಲ ದಿನಗಳ ಹಿಂದೆ ಪಿತ್ತಕೋಶದ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಅದರಿಂದಾಗಿ ಒಂದೂವರೆ ತಿಂಗಳು ವಿಶ್ರಾಂತಿ ಮತ್ತುಪುನಶ್ಚೇತನಕ್ಕೆತೆರಳಬೇಕಾಯಿತು. ಇದರಿಂದಾಗಿ ಅವರ ದೇಹತೂಕದಲ್ಲಿ ತುಸು ಇಳಿಕೆಯೂ ಆಗಿತ್ತು. ಆದರೆ ಎಲ್ಲ ಸಮಸ್ಯೆಗಳ ನಡುವೆಯೂ ಅವರು ದೆಹಲಿಯ ಕರ್ಣಿ ಸಿಂಗ್ ರೇಂಜ್‌ನಲ್ಲಿ ಕಠಿಣ ಅಭ್ಯಾಸ ನಡೆಸಿದ್ದರು. ದೈಹಿಕ ಹಾಗೂ ಮಾನಸಿಕವಾಗಿ ತಾವು ಫಿಟ್ ಆಗಿರುವುದನ್ನು ಈಗ ಚಿನ್ನ ಗೆದ್ದು ಸಾಬೀತುಮಾಡಿದರು.

ಅವರು ರಾಜಸ್ಥಾನ ಸರ್ಕಾರದ ಅರಣ್ಯ ಇಲಾಖೆಯಲ್ಲಿ ಸಹಾಯಕ ಸಂರಕ್ಷಣಾಧಿಕಾರಿಯಾಗಿದ್ದಾರೆ.

'ದೇಶಕ್ಕಾಗಿ ಪದಕ ಜಯಿಸಿರುವುದು ಅಪಾರ ಸಂತಸ ತಂದಿದೆ. ನನ್ನ ತಂಡಕ್ಕೆ ಆಭಾರಿಯಾಗಿರುವೆ. ನನ್ನ ಕೋಚ್‌ಗಳು ಮತ್ತು ಪಾಲಕರು ನೀಡಿದ ಬೆಂಬಲಕ್ಕೆ ಚಿರಋಣಿಯಾದ್ದೇನೆ. ತರಬೇತಿಯ ಸಂದರ್ಭವು ಅತ್ಯಂತ ಸಕಾರಾತ್ಮಕವಾಗಿತ್ತು' ಎಂದು ಅವನಿ ಹೇಳಿದ್ದಾರೆ.

'ಈ ಬಾರಿ ನನ್ನ ಮೇಲೆ ಅಪಾರ ನಿರೀಕ್ಷೆ ಇತ್ತು. ಆ ನಿರೀಕ್ಷೆಗಳೇ ನನಗೆ ಪ್ರೇರಣೆಯಾದವು. ತಾಂತ್ರಿಕ ಕೌಶಲಗಳಲ್ಲಿಯೂ ನಾನು ಬಹಳಷ್ಟು ಸುಧಾರಣೆ ಮಾಡಿಕೊಂಡಿದ್ದೇನೆ' ಎಂದರು.



ಭಾರತದ ಅವನಿ ಲೇಖರಾ (ಚಿನ್ನ) ಮತ್ತು ಮೋನಾ ಅಗರವಾಲ್ (ಕಂಚು)

ಪ್ರೀತಿ ಪಾಲ್ ಕಂಚು–ಮಿಂಚು

ಪ್ಯಾರಿಸ್ (ಪಿಟಿಐ): ಭಾರತದ ಪ್ರೀತಿ ಪಾಲ್ ಅವರು ಪ್ಯಾರಾಲಿಂಪಿಕ್ಸ್ ಅಥ್ಲೆಟಿಕ್ಸ್‌ನ ಟ್ರ್ಯಾಕ್ ವಿಭಾಗದಲ್ಲಿ ಮೊದಲ ಕಂಚಿನ ಪದಕ ಜಯಿಸಿದರು.



ಅವರು ಮಹಿಳೆಯರ 100 ಮೀಟರ್ಸ್ ಓಟ (ಟಿ35) ವಿಭಾಗದಲ್ಲಿ 14.21 ಸೆಕೆಂಡುಗಳಲ್ಲಿ ಗುರಿ ಮುಟ್ಟಿ 3ನೇ ಸ್ಥಾನ ಪಡೆದರು.

1984ರಿಂದ ಇಲ್ಲಿಯವರೆಗೆ ಭಾರತಕ್ಕೆ ಅಥ್ಲೆಟಿಕ್ಸ್‌ನಲ್ಲಿ ಫೀಲ್ಡ್ ಸ್ಪರ್ಧೆಗಳಲ್ಲಿ ಪದಕಗಳು ಒಲಿದಿವೆ. ಆದರೆ ಟ್ರ್ಯಾಕ್‌ನಲ್ಲಿ ಇದೇ ಮೊದಲ ಬಾರಿ ಸಾಧನೆ ಒಲಿದು ಬಂದಿತು. ಉತ್ತರಪ್ರದೇಶದ ಮುಜಾಫರ್‌ನಗರದ ರೈತ ಕುಟುಂಬದ ಪ್ರೀತಿ ಈ ಸಾಧನೆ ಮಾಡಿದರು.

ಹೋದ ಮೇ ತಿಂಗಳಲ್ಲಿ ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಕಂಚು ಗೆದ್ದು ಪ್ಯಾರಾಲಿಂಪಿಕ್ಸ್‌ಗೆ ಪ್ರೀತಿ ಅರ್ಹತೆ ಗಳಿಸಿದ್ದರು.

ಈ ವಿಭಾಗದಲ್ಲಿ ಚೀನಾ ಝೊಉ ಶಿಯಾ (13.58ಸೆ) ಮತ್ತು ಗ್ವಾವೊ ಕಿಂಕಿಯಾನ್ ಅವರು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರು. ಇವರಿಬ್ಬರೂ ಹೋದ ಬಾರಿ ಟೋಕಿಯೊದಲ್ಲಿಯೂ ಚಿನ್ನ ಮತ್ತು ಬೆಳ್ಳಿ ಗೆದ್ದಿದ್ದರು.

ಪ್ರೀತಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಜಾಲತಾಣದ ಮೂಲಕ ಅಭಿನಂದಿಸಿದ್ದಾರೆ.

'ಇದು ನನ್ನ ಕ್ರೀಡಾ ಜೀವನದ ಚೊಚ್ಚಲ ಪ್ಯಾರಾಲಿಂಪಿಕ್ಸ್. ಆದರೂ ಪದಕ ಗೆದ್ದಿದ್ದು ಅಪಾರ ಆನಂದವಾಗಿದೆ. ಟ್ರ್ಯಾಕ್ ವಿಭಾಗದಲ್ಲಿ ದೇಶಕ್ಕೆ ಮೊದಲ ಪದಕ ಜಯಿಸಿಕೊಟ್ಟಿರುವುದು ಹೆಮ್ಮೆಯ ವಿಷಯ' ಎಂದು ಪ್ರೀತಿ ಹೇಳಿದರು.

ಪ್ರೀತಿ ಅವರು 200 ಮೀಟರ್ಸ್ ಓಟದ (ಟಿ 35) ವಿಭಾಗದಲ್ಲಿಯೂ ಭಾಗವಹಿಸುವರು.

ಮನೀಷ್ ನರ್ವಾಲ್‌ಗೆ ಬೆಳ್ಳಿ ಪದಕ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ಮನೀಷ್ ನರ್ವಾಲ್ ಅವರು ಈ ಬಾರಿ ಬೆಳ್ಳಿ ಪದಕ ಗೆದ್ದರು.

ಪುರುಷರ 10 ಮೀ ಏರ್ ಪಿಸ್ತೂಲ್ (ಎಸ್.ಎಚ್ 1) ಫೈನಲ್‌ನಲ್ಲಿ ಎರಡನೇ ಸ್ಥಾನ ಪಡೆದರು. 22 ವರ್ಷದ ಮನೀಷ್ ಅವರು ಒಂದು ಹಂತದಲ್ಲಿ ಚಿನ್ನದ ಪದಕ ಜಯಿಸುವ ಭರವಸೆ ಮೂಡಿಸಿದ್ದರು.

ಮನೀಷ್ ಅವರು 234.9 ಅಂಕಗಳನ್ನು ಗಳಿಸಿದರು. ಅವರನ್ನು ಹಿಂದಿಕ್ಕಿದ ದಕ್ಷಿಣ ಕೊರಿಯಾದ 37 ವರ್ಷದ ಜಿಯಾಂಗ್ಡು ಜೋ ಅವರು 237.4 ಅಂಕ ಗಳಿಸಿ ಚಿನ್ನದ ಪದಕ ಗೆದ್ದರು.



ಚೀನಾದ ಚಾವೋ ಯಾಂಗ್ ಅವರು (214.3) ಕಂಚು ಗಳಿಸಿದರು.

ಕ್ರೀಡಾ ಹಿನ್ನೆಲೆ ಇರುವ ಕುಟುಂಬದಲ್ಲಿ ಜನಿಸಿದ್ದರು ಮನೀಷ್. ಅವರು ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿ ಖೇಲ್ ರತ್ನ ಗೌರವ ಗಳಿಸಿದ್ದಾರೆ.

ಇಲ್ಲಿ ಅವರು ಅರ್ಹತಾ ಸುತ್ತಿನಲ್ಲಿ ಐದನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದ್ದರು.

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮನೀಷ್ 50 ಮೀ ಪಿಸ್ತೂಲ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. ಆದರೆ ಅಲ್ಲಿ 10 ಮೀ ವಿಭಾಗದಲ್ಲಿ ಪದಕ ಜಯಿಸಲು ಸಾಧ್ಯವಾಗಿರಲಿಲ್ಲ. ಇಲ್ಲಿ ಅದು ಸಾಧ್ಯವಾಗಿದೆ' ಎಂದು ಮನೀಷ್ ಅವರ ತಂದೆ ದಿಲ್‌ಭಾಗ್ ಸಂತಸ ವ್ಯಕ್ತಪಡಿಸಿದ್ದಾರೆ.

ದಿಲ್‌ಭಾಗ್ ಅವರು ರಾಜ್ಯಮಟ್ಟದ ಫ್ರೀಸ್ಟೈಲ್ ಕುಸ್ತಿಪಟುವಾಗಿದ್ದರು. ಅವರ ಒಡೆತನದ ಯಂತ್ರ ಉತ್ಪಾದನೆ ಘಟಕವಿದೆ. 2016ರಲ್ಲಿ ಮನೀಷ್ ಶೂಟಿಂಗ್ ಆರಂಭಿಸಿದ್ದರು. ಕೆಲ ವರ್ಷಗಳ ನಂತರ ಕಿರಿಯ ಮಗ ಶಿವಾ ಕೂಡ ಶೂಟಿಂಗ್ ಕ್ರೀಡೆಯಲ್ಲಿ ತರಬೇತಿ ಪಡೆಯಲಾರಂಭಿಸಿದರು.

'ಮನೀಷ್ ಅವರ ಬಲಗೈ ಊನವಾಗಿದೆ. ಆದರೂ ಅವರು ಕ್ರೀಡಾಪಟುವಾಗಬೇಕೆಂಬ ಆಸೆ ನನ್ನದಾಗಿತ್ತು. ಮನೀಷ್‌ಗೆ ಫುಟ್‌ಬಾಲ್ ಬಹಳ ಇಷ್ಟದ ಕ್ರೀಡೆಯಾಗಿತ್ತು. ಆದರೆ ಅಂಗವೈಕಲ್ಯದಿಂದಾಗಿ ಅವರಿಗೆ ಫುಟ್‌ಬಾಲ್ ಸೂಕ್ತವಾಗುತ್ತಿರಲಿಲ್ಲವೆಂದು ಶೂಟಿಂಗ್ ಆಯ್ಕೆ ಮಾಡಿಕೊಂಡರು' ಎಂದು ದಿಲ್‌ಭಾಗ್ ಹೇಳಿದರು.

ಎಸ್‌ಎಚ್ 1 ವಿಭಾಗ

ಪ್ಯಾರಾ ಕ್ರೀಡೆಯಲ್ಲಿ ಎಸ್‌ಎಚ್ 1 ವಿಭಾಗದಲ್ಲಿ ಕಾಲು, ಭುಜ ಮತ್ತು ದೇಹದ ಕೆಳಭಾಗವು ಊನವಾಗಿದ್ದವರು ಸ್ಪರ್ಧಿಸುತ್ತಾರೆ.

ಅವನಿ ಲೇಖರಾ ಅವರು 11 ವರ್ಷ ವಯಸ್ಸಿನಲ್ಲಿ ಕಾರು ಅಪಘಾತದಲ್ಲಿ ಗಾಯಗೊಂಡು ನಡುವಿನ ಕೆಳಭಾಗದಲ್ಲಿ ಸ್ವಾಧೀನ ಕಳೆದು ಕೊಂಡಿದ್ದರು. ಕಂಚು ಗೆದ್ದ ಮೋನಾ ಅಗರವಾಲ್ ಅವರು ಪೊಲಿಯೋ ಸಮಸ್ಯೆಯಿಂದ ಕಾಲುಗಳ ಸ್ವಾಧೀನ ಕಳೆದುಕೊಂಡಿದ್ದಾರೆ.



ಅಮೆರಿಕದ ಓಪನ್ ಟೆನಿಸ್ ಟೂರ್ನಿ ಎರಡನೇ ಸುತ್ತಿನಲ್ಲಿ ಕಾರ್ಲೊಸ್ ಅಲ್ಕರಾಜ್ ಅವರನ್ನು ಸೋಲಿಸಿದ ಡಚ್ ಆಟಗಾರ ಬೊಟಿಕ್ ಫನ್‌ಡ ಶಾನ್‌ಶೋಪ್ ಅವರು ಗುರುವಾರ ಪ್ರೇಕ್ಷಕರತ್ತ ಕೈಬೀಸಿದರು. ಎಪಿ/ ಪಿಟಿಐ ಚಿತ್ರ

ಅಮೆರಿಕ ಓಪನ್: ಸಿನ್ನರ್, ಶ್ವಾಂಟೆಕ್‌ಗೆ ಗೆಲುವು

ಅಲ್ಕರಾಜ್‌ಗೆ ಸೋಲಿನ ಆಘಾತ

ನ್ಯೂಯಾರ್ಕ್ (ಎಪಿ): ಇಗಾ ಶ್ವಾಂಟೆಕ್ ಮತ್ತು ಯಾನಿಕ್ ಸಿನ್ನರ್ ಅವರು ತಮ್ಮ ಅಗ್ರಪಟ್ಟಕ್ಕೆ ತಕ್ಕಂತೆ ಅಧಿಕಾರಯುತ ಆಟದ ಪ್ರದರ್ಶನ ನೀಡಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿಗೆ ದಾಪುಗಾಲಿಟ್ಟರು. ಆದರೆ ಮಾಜಿ ಚಾಂಪಿಯನ್ನರಾದ ಕಾರ್ಲೊಸ್ ಅಲ್ಕರಾಜ್ ಮತ್ತು ನವೊಮಿ ಒಸಾಕಾ ಅವರ ಸವಾಲು ಬೇಗ ಅಂತ್ಯಗೊಂಡಿತು.

ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಬೊಟಿಕ್ ಫನ್‌ಡ ಶಾನ್‌ಶೋಪ್ 6–1, 7–5, 6–4 ರಿಂದ ಮೂರನೇ ಶ್ರೇಯಾಂಕದ ಅಲ್ಕರಾಜ್ ಅವರನ್ನು ಮಣಿಸಿದರು. ಬೊಟಿಕ್ ಅವರು ವಿಶ್ವ ಕ್ರಮಾಂಕದಲ್ಲಿ 74ನೇ ಸ್ಥಾನದಲ್ಲಿದ್ದಾರೆ. ಈ ಸೋಲಿನೊಡನೆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಸ್ಪೇನ್‌ನ ಆಟಗಾರನ ಸತತ 15 ಪಂದ್ಯಗಳ ಗೆಲುವಿನ ಸರಪಣಿ ತುಂಡಾಯಿತು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಶ್ವಾಂಟೆಕ್ ಹೆಚ್ಚಿನ ಪ್ರಯಾಸವಿಲ್ಲದೇ 6–0, 6–1 ರಿಂದ ಅರ್ಹತಾ ಸುತ್ತಿನಿಂದ ಬಂದಿದ್ದ ಜಪಾನ್ ಆಟಗಾರ್ತಿ ಇನಾ ಶಿಬರಹಾ ಅವರನ್ನು ಮಣಿಸಿದರು. 2022ರ ಚಾಂಪಿಯನ್ ಶ್ವಾಂಟೆಕ್ ಕೇವಲ 65 ನಿಮಿಷಗಳಲ್ಲಿ ಪಂದ್ಯ ಮುಗಿಸಿದರು. ಮೊದಲ ಸುತ್ತಿನ ಪಂದ್ಯದ ಎರಡನೇ ಸೆಟ್ ಅನ್ನು ಟೈಬ್ರೇಕ ರ್‌ನಲ್ಲಿ ಗೆಲ್ಲಲು ಅವರು ಇದಕ್ಕಿಂತ ಹೆಚ್ಚು ಸಮಯ (72 ನಿಮಿಷ) ತೆಗೆದುಕೊಂಡಿದ್ದರು!

ಇದಕ್ಕೆ ಮೊದಲು, ಒಂದು ಗಂಟೆ 39 ನಿಮಿಷಗಳವರೆಗೆ ಬೆಳೆದ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಸಿನ್ನರ್ 6–4, 6–2, 6–2 ರಿಂದ ಅಲೆಕ್ಸ್ ಮೈಕೆಲ್ಸನ್ ಅವರನ್ನು ಸೋಲಿಸಿದರು. ಮೊದಲ ಸೆಟ್‌ನಲ್ಲಿ ಒಂದು ಸೆಟ್ ಕಳೆದುಕೊಂಡಿದ್ದ ಸಿನ್ನರ್ ಎರಡನೇ ಸುತ್ತಿನಲ್ಲಿ ಪರದಾಡಲಿಲ್ಲ. ಇಟಲಿಯ ಆಟಗಾನಿಗೆ ಇದು ಈ ಋತುವಿನಲ್ಲಿ ದೊರೆತ 50ನೇ ಜಯ.

ಸಿನ್ನರ್ ಮುಂದಿನ ಸುತ್ತಿನಲ್ಲಿ ಆಸ್ಟ್ರೇಲಿಯಾದ ಕ್ರಿಸ್ಟೋಫರ್‌ಓ 'ಕಾನೆಲ್ ಅವರನ್ನು ಎದುರಿಸಲಿದ್ದಾರೆ.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲೇ ಗುರುವಾರ ರಾತ್ರಿ ನಡೆದ ಇನ್ನೊಂದು ಪಂದ್ಯದಲ್ಲಿ, ಎರಡು ಬಾರಿಯ ಚಾಂಪಿಯನ್ ಒಸಾಕಾ ಫೋರ್‌ಹ್ಯಾಂಡ್ ಹೊಡೆತಗಳಲ್ಲಿ ತಪ್ಪುಗಳನ್ನು ಮಾಡುತ್ತ ಹೊರಬಿದ್ದರು. ಕರೋಲಿನಾ ಮುಚೋವಾ 6–4, 7–5 ರಿಂದ ಜಪಾನ್ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು.

ಇಟಲಿಯ ಆಟಗಾರ್ತಿ ಜಾಸ್ಮಿನ್ ಪಾವೊಲಿನಿ, ಆರನೇ ಶ್ರೇಯಾಂಕದ ಜೆಸಿಕಾ ಪೆಗುಲಾ, 15ನೇ ಶ್ರೇಯಾಂಕದ ಅನ್ನಾ ಕಲಿನ್‌ಸ್ಕಾಯಾ, 16ನೇ ಶ್ರೇಯಾಂಕದ ಲಿಯುಡ್ಮಿಲಾ ಸ್ಯಾಮ್ಸನೋವಾ ಮತ್ತು 18ನೇ ಶ್ರೇಯಾಂಕದ ಡಯಾನಾ ಶ್ನೇಯ್ಡರ್ ಕೂಡ ಮೂರನೇ ಸುತ್ತಿಗೆ ಪ್ರವೇಶಿಸಿದರು.

ಮೆಡ್ವೆಡೇವ್ ಮುನ್ನಡೆ: ಐದನೇ ಶ್ರೇಯಾಂಕದ ಡೇನಿಯಲ್ಮೆ ಡ್ವೆಡೇವ್ ಮತ್ತು ಹತ್ತನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೊರ್ ಅವರೂ ಮುಂದಿನ ಸುತ್ತಿಗೆ ದಾಪುಗಾಲಿಟ್ಟರು. 2021ರಲ್ಲಿ ಇಲ್ಲಿ ಚಾಂಪಿ ಯನ್ ಆಗಿದ್ದ ಮೆಡ್ವೆಡೇವ್ 6-3,6-2, 7-6 (7–5) ರಿಂದ ಫ್ಯಾಬಿಯನ್ ಮರೋಝ್‌ಸನ್ ಅವರನ್ನು ಮಣಿಸಿದರು.

ಶುಕ್ರವಾರ ನಡೆದ ಮಹಿಳೆಯರ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ, ಮಹಿಳಾ ವಿಭಾಗದ ಹಾಲಿ ಚಾಂಪಿಯನ್ ಕೊಕೊ ಗಾಫ್ ಅವರು 3-6, 6-3, 6-3 ರಿಂದ ಎಲಿನಾ ಸ್ವಿಟೊಲಿನಾ (ಉಕ್ರೇನ್) ಅವರನ್ನು ಸೋಲಿಸಿದರು.

ರೋಹನ್–ಎಬ್ಡೆನ್ ಜೋಡಿ ಮುನ್ನಡೆ

ನ್ಯೂಯಾರ್ಕ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯನ್ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಅಮೆರಿಕ್ ಓಪನ್ ಟೆನಿಸ್ ಟೂರ್ನಿ ಎರಡನೇ ಸುತ್ತಿಗೆ ಮುನ್ನಡೆದರು.

ಈ ಜೋಡಿ ಗುರುವಾರ ರಾತ್ರಿ 64 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಸ್ಯಾಂಡರ್ ಅರೆಂಡ್ಸ್– ರಾಬಿನ್ ಹೇಸ್ ಜೋಡಿಯನ್ನು 6–3, 7–5 ರಿಂದ ಸೋಲಿಸಿತು.

ಮಹಾರಾಜ ಟ್ರೋಫಿ: ಫೈನಲ್‌ಗೆ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್.ಆರ್. ಚೇತನ್ ಮತ್ತು ಮಯಂಕ್ ಅಗರವಾಲ್ ಅವರ ಅಬ್ಬರದ ಜೊತೆಯಾಟದ ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮೊದಲ ಸೆಮಿಫೈನಲ್‌ನಲ್ಲಿ ಬೆಂಗಳೂರು ತಂಡವು 9 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಬೆಂಗಳೂರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.ಗುಲ್ಬರ್ಗ ಮಿಸ್ಟಿಕ್ಸ್ ತಂಡವು 19.5 ಓವರ್‌ಗಳಲ್ಲಿ 155 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಗುರಿ ಬೆನ್ನಟ್ಟಿದ ಬೆಂಗಳೂರು 17.1 ಓವರ್‌ಗಳಲ್ಲಿ 1 ವಿಕೆಟ್‌ಗೆ 159 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ಚೇತನ್ (ಔಟಾಗದೆ 89; 51ಎ, 4X9, 6X4) ಮತ್ತು ನಾಯಕ ಮಯಂಕ್ (52; 37ಎ, 4X6, 6X1) ಮೊದಲ ವಿಕೆಟ್ ಜೊತೆಯಾಟದಲ್ಲಿ 124 ರನ್ ಸೇರಿಸಿದರು. ಇದರಿಂದಾಗಿ ತಂಡವು ಜಯದತ್ತ ಸಾಗಿತು.

ಗುಲ್ಬರ್ಗ ತಂಡದ ಆರಂಭಿಕ ಬ್ಯಾಟರ್ ಲವನೀತ್ ಸಿಸೊಡಿಯಾ (41; 20ಎ) ಮತ್ತು ಪ್ರವೀಣ ದುಬೆ (26; 17ಎ) ಅವರಿಬ್ಬರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸಲಿಲ್ಲ.



ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಅಜೇಯ 89 ರನ್ ಗಳಿಸಿದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಚೇತನ್ ಎಲ್. ಆರ್.

ಬೆಂಗಳೂರು ತಂಡದ ಲವೀಶ್, ಖಾನ್, ಕ್ರಾಂತಿಕುಮಾರ್ ಮತ್ತು ಶುಭಾಂಗ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಗುಲ್ಬರ್ಗ ತಂಡವು ಒಂದು ಹಂತದಲ್ಲಿ 81 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು.

ಸಂಕ್ಷಿಪ್ತ ಸ್ಕೋರು: ಗುಲ್ಬರ್ಗ ಮಿಸ್ಟಿಕ್ಸ್: 19.5 ಓವರ್‌ಗಳಲ್ಲಿ 155 (ಲವನೀತ್ ಸಿಸೊಡಿಯಾ 41, ಪ್ರವೀಣ ದುಬೆ 26, ದೇವದತ್ತ ಪಡಿಕ್ಕಲ್ 13, ಮೊಹಸೀನ್ ಖಾನ್ 25ಕ್ಕೆ2, ಲವೀಶ್ ಕೌಶಲ್ 25ಕ್ಕೆ2, ಕ್ರಾಂತಿಕುಮಾರ್ 22ಕ್ಕೆ2, ಶುಭಾಂಗ್ ಹೆಗಡೆ 23ಕ್ಕೆ2) **ಬೆಂಗಳೂರು ಬ್ಲಾಸ್ಟರ್ಸ್:** 17.1 ಓವರ್‌ಗಳಲ್ಲಿ 1 ವಿಕೆಟ್‌ಗೆ 159 (ಎಲ್.ಆರ್. ಚೇತನ್ ಔಟಾಗದೆ 89, ಮಯಂಕ್ ಅಗರವಾಲ್ 52, ಭುವನ್ ರಾಜು ಔಟಾಗದೆ 13, ರಿತೇಶ್ ಭಟ್ಕಳ್ 20ಕ್ಕೆ1) **ಫಲಿತಾಂಶ:** ಬೆಂಗಳೂರು ಬ್ಲಾಸ್ಟರ್ಸ್‌ಗೆ 9 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ಎಲ್.ಆರ್. ಚೇತನ್.


ಇಂದಿನ ಸೆಮಿಫೈನಲ್
ಮೈಸೂರು ವಾರಿಯರ್ಸ್–ಹುಬ್ಬಳ್ಳಿ ಟೈಗರ್ಸ್
ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್ : ಫೈನಲ್‌ಗೆ ಮೈಕೆಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊನೆಯ ಫ್ರೇಮ್‌ನಲ್ಲಿ ತೀವ್ರ ಹೋರಾಟ ಎದುರಿಸಿ ಯಶಸ್ವಿಯಾದ ಪೋಲೆಂಡ್‌ನ ಮೈಕೆಲ್ ಝುಬರ್‌ಸಿಸ್ಕ್, ವಿಶ್ವ ಪುರುಷರ (21 ವರ್ಷದೊಳಗಿನ) ಸ್ನೂಕರ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಶುಕ್ರವಾರ ಇರಾನ್‌ನ ತೀರ್ದಾದ್ ಅಝಾದಿಪೌರ್ ಅವರನ್ನು ಸೋಲಿಸಿ ಫೈನಲ್ ತಲುಪಿದರು.

ಕರ್ನಾಟಕ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಶುಕ್ರವಾರ ನಡೆದ 'ಬೆಸ್ಟ್ ಆಫ್ 9 ಫ್ರೇಮ್‌ಗಳ' ಸೆಮಿಫೈನಲ್‌ನಲ್ಲಿ 13 ವರ್ಷ ವಯಸ್ಸಿನ ಮೈಕೆಲ್ ಅವರು 5–4 ರಿಂದ (24–76, 97 (59)-00, 34–59, 67–47, 58–49, 74–37, 41–88 (88), 46–57, 48–24 ರಿಂದ 20 ವರ್ಷ ವಯಸ್ಸಿನ ಇರಾನ್ ಆಟಗಾರರನ್ನು ಸೋಲಿಸಿದರು.



ಇನ್ನೊಂದು ಸೆಮಿಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ವಿಡೌ ಅವರು 5–3 ಫ್ರೇಮ್‌ಗಳಿಂದ ಥಾಯ್ಲೆಂಡ್‌ನ ಲೊಮ್‌ನೌ ಇಸಾರಂಗ್‌ಕುನ್ ಅವರನ್ನು ಮಣಿಸಿದರು.

ರಾಜ್ಯದ ಈಜುಸ್ಪರ್ಧಿಗಳ ಪಾರಮ್ಯ

ಪ್ರಜಾವಾಣಿ ವಾರ್ತೆ

ಮಂಡ್ಯ: ಕರ್ನಾಟಕದ ಈಜು ಸ್ಪರ್ಧಿಗಳು, ಮೊದಲ ಶಾರ್ಟ್ ಕೋರ್ಸ್ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಶುಕ್ರವಾರ ನಿರೀಕ್ಷೆಯಂತೆ ಸಿಂಹಪಾಲು ಪದಕಗಳನ್ನು ಬಾಚಿಕೊಂಡರು.

ನಗರದ ಪಿಇಟಿ ಅಕ್ವೆಟಿಕ್ ಸೆಂಟರ್‌ನಲ್ಲಿ ನಡೆಯುತ್ತಿರುವ ಕೂಟದಲ್ಲಿ ಮೊದಲ ದಿನ ನಡೆದ 38 ಸ್ಪರ್ಧೆಗಳ ಪೈಕಿ 16ರಲ್ಲಿ ಮೊದಲ ಮೂರೂ ಸ್ಥಾನಗಳನ್ನು ಕರ್ನಾಟಕದ ಸ್ಪರ್ಧಿಗಳೇ ಬಾಚಿಕೊಂಡರು.

ಚಿನ್ನ ಗೆದ್ದ ಕರ್ನಾಟಕದ ಈಜುಪಟುಗಳು: ಬಾಲಕರ ಒಂದನೇ ಗುಂಪು: 50 ಮೀ. ಬಟರ್‌ಫ್ಲೈ: ಶ್ರೀವರ್ಧನ್ ರಾಜಾರಾಮ ಪಾಟೀಲ, ಕಾಲ: 26.65ಸೆ; 100 ಮೀ. ಬ್ರೆಸ್ಟ್‌ಸ್ಟ್ರೋಕ್: ಆಯುಷ್ ಶಿವರಾಜು ಎಂ, ಕಾಲ: 1ನಿ.07.23 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ರಾಘವ್ ಎಸ್, ಕಾಲ: 59.83 ಸೆ.; 200 ಮೀ. ಫ್ರೀಸ್ಟೈಲ್: ಅನಿಕೇತ್ ಭಟ್ ಅಮಡಿ, ಕಾಲ: 1ನಿ.58.44ಸೆ.; 400 ಮೀ. ವೈಯಕ್ತಿಕ ಮೆಡ್ಲೆ: ಸೂರ್ಯ ಜೆ.ಟಿ, ಕಾಲ: 4ನಿ.42.36 ಸೆ.; 800 ಮೀ. ಫ್ರೀಸ್ಟೈಲ್: ಅನಿಕೇತ್ ಭಟ್, ಕಾಲ:- 8ನಿ.40.51ಸೆ.

ಎರಡನೇ ಗುಂಪು: 50 ಮೀ. ಬಟರ್‌ಫ್ಲೈ: ನೈತಿಕ್ ಎನ್., ಕಾಲ: 28.33ಸೆ.; 100 ಮೀ. ಬ್ರೆಸ್ಟ್ ಸ್ಟ್ರೋಕ್: ರೇಯಾನ್ಶ್ ಕಾಂತಿ, ಕಾಲ: 1ನಿ.13.46ಸೆ.–1; 100 ಮೀ. ಬ್ಯಾಕ್‌ಸ್ಟ್ರೋಕ್: ಭವ್ಯೇಶ್ ಸಾಯಿ ಚೌಧುರಿ, ಕಾಲ:1ನಿ.04.13ಸೆ., 200 ಮೀ. ಫ್ರೀಸ್ಟೈಲ್: ದಕ್ಷ ಪ್ರಸಾದ್, ಕಾಲ:2ನಿ.06.64 ಸೆ.; 400 ಮೀ. ಮೆಡ್ಲೆ: ಅಥರ್ವ್ ಪಾಲ್ ಸಿಂಗ್ ರಾಠೋಡ್, ಕಾಲ: 5ನಿ.03.45ಸೆ; 400 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 4ನಿ.23.37ಸೆ.

ಮೂರನೇ ಗುಂಪು: 100 ಮೀ ಬ್ರೆಸ್ಟ್ ಸ್ಟ್ರೋಕ್: ಸಮರ್ಥ ಭಾರದ್ವಾಜ್, ಕಾಲ: 1ನಿ.27.20ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ಆರಿತ್ ಚಂದ್ರಶೇಖರ್, ಕಾಲ: 1ನಿ.18.08 ಸೆ.; 4x50 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 2ನಿ.11.83 ಸೆ.

ಬಾಲಕಿಯರು: ಒಂದನೇ ಗುಂಪು: 50 ಮೀ. ಬಟರ್‌ಫ್ಲೈ: ರಿಶಿಕಾ ಎಂ.ಮಂಗ್ಲೆ, ಕಾಲ: 30.03ಸೆ.; 100 ಮೀ. ಬ್ರೆಸ್ಟ್‌ಸ್ಟ್ರೋಕ್: ಸಮನ್ವಿ ಇ.ಎಸ್., ಕಾಲ: 1ನಿ.21.80 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಜಿ.ಶಾ, ಕಾಲ: 1ನಿ.06.96ಸೆ.; 200 ಮೀ. ಫ್ರೀಸ್ಟೈಲ್: ರಿಶಿಕಾ ಎಂ.ವಿ., ಕಾಲ: 2ನಿ.17.35ಸೆ; 800 ಮೀ. ಫ್ರೀಸ್ಟೈಲ್: ಜನ್ಯಾ ಬಿ.ಎಸ್, ಕಾಲ: 9ನಿ.44.62ಸೆ.; 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 4ನಿ.26.29 ಸೆ. ಎರಡನೇ ಗುಂಪು: 50 ಮೀ. ಬಟರ್‌ಫ್ಲೈ: ಸೋನಾಕ್ಷಿ ಸತ್ಯನಾರಾಯಣ, ಕಾಲ: 31.06 ಸೆ.;100 ಮೀ. ಬ್ರೆಸ್ಟ್‌ಸ್ಟ್ರೋಕ್: ಗಗನಾ ಸಿ.ಎಂ., ಕಾಲ:1ನಿ.20.15 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ಶ್ರವಣಿ ಜಗನ್ನಾಥನ್, ಕಾಲ: 1ನಿ.11.70 ಸೆ.; 200 ಮೀ ಫ್ರೀಸ್ಟೈಲ್: ಶಮನಿ ಗೌಡ ಎಚ್, ಕಾಲ: 2ನಿ.17.27ಸೆ.; 400 ಮೀ. ವೈಯಕ್ತಿಕ ಮೆಡ್ಲೆ: ಸುಮನ್ವಿ ವಿ. ಕಾಲ: 5ನಿ.38.55ಸೆ.; 4x100 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ:4ನಿ.23.37 ಸೆ.

ಮೂರನೇ ಗುಂಪು: 50 ಮೀ. ಬಟರ್‌ಫ್ಲೈ: ಸ್ಮೃತಿ ಮಹೇಶ್, ಕಾಲ: 35.05 ಸೆ.; 100 ಮೀ. ಬ್ರೆಸ್ಟ್‌ಸ್ಟ್ರೋಕ್: ಧೃತಿ ಅಭಿಲಾಷ್, ಕಾಲ: 1ನಿ.30.05 ಸೆ.; 200 ಮೀ. ಫ್ರೀಸ್ಟೈಲ್: ಶರಣ್ಯಾ ಪಿ.ವಿ., ಕಾಲ: 2ನಿ.39.37ಸೆ.; 4x50 ಮೀ. ಫ್ರೀಸ್ಟೈಲ್ ರಿಲೆ: ಕರ್ನಾಟಕ, ಕಾಲ: 2ನಿ.15.10 ಸೆ.

ಡುರಾಂಡ್ ಕಪ್ ಫೈನಲ್ ಇಂದು

ಕೋಲ್ಕತ್ತ (ಪಿಟಿಐ): ಪ್ರಬಲ ಮೋಹನ್ ಬಾಗನ್ ತಂಡ, ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಶನಿವಾರ ನಾರ್ತ್‌ ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಎದುರಿಸಲಿದ್ದು, ದಾಖಲೆಯ 18ನೇ ಪ್ರಶಸ್ತಿಯ ನಿರೀಕ್ಷೆಯಲ್ಲಿದೆ. ನಾರ್ತ್‌ಈಸ್ಟ್ ಯುನೈಟೆಡ್ ಇದೇ ಮೊದಲ ಬಾರಿ ಫೈನಲ್ ತಲುಪಿದೆ.

ಸೆಮಿಫೈನಲ್ ಪಂದ್ಯದ ವೇಳೆ ಗಾಯಾಳಾಗಿರುವ ಸುಭಾಶಿಶ್ ಬೋಸ್ ಅವರ ಅಲಭ್ಯತೆ ಕೋಲ್ಕತ್ತದ ತಂಡಕ್ಕೆ ರಕ್ಷಣಾ ವಿಭಾಗದಲ್ಲಿ ಒಂದಿಷ್ಟು ಚಿಂತೆ ಮೂಡಿಸಿದೆ. ಆದರೆ ಇದು ಗೆಲುವಿಗೆ ಅಡ್ಡಿಬರದು ಎಂಬ ವಿಶ್ವಾಸವನ್ನೂ ಹೊಂದಿದೆ. ಗುಂಪು ಹಂತದಲ್ಲಿ ಒಂದೂ ಗೋಲು ಬಿಟ್ಟುಕೊಡದ ದಾಖಲೆ ಹೊಂದಿದ್ದ ಬಾಗನ್ ಸೆಮಿಫೈನಲ್‌ನಲ್ಲಿ ಬೆಂಗಳೂರು ಎಫ್‌ಸಿ ವಿರುದ್ಧ 0–2 ಗೋಲಿನಿಂದ ಪುಟಿದೆದ್ದು, ಟೈಬ್ರೇಕರ್‌ನಲ್ಲಿ ಪಂದ್ಯ ಗೆದ್ದಿತ್ತು.



ಮೋಹನ್ ಬಾಗನ್ ಸೂಪರ್‌ಜೈಂಟ್ಸ್ ಮತ್ತು ಬೆಂಗಳೂರು ಎಫ್‌ಸಿ ನಡುವಣ ಸೆಮಿಫೈನಲ್ ದೃಶ್ಯ. ಪಿಟಿಐ ಚಿತ್ರ

ಜಾನ್ ಅಬ್ರಹಾಂ ಮಾಲೀಕತ್ವದ ನಾರ್ತ್‌ಈಸ್ಟ್ ತಂಡ ಇನ್ನೊಂದು ಸೆಮಿಫೈನಲ್‌ನಲ್ಲಿ ಶಿಲ್ಲಾಂಗ್ ಲಾಜೊಂಗ್ ಎಫ್‌ಸಿ ಮೇಲೆ 3–0 ಜಯಗಳಿಸಿದೆ. ಪಂದ್ಯ ಆರಂಭ: ಸಂಜೆ 5.30.

ನಾಳೆಯಿಂದ ರಾಜ್ಯ ವುಶು ಕೂಟ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಜಿಲ್ಲಾ ವುಶು ಸಂಸ್ಥೆ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸಹಯೋಗದಲ್ಲಿ ವಿಶ್ವವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 1 ರಿಂದ 4ರವರೆಗೆ 23ನೇ ರಾಜ್ಯ ವುಶು ಕ್ರೀಡಾಕೂಟ ನಡೆಯಲಿದೆ' ಎಂದು ಜಿಲ್ಲಾ ಘಟಕದ ಅಧ್ಯಕ್ಷ ರಾಜು ನಾಯ್ಕರ್ ಹೇಳಿದರು.

'ರಾಜ್ಯದ 500ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸುವರು' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು. ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 9036918771 ಅಥವಾ 9448268009.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್: ಗುಲ್ವೀರ್ ಸಿಂಗ್ ದಾಖಲೆ

ಕರ್ನಾಟಕದ ವಂದನಾಗೆ ಕಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕದ ವಂದನಾ ಅವರು ಶುಕ್ರವಾರ ಆರಂಭವಾದ 63ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್‌ನಲ್ಲಿ ಮಹಿಳೆಯರ ರೇಸ್ ವಾಕ್‌ನಲ್ಲಿ ಕಂಚಿನ ಪದಕ ಗಳಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ವಂದನಾ ಅವರು 1 ಗಂಟೆ, 39.31 ನಿಮಿಷಗಳಲ್ಲಿ ಗುರಿ ಮುಟ್ಟಿ ಮೂರನೇ ಸ್ಥಾನ ಪಡೆದರು. ಹರಿಯಾಣದ ರವಿನಾ ಮತ್ತು ರಾಜಸ್ಥಾನದ ಮುನಿತಾ ಪ್ರಜಾಪತಿ ಅವರು ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದರು.

ಗುಲ್ವೀರ್ ದಾಖಲೆ: ಸರ್ವಿಸಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ ಪ್ರತಿನಿಧಿಸಿರುವ ಗುಲ್ವೀರ್ ಸಿಂಗ್ ಅವರು ಪುರುಷರ 5000 ಮೀಟರ್ಸ್ ಓಟದಲ್ಲಿ ನೂತನ ಕೂಟ ದಾಖಲೆ ನಿರ್ಮಿಸಿದರು. ಚಿನ್ನದ ಪದಕ ಜಯಿಸಿದರು.



ಮಹಿಳೆಯರ ಟ್ರಿಪಲ್ ಜಂಪ್‌ನಲ್ಲಿ ಚಿನ್ನ ಗೆದ್ದ ಕೇರಳದ ವಿ. ಶೀನಾ –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಏಷ್ಯನ್ ಗೇಮ್ಸ್ ಪದಕವಿಜೇತರೂ ಆಗಿರುವ ಗುಲ್ವೀರ್ (13ನಿ, 54.70ಸೆ) ಅವರು ಗುರಿ ಮುಟ್ಟಿದರು. 1994ರಲ್ಲಿ ಬಹಾದ್ದೂರ್ ಸಿಂಗ್ (13:54.72) ಅವರು ಮಾಡಿದ್ದ ದಾಖಲೆಯನ್ನು ಮೀರಿ ನಿಂತರು.

ಮಹಿಳೆಯರ ವಿಭಾಗದಲ್ಲಿ ಕೇರಳದ ವಿ. ಶೀನಾ ಅವರು ಟ್ರಿಪಲ್ ಜಂಪ್‌ನಲ್ಲಿ ಮೊದಲಿಗರಾದರು. ಹರಿಯಾಣದ ಸೀಮಾ ಅವರು ಡಿಸ್ಕಸ್ ಥ್ರೋನಲ್ಲಿ ಚಿನ್ನ ಗೆದ್ದರು.

ಪ್ರಿಯಾಂಕಾಗೆ ನಿರಾಶೆ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ರೇಸ್‌ವಾಕ್‌ನಲ್ಲಿ 41ನೇ ಸ್ಥಾನ ಪಡೆದಿದ್ದ ಪ್ರಿಯಾಂಕಾ ಗೋಸ್ವಾಮಿ ಇಲ್ಲಿ ನಿರಾಶೆ ಅನುಭವಿಸಿದರು. ಸ್ಪರ್ಧೆಯಲ್ಲಿ ಎರಡು ಲ್ಯಾಪ್ ಪೂರೈಸಿದ ನಂತರ ಅವರು ಹಿಂದೆ ಸರಿದರು. ಕಾರಣ ತಿಳಿದುಬಂದಿಲ್ಲ.

ಫಲಿತಾಂಶಗಳು: ಪುರುಷರು: 5000 ಮೀ ಓಟ: ಗುಲ್ವೀರ್ ಸಿಂಗ್ (ಎಸ್‌ಎಸ್‌ಸಿಬಿ; 13ನಿ,54,70ಸೆ)–1, ಸುನೀಲ್ ದಾವರ್ (ಮಧ್ಯಪ್ರದೇಶ) –2, ಲವ್‌ಪ್ರೀತ್ ಸಿಂಗ್ (ಎಎಸ್‌ಸಿಬಿ)–3. 20 ಕಿ.ಮೀ ರೇಸ್ ವಾಕ್: ಸರ್ವಿನ್ (ಎಸ್‌ಎಸ್‌ಸಿಬಿ; 1 ಗಂಟೆ, 25.35ನಿ)–1, ಅಮಿತ್ (ಹರಿಯಾಣ)–2, ಅರ್ಷಪ್ರೀತ್ ಸಿಂಗ್ –3.

ಮಹಿಳೆಯರು: 5000 ಮೀ ಓಟ: ಸೀಮಾ (ಹಿಮಾಚಲಪ್ರದೇಶ: 15ನಿ, 47.95ಸೆ)–1, ಸಂಜೀವನಿ ಜಾಧವ್ (ಮಹಾರಾಷ್ಟ್ರ)–2, ಲಿಲ್ಲಿ ದಾಸ್ (ರಾಜಸ್ಥಾನ)–3. 20 ಕಿ.ಮೀ ರೇಸ್ ವಾಕ್: ರವಿನಾ (ಹರಿಯಾಣ; 1ಗಂಟೆ, 35ನಿ,52ಸೆ)–1, ಮುನಿತಾ ಪ್ರಜಾಪತಿ (ರಾಜಸ್ಥಾನ)–2, ವಂದನಾ (ಕರ್ನಾಟಕ; 1ಗಂಟೆ, 39.31ನಿ) –3. ಡಿಸ್ಕಸ್ ಥ್ರೋ: ಸೀಮಾ (ಹರಿಯಾಣ; 54.89 ಮೀ)–1, ನಿಧಿ (ರಾಜಸ್ಥಾನ)–2, ಸಾನ್ಯಾ ಯಾದವ್ (ಹರಿಯಾಣ)–3. ಟ್ರಿಪಲ್ ಜಂಪ್: ವಿ. ಶೀನಾ (ಕೇರಳ; 13.27ಮೀ)–1, ಮಲ್ಲಾಲ ಅನೂಷಾ (ರಾಜಸ್ಥಾನ)–2, ಪಿ. ಬಬೀಶಾ (ತಮಿಳುನಾಡು)–3

ವಿಶ್ವ ಯುವ ಅಥ್ಲೆಟಿಕ್ಸ್: ಭಾರತದ ಆರತಿಗೆ ಕಂಚು

ಲಿಮಾ, ಪೆರು (ಪಿಟಿಐ): ಭಾರತದ ಆರತಿ, ವಿಶ್ವ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಮಹಿಳೆಯರ 10,000 ಮೀ. ರೇಸ್ ವಾಕ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆಯೊಡನೆ ಕಂಚಿನ ಪದಕ ಗೆದ್ದುಕೊಂಡರು.

17 ವರ್ಷದ ಆರತಿ 44ನಿ.39.39 ಸೆ.ಗಳಲ್ಲಿ ಗುರಿತಲುಪಿದರು. ಚೀನಾದ ಸ್ಪರ್ಧಿಗಳಾದ ಝುವೊಮಾ ಬೈಮಾ (43:26.60) ಮತ್ತು ಮೀಲಿಂಗ್ ಚೆನ್ (44:30.67) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು. ಗುರುವಾರ ರಾತ್ರಿ ಹೈಜಂಪ್ ಸ್ಪರ್ಧೆಯಲ್ಲಿ ಭಾರತದ ಪೂಜಾ ಸಿಂಗ್ 1.83 ಮೀ. ಜಿಗಿದು ಒಟ್ಟಾರೆ 9ನೇ ಸ್ಥಾನ ಪಡೆದು ಫೈನಲ್ ತಲುಪಿದ್ದರು. ಹರಿಯಾಣದ ಫತೇಬಾದ್ ಜಿಲ್ಲೆಯ ಪೂಜಾ, ಬಿ ಗುಂಪಿನಲ್ಲಿದ್ದು 1.83 ಮೀ. ಎತ್ತರ ಜಿಗಿದಿದ್ದರು.

ಭಾರತದ ಪೂಜಾ ಸಿಂಗ್, ಹೈಜಂಪ್ ಅರ್ಹತಾ ಸುತ್ತಿನಲ್ಲಿ ಒಂಬತ್ತನೇ ಸ್ಥಾನ ಪಡೆಯುವ ಮೂಲಕ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ.